

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 29 ಸೋಮವಾರ 2024

ಸಂಪುಟ: 44 | ಸಂಚಿಕೆ: 281 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಒಳಪುಟಗಳಲ್ಲಿ

ಹನುಮ ಧ್ವಜ ವಿವಾದ: ಜೆಡಿಎಸ್, ಬಿಜೆಪಿ, ಹಿಂದೂಪರ ಸಂಘಟನೆಗಳಿಂದ ಭಾರಿ ಪ್ರತಿಭಟನೆ; ಪೊಲೀಸರಿಂದ ಲಾಠಿ ಪ್ರಹಾರ, ಹಲವರಿಗೆ ಗಾಯ

ಮಂಡ್ಯದ ಕೆರಗೋಡು ಉದ್ವಿಗ್ನ

- ಹನುಮಧ್ವಜ ತೆಗೆಯದಂತೆ ಶನಿವಾರ ತಡರಾತ್ರಿಯಿಂದ ಆರಂಭವಾದ ಪ್ರತಿಭಟನೆ
- ಕಾರ್ಯಕರ್ತರ ಅಡ್ಡಿಯ ನಡುವೆಯೂ ಹನುಮ ಧ್ವಜ ಕೆಳಗಿಳಿಸಿದ ಪೊಲೀಸರು
- ಜೆಡಿಎಸ್– ಬಿಜೆಪಿ ಕಾರ್ಯಕರ್ತರಿಂದ ಭಾರಿ ಪ್ರತಿಭಟನೆ, ಮತ್ತೆ ಧ್ವಜ ಹಾರಿಸಲು ಆಗ್ರಹ
- ಘಟನೆ ಹಿಂದೆ ಗಣಿಗ ರವಿ ಇದ್ದಾರೆಂಬ ಆರೋಪ, ಶಾಸಕರ ಫ್ಲೆಕ್ಸ್ ಹರಿದು ಆಕ್ರೋಶ
- ಕೆರಗೋಡು ಗ್ರಾಮದಲ್ಲಿ 144 ಸೆಕ್ಷನ್ ಜಾರಿ, ಇಡೀ ಗ್ರಾಮ ಅಘೋಷಿತ ಬಂದ್
- ಪರಿಸ್ಥಿತಿ ಕೈಮೀರುತ್ತಿದ್ದಂತೆ ಪೊಲೀಸರ ಲಾಠಿ ಪ್ರಹಾರ, ರಾಷ್ಟ್ರಧ್ವಜ ಹಾರಿಸಿದ ಪೊಲೀಸರು



ಮಂಡ್ಯ, ಜ.28 (ಮೋಹನ್ ರಾಜ್)– ಹನುಮ ಧ್ವಜವನ್ನು ಇಳಿಸಿದ ಜಿಲ್ಲಾಡಳಿತ ಮತ್ತು ಪೊಲೀಸರ ಕ್ರಮವನ್ನು ಖಂಡಿಸಿ ರೊಚ್ಚಿಗೆದ್ದ ಹಿಂದೂಪರ ಕಾರ್ಯಕರ್ತರ ಚದುರಿಸಲು ಪೊಲೀಸರು ಲಾಠಿ ಚಾರ್ಜ್ ಮಾಡಿದ ಘಟನೆ ತಾಲೂಕಿನ ಕೆರಗೋಡು ಗ್ರಾಮದಲ್ಲಿ ಭಾನುವಾರ ಸಂಭವಿಸಿದೆ.

ಪೊಲೀಸರ ಲಾಠಿ ಪ್ರಹಾರದಿಂದ ಹಿಂದೂಪರ ಸಂಘಟನೆಗಳ ಹಲವರಿಗೆ ತಲೆ, ಕೈ–ಕಾಲುಗಳಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಅವರನ್ನು ಮಂಡ್ಯದ ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಲಾಗಿದೆ. ಪೊಲೀಸರು ಲಾಠಿ ಚಾರ್ಜ್ ನಡೆಸಿದ್ದರಿಂದ ರೊಚ್ಚಿಗೆದ್ದ ಹಿಂದೂಪರ ಕಾರ್ಯಕರ್ತರು ಬ್ಯಾರಿಕೇಡ್‌ಗಳನ್ನು ಭೇದಿಸಿದರು. ಅಲ್ಲದೆ ಲಾಠಿ ಚಾರ್ಜ್‌ಗೂ ಜಗ್ಗದೆ ಧ್ವಜಸ್ತಂಭದತ್ತ ನುಗ್ಗಲು ಯತ್ನಿಸಿದರು. ಇದರಿಂದ ಕೆರಗೋಡು ಗ್ರಾಮ ರಣಾಂಗಣವಾಗಿ ಮಾರ್ಪಟ್ಟಿತು.

ಅಯೋಧ್ಯೆ ರಾಮಮಂದಿರದಲ್ಲಿ ಬಾಲರಾಮನ ಪ್ರಾಣಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಕೆರಗೋಡು ರಂಗಮಂದಿರ ಮುಂಭಾಗದ ಧ್ವಜಸ್ತಂಭದಲ್ಲಿ ● 7ನೇ ಪುಟಕ್ಕೆ


ಅಶೋಕ್ ಸೇರಿ ಹಲವು ನಾಯಕರು ಪೊಲೀಸ್ ವಶಕ್ಕೆ

ಕೆರಗೋಡು ಗ್ರಾಮ ಪ್ರವೇಶಿಸಿದ ವಿಪಕ್ಷ ನಾಯಕ ಆರ್.ಅಶೋಕ್ ಸೇರಿದಂತೆ ಹಲವರನ್ನು ಪೊಲೀಸರು ವಶಕ್ಕೆ ಪಡೆದರು. ಅಲ್ಲದೆ ಶಾಸಕರಾದ ಡಾ.ಅಶ್ವತ್ಥ ನಾರಾಯಣ, ಛಲವಾದಿ ನಾರಾಯಣಸ್ವಾಮಿ, ಮಾಜಿ ಶಾಸಕರಾದ ಪ್ರೀತಮ್‌ಗೌಡ, ಸುರೇಶ್‌ಗೌಡ, ನಾರಾಯಣಗೌಡ, ಜೆಡಿಎಸ್ ಮುಖಂಡರಾದ ಬಿ.ಆರ್.ರಾಮಚಂದ್ರ, ಎಂ.ಎಸ್.ರಘುನಂದನ್, ಬಿಜೆಪಿ ಮುಖಂಡರಾದ ಡಾ.ಇಂದ್ರೇಶ್, ಅಶೋಕ್ ಜಯರಾಂ, ಸಚ್ಚಿದಾನಂದ ಸೇರಿದಂತೆ ಹಲವು ಮಂದಿಯನ್ನು ವಶಕ್ಕೆ ಪಡೆದು, ಅಜ್ಞಾತಸ್ಥಳಕ್ಕೆ ಕರೆದೊಯ್ದು, ಬಳಿಕ ಬಿಡುಗಡೆ ಮಾಡಲಾಯಿತು.

ಫೆ.9ಕ್ಕೆ ಮಂಡ್ಯ ಬಂದ್‌ಗೆ ಭಜರಂಗ ದಳ ಕರೆ


ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜವನ್ನು ಕೆಳಗೆ ಇಳಿಸಿದ್ದನ್ನು ಖಂಡಿಸಿ ಫೆಬ್ರವರಿ 9ರಂದು ಮಂಡ್ಯ ನಗರ ಬಂದ್‌ಗೆ ಭಜರಂಗದಳ ಕರೆ ನೀಡಿದೆ. ಜೆಡಿಎಸ್, ಬಿಜೆಪಿ, ಹಿಂದೂಪರ ಕಾರ್ಯಕರ್ತರು ಸೇರಿದಂತೆ ಹಲವು ಸಂಘಟನೆಗಳು ಬಂದ್‌ನಲ್ಲಿ ಪಾಲ್ಗೊಳ್ಳಲಿದ್ದು, ಇದರ ಜೊತೆಗೆ ನಾಳೆ (ಜ.29) ಮಂಡ್ಯ ಡಿಸಿ ಕಚೇರಿ ಎದುರು ಭಾರೀ ಪ್ರತಿಭಟನೆಯನ್ನು ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಹನುಮಧ್ವಜ ವಿಚಾರದಲ್ಲಿ ರಾಜಕೀಯ ಮಾಡಿಲ್ಲ



ಕೆರಗೋಡು ಗ್ರಾಮದಲ್ಲಿ ಹನುಮಧ್ವಜ ತೆರವು ವಿಚಾರದಲ್ಲಿ ರಾಜಕೀಯ ನಡೆಯುತ್ತಿರುವುದು ನಿಜ. ಆದರೆ, ಇದಕ್ಕೆ ಯಾರು ರಾಜಕಾರಣ ಬೆರಸುತ್ತಿದ್ದಾರೋ ಗೊತ್ತಿಲ್ಲ. ಇದರಲ್ಲಿ ನಾವಾಗಲೀ, ಸ್ಥಳೀಯ ಶಾಸಕರಾಗಲೀ ರಾಜಕೀಯ ಮಾಡಿಲ್ಲ. ಸಂವಿಧಾನದ ವಿರುದ್ಧವಾಗಿ ಧಾರ್ಮಿಕ ಬಾವುಟ ಹಾರಿಸಿರುವುದರಿಂದ ತೆರವುಗೊಳಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು. ನಗರದ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಪಂಚಾಯ್ತಿ ವ್ಯಾಪ್ತಿಯಲ್ಲಿ ರಾಷ್ಟ್ರಧ್ವಜ ಹಾರಿಸಬಹುದು. ಅದನ್ನು ಹೊರತುಪಡಿಸಿ ಸರ್ಕಾರಿ ಜಾಗದಲ್ಲಿ ಬೇರೆ ಧ್ವಜವನ್ನು ಹಾರಿಸುವಂತಿಲ್ಲ. ತ್ರಿವರ್ಣ ಧ್ವಜಕ್ಕೆ ಅನುಮತಿ ಪಡೆದು ಬೇರೆ ಧ್ವಜ ಹಾರಿಸೋದು ತಪ್ಪು. ನಾಳೆ ಬೆಳಗ್ಗೆ ಡಿಸಿ ಕಚೇರಿ ಮುಂದೆ ● 7ನೇ ಪುಟಕ್ಕೆ

ನಿತೀಶ್ ಕುಮಾರ್ 9ನೇ ಬಾರಿ ಬಿಹಾರ್ ಸಿಎಂ ಆಗಿ ಪ್ರಮಾಣವಚನ



ಪಾಟ್ನಾ, ಜ. 28– ಅನಿರೀಕ್ಷಿತ ಹಾಗೂ ಕ್ಷಿಪ್ರ ರಾಜಕೀಯ ಬೆಳವಣಿಗೆಗಳ ಮಧ್ಯೆ ಬಿಹಾರ ರಾಜ್ಯದಲ್ಲಿ ಜೆಡಿಯು ಮತ್ತು ಬಿಜೆಪಿ ಮೈತ್ರಿಯ ಸರ್ಕಾರ ಮತ್ತೆ ಅಸ್ತಿತ್ವಕ್ಕೆ ಬಂದಿದೆ. ನಿತೀಶ್ ಕುಮಾರ್ ಬಿಹಾರದಲ್ಲಿ 9ನೇ ಬಾರಿ ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದ್ದಾರೆ. ಬಿಹಾರ ರಾಜಧಾನಿ ಪಾಟ್ನಾದ ರಾಜಭವನದಲ್ಲಿ ಇಂದು ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ನಿತೀಶ್‌ಕುಮಾರ್ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಇದೇ ವೇಳೆ ಬಿಜೆಪಿ ಶಾಸಕ ಸಾಮ್ರಾಟ್ ಚೌಧರಿ ಅವರು ನೂತನ ಡಿಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ವಿಜಯ್‌ಕುಮಾರ್ ಸಿನ್ಹಾ, ಡಾ. ಪ್ರೇಮ್‌ಕುಮಾರ್, ವಿಜಯ್ ಕುಮಾರ್ ಚೌಧರಿ, ವಿಜೇಂದ್ರ ಪ್ರಸಾದ್ ಯಾದವ್, ಶ್ರವಣ್ ಕುಮಾರ್, ಸಂತೋಷ್ ಸುಮನ್ ಮತ್ತು ಸುಮಿತ್ ಕುಮಾರ್ ಸಿಂಗ್ ಅವರು ನೂತನ ಮೈತ್ರಿಸರ್ಕಾರದಲ್ಲಿ ಸಚಿವರಾಗಿ ಪದಗ್ರಹಣ ಮಾಡಿದ್ದಾರೆ. ರಾಜ್ಯಪಾಲರು ಇವರೆಲ್ಲರಿಗೂ ಪ್ರಮಾಣವಚನ ಬೋಧಿಸಿದ್ದಾರೆ.

ದಾಖಲೆ ಬರೆದ ನಿತೀಶ್ ಕುಮಾರ್: ಜೆಡಿಯು ಪಕ್ಷದ ಅಧ್ಯಕ್ಷ ನಿತೀಶ್ ಕುಮಾರ್ ದಾಖಲೆಯ 9ನೇ ಬಾರಿಗೆ ಸಿಎಂ ಆಗಿದ್ದಾರೆ. ಬಿಹಾರದಲ್ಲಿ ದೀರ್ಘ ● 7ನೇ ಪುಟಕ್ಕೆ



ಬದಲಾವಣೆ ಜಗದ ನಿಯಮ: ರಾಜಯೋಗಿನಿ ಬ್ರಹ್ಮಾಕುಮಾರಿ ಆಶಾಜೀ ಅಭಿಮತ



ಮೈಸೂರು, ಜ.28–ಬದಲಾವಣೆಯನ್ನು ಹೆಚ್ಚು ಜನ ಇಷ್ಟಪಡುವುದಿಲ್ಲ. ಕೆಲವರು ಬಲವಂತವಾಗಿ ಬದಲಾವಣೆ ಮಾಡಿಕೊಳ್ಳುತ್ತಾರೆ. ಇನ್ನು ಕೆಲವರು ಸಂತೋಷದಿಂದ ಬದಲಾವಣೆ ಮಾಡಿಕೊಳ್ಳುತ್ತಾರೆ. ಆದರೂ ಬದಲಾವಣೆ ಜಗದ ನಿಯಮ ಎಂದು ಆಡಳಿತಾಧಿಕಾರಿಗಳ ಸೇವಾ ವಿಭಾಗದ ಅಧ್ಯಕ್ಷರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಆಶಾಜೀ ಅಭಿಪ್ರಾಯಪಟ್ಟರು.

ಅವರು ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಲಿಂಗದೇವರಕೊಪ್ಪಲಿನಲ್ಲಿ ಅಧಿಕಾರಿಗಳಿಗೆ ಏರ್ಪಡಿಸಿದ್ದ 'ಸಮಯದ ಕರೆ–ಸಕಾರಾತ್ಮಕ ಬದಲಾವಣೆ' ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಆಡಳಿತಾಧಿಕಾರಿ ವೃತ್ತಿ ಜೀವನವು ಹಗ್ಗದ ಮೇಲಿನ ನಡಿಗೆಯಂತೆ, ಗುರಿಯೆಡೆಗೆ ಸಾಗುತ್ತಿದ್ದರೂ ಸವಾಲುಗಳನ್ನು ಎದುರಿಸಲು ತನ್ನಲ್ಲಿರುವ ಸಾಮರ್ಥ್ಯ ಮತ್ತು ಸಂಪನ್ಮೂಲಗಳನ್ನು ಸಮತೋಲನೆಯಿಂದ ವಿನಿಯೋಗಿಸಬೇಕಾಗುತ್ತದೆ. ಯಾವ ಕಡೆಗೆ ವಾಲಿದರೂ ಅಸಮತೋಲನ ಉಂಟಾಗಿ ಕೆಲಸದಲ್ಲಿ ಅಸಂತುಷ್ಟಿ ಮತ್ತು ಒತ್ತಡ ಕಾಣಬರುತ್ತವೆ. ಹಾಗಾಗಿ ಗುರಿಯೆಡೆಗೆ ದೃಷ್ಟಿಯಿದ್ದರೂ ಉತ್ತಮ ಫಲಿತಾಂಶಕ್ಕಾಗಿ ಸಮತೋಲನದ ಬಗ್ಗೆ ಗಮನ ಇಡಬೇಕಾಗುತ್ತದೆ ಎಂದರು.

ಬಿ.ಕೆ.ಹರೀಶ್ ಅಭಿಯಾನದ ಕಾರ್ಯಕ್ರಮದ ಬಗ್ಗೆ ವಿಚಾರ ಮಾಡಿಸಿದರು. ತಂಡದ ಚರ್ಚೆಯಲ್ಲಿ ಬಿ.ಕೆ.ಸೀತಾರಾಂ ಮೀನ, ಡಾ.ಆರ್.ಎಚ್.ಪವಿತ್ರ, ಬಿ.ಕೆ.ಗಿರೀಶ್ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಬಿ.ಕೆ.ಲಕ್ಷ್ಮೀಜೀ, ಬಿ.ಕೆ.ಅವಧೇಶ್ ಜಿ, ಬಿ.ಕೆ.ರಂಗನಾಥ್, ಬಿ.ಕೆ.ವೀಣಾ ವಿವಿಧ ಇಲಾಖೆಯ ಅಧಿಕಾರಿಗಳು, ನಾಲ್ಕು ಜಿಲ್ಲೆಯ ರಾಜಯೋಗ ಶಿಕ್ಷಕಿಯರು, ವಿದ್ಯಾರ್ಥಿಗಳು, ಓಂ ಶಾಂತಿ ನ್ಯೂಸ್ ಸರ್ವಿಸಸ್‌ನ ಬಿ.ಕೆ.ಆರಾಧ್ಯ ಹಾಜರಿದ್ದರು.

ತಮಿಳುನಾಡಲ್ಲಿ ಸಿಮೆಂಟ್ ಲಾರಿ, ಕಾರು ನಡುವೆ ಡಿಕ್ಕಿ: ಆರು ಮಂದಿ ದುರ್ಮರಣ

ಚೆನ್ನೈ: ಲಾರಿ ಮತ್ತು ಕಾರು ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಆರು ಮಂದಿ ಸಾವನ್ನಪ್ಪಿರುವ ಘಟನೆ ತಮಿಳುನಾಡಿನ ತೆಂಕಶಿ ಜಿಲ್ಲೆಯ ಪುಲಿಯಂಗುಡಿ ಬಳಿ ಭಾನುವಾರ ನಡೆದಿದೆ. ಟ್ರಕ್‌ನಲ್ಲಿ ಸಿಮೆಂಟ್ ಚೀಲಗಳನ್ನು ತುಂಬಲಾಗಿತ್ತು ಎಂದು ವರದಿಯಾಗಿದೆ.

ಅಪಘಾತದಿಂದಾಗಿ ಪುಲಿಯಂಗುಡಿದ ಐವರು ನಿವಾಸಿಗಳು ಸ್ಥಳದಲ್ಲೇ ಸಾವನ್ನಪ್ಪಿದ್ದರೆ, ಒಬ್ಬರು ಆಸ್ಪತ್ರೆಗೆ ಕರೆದೊಯ್ಯುವಾಗ ಕೊನೆಯುಸಿರೆಳೆದಿದ್ದಾರೆ. ಈ ಸಂಬಂಧ ಚೊಕ್ಕಂಪಟ್ಟಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಮೃತರೆಲ್ಲರೂ ಪುಲಿಯಂಗುಡಿಯ ಭಗವತಿ ಅಮ್ಮನ್ ದೇವಾಲಯ ಪ್ರದೇಶದವರಾಗಿದ್ದು, ಜನವರಿ 27 ರಂದು ಬಾಲಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಉತ್ಸವದಲ್ಲಿ ಪಾಲ್ಗೊಳ್ಳಲು ತೆರಳಿದ್ದರು ಎನ್ನಲಾಗಿದೆ. ಉತ್ಸವದಲ್ಲಿ ಪಾಲ್ಗೊಂಡ ನಂತರ ಕುಟ್ರಾಲಂ ಜಲಪಾತ ವೀಕ್ಷಿಸಿ ತಮ್ಮ ಊರಿಗೆ ಹಿಂದಿರುಗುತ್ತಿದ್ದಾಗ ಭೀಕರ ಅಪಘಾತ ಸಂಭವಿಸಿದೆ. ನಿದ್ರೆಯ ಮಂಪರಿನಲ್ಲಿದ್ದ ಕಾರು ಚಾಲಕ ಟ್ರಕ್‌ಗೆ ಡಿಕ್ಕಿ ಹೊಡೆದಿದ್ದು, ಲಾರಿಯಡಿ ಸಿಲುಕಿದ ಕಾರು ಕೆಲ ಅಡಿಗಳವರೆಗೆ ಪಲ್ಟಿಯಾಗಿದೆ ಎನ್ನಲಾಗಿದೆ. ಮೃತರ ದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ತಿರುನಲ್ವೇಲಿ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ.

ಬೋಗಾದಿ ರಸ್ತೆಯಲ್ಲಿ ರಾತ್ರೋರಾತ್ರಿ ತಲೆಯೆತ್ತಿದ ಮಾರಣಾಂತಿಕ ರೋಡ್ ಹಂಪ್ಸ್!!

ಹಂಪ್ಸ್ ನಿರ್ಮಾಣವಾಗಿ ಕೇವಲ 12 ಗಂಟೆಯಲ್ಲಿ 20ಕ್ಕೂ ಹೆಚ್ಚು ಅಪಘಾತ

● ಇಬ್ಬರ ಸ್ಥಿತಿ ಗಂಭೀರ; ಸಾರ್ವಜನಿಕರ ಆಕ್ರೋಶ ● ಬಣ್ಣ ಬಳಿದಿಲ್ಲ, ಸೂಚನಾ ಫಲಕ ಹಾಕದೇ ಇರುವುದರಿಂದ ಅನಾಹುತಕ್ಕೆ ಆಸ್ಪದ

ಮೈಸೂರು, ಜ.28(ಎಂಟಿವೈ)– ಮೈಸೂರು ಮಾನಸ ಗಂಗೋತ್ರಿ ಮುಖ್ಯ ದ್ವಾರದ ಬಳಿಯಿಂದ ಸ್ಪೀಚ್ ಅಂಡ್ ಹಿಯರಿಂಗ್ ಜಂಕ್ಷನ್‌ವರೆಗೆ ಮೈಸೂರು–ಬೋಗಾದಿ ರಸ್ತೆಯಲ್ಲಿ ರಾತ್ರೋರಾತ್ರಿ ನಿರ್ಮಾಣವಾಗಿರುವ ರೋಡ್ ಹಂಪ್ಸ್‌ಗಳು ವಾಹನ ಸವಾರರಿಗೆ ಮಾರಣಾಂತಿಕವಾಗಿ ಪರಿಣಮಿಸಿವೆ. ಈ ಹಂಪ್ಸ್‌ಗಳ ಹಾಕಿದ 12 ಗಂಟೆಯಲ್ಲೇ 20ಕ್ಕೂ ಹೆಚ್ಚು ಅಪಘಾತ ಸಂಭವಿಸಿದ್ದು, ಇಬ್ಬರು ದ್ವಿಚಕ್ರ ವಾಹನ ಸವಾರರಿಗೆ ಗಂಭೀರ ಗಾಯಗಳಾಗಿವೆ.

ಮಾನಸ ಗಂಗೋತ್ರಿ ದ್ವಾರ(ಕುವೆಂಪು ಪ್ರತಿಮೆ ಮುಂಭಾಗದ ರಸ್ತೆ)ದ ತಿರುವು ಸೇರಿದಂತೆ ಸ್ಪೀಚ್ ಅಂಡ್ ಹಿಯರಿಂಗ್ ವೃತ್ತದ ಬಳಿ ಇಳಿಜಾರಿನಲ್ಲಿ ವಾಹನಗಳ ವೇಗಕ್ಕೆ ಕಡಿವಾಣ ಹಾಕಲು ಶನಿವಾರ ಸಂಜೆ ರೋಡ್ ಹಂಪ್ಸ್ ಹಾಕಲಾಗಿದೆ. ಆದರೆ, ಹಂಪ್ಸ್‌ಗೆ ಬಿಳಿ ಬಣ್ಣ ಬಳಿಯದೇ ಇರುವುದು, ಯಾವುದೇ ಸೂಚನಾ ಫಲಕ ಅಳವಡಿಸದೇ ಇರುವುದು ಅಪಘಾತಕ್ಕೆ ಕಾರಣವಾಗಿದೆ.

ಪ್ರತಿದಿನ ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ದಿಢೀರ್ ಸೃಷ್ಟಿಯಾಗಿರುವ ಹಂಪ್ಸ್ ಅರಿಯದೇ, ವೇಗವಾಗಿಯೇ ವಾಹನ ಚಲಾಯಿಸಿ ಹಂಪ್ಸ್ ಹಾರಿಸಿ ಅನಾಹುತ ಸಂಭವಿಸಿವೆ. ಶನಿವಾರ ರಾತ್ರಿ 8 ಗಂಟೆಯಿಂದ ಮುಂಜಾನೆ 6 ಗಂಟೆವರೆಗೆ ಈ ರಸ್ತೆಯಲ್ಲಿ ಅಪಾಯಕಾರಿ ಹಂಪ್ಸ್‌ನಿಂದಾಗಿ 20ಕ್ಕೂ ಹೆಚ್ಚು ಅಪಘಾತಗಳು ಸಂಭವಿಸಿವೆ. ಹಲವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದರೆ, ಇಬ್ಬರ ಸ್ಥಿತಿ ಗಂಭೀರವಾಗಿದೆ. ಹಂಪ್ಸ್‌ನಲ್ಲಿ ಬೈಕ್‌ನಲ್ಲಿ ವೇಗವಾಗಿ ಬಂದು, ನಿಯಂತ್ರಣ ಕಳೆದುಕೊಂಡು ಬಿದ್ದ ಸವಾರರಿಬ್ಬರ ತಲೆಗೆ ತೀವ್ರ ಗಾಯವಾಗಿ, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮುಂಜಾನೆ 2 ಗಂಟೆಯಲ್ಲಿ ಬೈಕ್‌ನಲ್ಲಿ ಮೈಸೂರಿನಿಂದ ಮರಟಿಕ್ಯಾತನಹಳ್ಳಿಗೆ ಹೋಗುತ್ತಿದ್ದ ಅದೇ ಗ್ರಾಮದ ಯಶ್ವಂತ್ ಹಂಪ್ಸ್‌ನಲ್ಲಿ ಬೈಕ್‌ನಿಂದ ಕೆಳಗೆ ಬಿದ್ದಿದ್ದಾರೆ. ಅವರ ತಲೆಗೆ ಗಂಭೀರ ಗಾಯವಾಗಿ ತೀವ್ರ ರಕ್ತಸ್ರಾವವಾಗಿದೆ. ಬೈಕ್ ಸವಾರ ಬಿದ್ದಿರುವುದನ್ನು ಗಮನಿಸಿದ ಕೆಲ ವಾಹನ ಸವಾರರು ಹಾಗೂ ಗಸ್ತು ತಿರುಗುತ್ತಿದ್ದ ಪೊಲೀಸರು ಗಾಯಾಳು ಯಶ್ವಂತ್ ಅವರನ್ನು ಕೆ.ಆರ್.ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಯಶ್ವಂತ್ ಅವರ ತಲೆಗೆ ಗಂಭೀರವಾದ ಗಾಯಗಳಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ಮತ್ತೊಂದು ಪ್ರಕರಣದಲ್ಲಿ ಶನಿವಾರ ಸಂಜೆ 6 ಗಂಟೆಯಲ್ಲಿ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ಕಂಡಂಗಲ ಗ್ರಾಮದ ಬಲ್ಲಡಿಚೆಂಡ ಶಿವನ್ ಎಂಬ ಯುವಕ ಬೋಗಾದಿ ಕಡೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಹಂಪ್ಸ್‌ನಲ್ಲಿ ನಿಯಂತ್ರಣ ಕಳೆದುಕೊಂಡು ಹಾರಿ ಬಿದ್ದಿದ್ದಾರೆ. ಅವರ ತಲೆಗೂ ಗಂಭೀರ ಗಾಯವಾಗಿದ್ದು, ಕಾಮಾಕ್ಷಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ಬಾನೆಟ್ ಪುಡಿ ಪುಡಿ: ದಿಢೀರ್ ತಲೆಎತ್ತಿದ್ದ ಹಂಪ್ಸ್ ಅರಿವಿಲ್ಲದ ಕೆಲವು ಕಾರುಗಳ ಚಾಲಕರು ವೇಗವಾಗಿ ಬಂದು ನಿಯಂತ್ರಣ ತಪ್ಪಿ ಹಾರಿಸಿದಾಗ ಕಾರುಗಳ ಮುಂಭಾಗದ ಬಾನೆಟ್ ಹಂಪ್ಸ್‌ಗೆ ಬಡಿದು ಹಾನಿಯಾಗಿದೆ. ಸುಮಾರು 6 ರಿಂದ 8 ಕಾರುಗಳ ಬಾನೆಟ್‌ಗೆ ಹಾನಿಯಾಗಿದೆ.

ಸಾರ್ವಜನಿಕರ ಆಕ್ರೋಶ: ರಸ್ತೆಯಲ್ಲಿ ಹಂಪ್ಸ್ ನಿರ್ಮಿಸಿದ ನಂತರ ವಾಹನ ಸವಾರರ ಗಮನ ಸೆಳೆಯಲು ಯಾವುದೇ ಸೂಚನಾ ಫಲಕ ಹಾಕುವ ಇಲ್ಲವೆ ಬಿಳಿ ಪಟ್ಟಿ ಎಳೆಯಲು ಕ್ರಮ ಕೈಗೊಂಡಿಲ್ಲ. ಹಂಪ್ಸ್‌ಗೆ ಬಣ್ಣ ಬಳಿದಿದ್ದರೆ ವಾಹನ ಸವಾರರು ಜಾಗೃತರಾಗುತ್ತಿದ್ದರು. ಇದರಿಂದ ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರ ಗಮನಕ್ಕೆ ಬರುತ್ತಿತ್ತು. ಆಗ ಅಪಘಾತವಾಗುವುದನ್ನು ತಡೆಗಟ್ಟಲು ಸಾಧ್ಯವಾಗುತ್ತಿತ್ತು. ಆದರೆ ರಾತ್ರೋರಾತ್ರಿ ಹಂಪ್ಸ್ ಹಾಕಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ಇರುವುದರಿಂದ ಅಮಾಯಕರಿಗೆ ಮಾರಣಾಂತಿಕವಾಗಿ ಈ ಹಂಪ್ಸ್ ಪರಿಣಮಿಸಿವೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮೈಸೂರು–ಬೋಗಾದಿ ರಸ್ತೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮುಂದೆ ಹೊಸದಾಗಿ ಹಂಪ್ಸ್ ಹಾಕಿರುವುದು.

> "ಪೊಲೀಸರಿಗೆ ಅರಿವಿಲ್ಲದೆ ಇಲ್ಲಿ ಹಂಪ್ಸ್ ನಿರ್ಮಾಣವಾಗಿದ್ದಾದರೂ ಹೇಗೆ? ನಜರ್‌ಬಾದ್‌ನ ಮಲೆಮಹದೇಶ್ವರ ರಸ್ತೆಯಲ್ಲಿ ಹೀಗೆ ರಾತ್ರಿ ವೇಳೆ ಏಕಾಏಕಿ ತಲೆಯೆತ್ತಿದ್ದ ಅವೈಜ್ಞಾನಿಕ ರೋಡ್ ಹಂಪ್ಸ್‌ನಲ್ಲಿ ಪತ್ರಕರ್ತರೊಬ್ಬರು ಬಿದ್ದು ತೀವ್ರವಾಗಿ ಗಾಯಗೊಂಡರು. ಅವರ ತೋಳಿನ ಮೂಳೆ ಮುರಿದು, ಅವರು ಚೇತರಿಸಿಕೊಳ್ಳಲು ತಿಂಗಳುಗಳೇ ಬೇಕಾಯಿತು. ಅಲ್ಲಿಯೂ ಸಹ ಪೊಲೀಸರು ಹಂಪ್ಸ್ ಹಾಕಿರುವುದು ನಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳಿದರು. ಹಾಗಿದ್ದರೆ ಕ್ರಮ ಕೈಗೊಳ್ಳಬೇಕಿತ್ತು. ಆದರೆ ಯಾವುದೂ ಆಗಲಿಲ್ಲ. ಮೈಸೂರಿಗರೇ ಎಚ್ಚರ, ನಿಮ್ಮ ಜೀವಕ್ಕೆ ನೀವೇ ಜವಾಬ್ದಾರರು!!

> **ತಪ್ಪಿತಸ್ಥರ ವಿರುದ್ಧ ಕ್ರಮ**
> ಬೋಗಾದಿ ರಸ್ತೆಯಲ್ಲಿ ಹಂಪ್ಸ್ ಅಳವಡಿಸಲು ಯಾರು ಅನುಮತಿ ನೀಡಿದ್ದಾರೆ? ಹಂಪ್ಸ್ ಹಾಕಲು ಅನುಮತಿ ಪಡೆದಿದ್ದಾರಾ? ಪರಿಶೀಲಿಸಲಾಗುವುದು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು
> –ಜಾಹ್ನವಿ, ಡಿಸಿಪಿ

ಜಾತಿಗಣತಿ ವರದಿಯನ್ನು ಸ್ವೀಕರಿಸ್ತೇನೆ, ಐದು ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿದ್ದು ತಪ್ಪೇ?

ಚಿತ್ರದುರ್ಗ: ಜಾತಿಗಣತಿ ವರದಿಯನ್ನು ಸ್ವೀಕಾರ ಮಾಡಿಯೇ ಸಿದ್ಧ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಚಿತ್ರದುರ್ಗದ ಮಾದಾರ ಚನ್ನಯ್ಯ ಮಠದ ಬಳಿಯ ಮೈದಾನದಲ್ಲಿ ನಡೆದ ಶೋಷಿತರ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, ಕಾಂತರಾಜು ಸಮಿತಿ ರಚನೆ ಮಾಡಿದ್ದು ನಾನು ಮುಖ್ಯಮಂತ್ರಿಯಾಗಿದ್ದಾಗ. 2018ರಲ್ಲಿ ನಾನು ಸಿಎಂ ಸ್ಥಾನದಿಂದ ಇಳಿಯುವಾಗ ವರದಿ ಪೂರ್ಣ ಆಗಿರಲಿಲ್ಲ.

ನಂತರ ಬಂದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಮಾಜಿ ಸಿಎಂಗಳಾದ ಹೆಚ್‌ಡಿ. ಕುಮಾರಸ್ವಾಮಿ ಮತ್ತು ನಂತರ ಬಂದ ಬಿಜೆಪಿ ಸರ್ಕಾರದಲ್ಲಿ ಬಸವರಾಜ ಬೊಮ್ಮಾಯಿ ಅವರು ವರದಿ ಪಡೆಯಲಿಲ್ಲ ಈಗ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆಯವರಲ್ಲಿ ವರದಿ ಕೊಡಿ ಅಂತ ನಾನು ಹೇಳಿದ್ದೇನೆ. ಲೋಪದೋಷ ಇದ್ದರೆ ತಜ್ಞರ ಸಲಹೆ ಪಡೆಯುತ್ತೇವೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ರಾಜ್ಯಗಳಲ್ಲಿ ಜಾತಿ ಗಣತಿ ವರದಿಯನ್ನು ತರುತ್ತೇವೆ ಎಂದು ನಾವು ಹೇಳಿದ್ದೇವೆ. ನೀವು ಕೊಟ್ಟ ಎಲ್ಲ ಬೇಡಿಕೆಗಳಿಗೆ ಸಹಮತ ಇದೆ. ಸಚಿವ ಸಂಪುಟದಲ್ಲಿ ಇಟ್ಟು ತೀರ್ಮಾನ ಮಾಡುತ್ತೇವೆ. ನಾನು ಯಾವಾಗಲೂ ನಿಮ್ಮ ಪರ ಇರುತ್ತೇನೆ. ರಾಷ್ಟ್ರಪತಿ ದ್ರೌಪದಿ ಮುರ್ಮ ಅವರನ್ನು ಸಂಸತ್ತು ಭವನ ಉದ್ಘಾಟನೆಗೆ ಕರೆಯಲಿಲ್ಲ. ರಾಮಂದಿರ ಉದ್ಘಾಟನೆಗೂ ಕರೆಯಲಿಲ್ಲ ಎಂದು ಬಿಜೆಪಿ ವಿರುದ್ಧ ಇದೇ ಸಂದರ್ಭದಲ್ಲಿ ಸಿಎಂ ವಾಗ್ದಾಳಿ ನಡೆಸಿದರು.

ಸಮಾಜದಲ್ಲಿ ಅಸಮಾನತೆ, ನಿರಂತರ ಶೋಷಣೆ: ಕೆಲವು ಶಕ್ತಿಗಳು ನನ್ನನ್ನು ವಿರೋಧಿಸುತ್ತಿವೆ. ಇದೊಂದು ಐತಿಹಾಸಿಕ ಸಮಾವೇಶ. ಸಮಾಜದಲ್ಲಿ ಹಿಂದಿನಿಂದಲೂ ಶೋಷಣೆ ನಡೆಯುತ್ತಲೇ ಇದೆ, ಇದಕ್ಕೆ ಜಾತಿ ವ್ಯವಸ್ಥೆಯೇ ಕಾರಣ. ಈ ಜಾತಿ ವ್ಯವಸ್ಥೆಯಿಂದ ನಿರಂತರವಾಗಿ ಶೋಷಣೆ ನಡೆದಿದೆ. ಸಂವಿಧಾನದಿಂದಾಗಿ ಶೋಷಣೆ ಕಡಿಮೆಯಾಗಿದೆ. ಮೀಸಲಾತಿಯನ್ನು ಆರ್‌ಎಸ್‌ಎಸ್, ಬಿಜೆಪಿ ವಿರೋಧ ಮಾಡುತ್ತಿದೆ. ಕೆಲವು ಶಕ್ತಿಗಳು ನನ್ನನ್ನು ವಿರೋಧ ಮಾಡುತ್ತಿವೆ ಎಂದು ಕಿಡಿಕಾರಿದ್ದಾರೆ.

ಕುರಿ ಕಾಯುವವನ ಮಗ ಸಿಎಂ ಆದ ಎಂದು ವಿರೋಧ ಮಾಡುತ್ತಾರೆ. 14 ಬಜೆಟ್ ಮಂಡಿಸಿದವನು ನಾನು. ಅನ್ನಭಾಗ್ಯ, ಶೂಭಾಗ್ಯ, ಪಶು ಭಾಗ್ಯ ಕೊಟ್ಟಿದ್ದು ತಪ್ಪೇ? ಇವತ್ತು ಐದು ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿದ್ದು ತಪ್ಪೇ? ಇದಕ್ಕೆ ನನ್ನನ್ನು ವಿರೋಧ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ.

ಇದು ಸರ್ಕಾರ, ಪಕ್ಷದ ಕಾರ್ಯಕ್ರಮವಲ್ಲ. ಸಮಾಜದಲ್ಲಿ ಶೋಷಿತರು ಸಿಂಹಪಾಲಿದ್ದಾರೆ. ಶತಶತಮಾನಗಳಿಂದ ಶೋಷಣೆಗೊಳಗಾಗಿದ್ದಾರೆ. ಶತಮಾನಗಳಿಂದ ದೌರ್ಜನ್ಯಕ್ಕೊಳಗಾಗಿದ್ದಾರೆ. ಸಮಾಜದಲ್ಲಿ ಶೋಷಣೆ ನಡೆಯುತ್ತಲೇ ಇದೆ. ಇದಕ್ಕೆ ಕಾರಣ ಜಾತಿ ವ್ಯವಸ್ಥೆ. ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದಾರೆ. ಹಾಗಾಗಿ ಸಮಾಜದಲ್ಲಿ ಅಸಮಾನತೆ ಕಾಣುತ್ತಿದೆ ಎಂದಿದ್ದಾರೆ.



ಚಿತ್ರದುರ್ಗದ ಮಾದಾರ ಚನ್ನಯ್ಯ ಮಠದ ಬಳಿಯ ಮೈದಾನದಲ್ಲಿ ನಡೆದ ಶೋಷಿತರ ಜಾಗೃತಿ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ಚಿತ್ರದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮರ್, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ದಿನೇಶ್ ಗುಂಡೂರಾವ್, ಜಮೀರ್ ಅಹಮದ್ ಇನ್ನಿತರರನ್ನು ಕಾಣಬಹುದು.

ಕಾರ್ತಿಕ್ ಮಹೇಶ್ ಬಿಗ್‌ಬಾಸ್ ಸೀಸನ್ 10ರ ವಿನ್ನರ್



ಬೆಂಗಳೂರು, ಜ.28– ಬಿಗ್‌ಬಾಸ್ ಕನ್ನಡ ಸೀಸನ್ 10ರ ವಿಜೇತರಾಗಿ ಕಾರ್ತಿಕ್ ಮಹೇಶ್ ಹೊರಹೊಮ್ಮಿದ್ದಾರೆ. ಆ ಮೂಲಕ ಬಿಗ್‌ಬಾಸ್ ಟ್ರೋಫಿ, 50 ಲಕ್ಷ ರೂ. ನಗದು, ಮಾರುತಿ ಸುಜುಕಿ ಬ್ರೆಜಾ ಕಾರು ಮತ್ತು ಬೌನ್ಸ್ ಇನ್ಫಿನಿಟಿ ಎಲೆಕ್ಟ್ರಿಕ್ ಸ್ಕೂಟರ್ ಅನ್ನು ತನ್ನದಾಗಿಸಿಕೊಂಡಿದ್ದಾರೆ. 110 ದಿನಕ್ಕೂ ಹೆಚ್ಚು ದಿನಗಳ ಕಾಲ ನಡೆದ ಸೀಸನ್ 10ರ ಬಿಗ್‌ಬಾಸ್‌ನಲ್ಲಿ 17ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಅಂತಿಮ ಕಣದಲ್ಲಿ ಕಾರ್ತಿಕ್ ಮಹೇಶ್, ವಿನಯ್ ಗೌಡ, ಸಂಗೀತಾ ಶೃಂಗೇರಿ, ತುಕಾಲಿ ಸಂತೋಷ್, ಡ್ರೋನ್ ಪ್ರತಾಪ್ ಹಾಗೂ ವರ್ತೂರ್ ಸಂತೋಷ್ ಇದ್ದರು. ಮೊದಲಿಗೆ ಶನಿವಾರ ತುಕಾಲಿ ಸಂತೋಷ್ ಎಲಿಮಿನೇಟ್ ಆಗಿದ್ದರು. ಭಾನುವಾರದ ಕಾರ್ಯಕ್ರಮದಲ್ಲಿ ಮೊದಲಿಗೆ ವರ್ತೂರ್ ಸಂತೋಷ್, ನಂತರ ವಿನಯ್ ಗೌಡ ಹಾಗೂ ಸಂಗೀತಾ ಮನೆಯಿಂದ ನಿರ್ಗಮಿಸಿದರು. ಅಂತಿಮವಾಗಿ ಕಿಚ್ಚ ಸುದೀಪ್ ಮಹೇಶ್ ಅವರ ಕೈ ಎತ್ತುವ ಮೂಲಕ ವಿಜೇತರನ್ನು ಘೋಷಿಸಿದರು. ಮಹೇಶ್ ಬಿಗ್‌ಬಾಸ್ ವಿನ್ನರ್ ಆಗಿ ಹೊರಹೊಮ್ಮಿದರೆ, ಡ್ರೋನ್ ಪ್ರತಾಪ್ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು.



ಮೈಸೂರಿನ ನರಸಿಂಹರಾಜ ಮೊಹಲ್ಲಾದಲ್ಲಿರುವ ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯದಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯದ ಅಧ್ಯಕ್ಷರು, ಟಿಎನ್‌ಎನ್ ಅಕಾಡೆಮಿ ಫೋರಂ ಸಂಸ್ಥಾಪಕರು ಹಾಗೂ ಕಾಂಗ್ರೆಸ್ ಮುಖಂಡರೂ ಆದ ಎಂ.ಪ್ರಫುಲ್ ಕುಮಾರ್ ಧ್ವಜಾರೋಹಣ ನೆರವೇರಿಸಿ, ಮಾತನಾಡಿದರು. ಶ್ರೀಮತಿ ಆಶಾ ಮಂಜುನಾಥ್, ಕಾರ್ಯದರ್ಶಿ ಪಾಟೀಲ್, ಖಜಾಂಚಿ ಪುಟ್ಟರಾಜು, ನಿಲಯ ಪಾಲಕರಾದ ಬಿ.ಪ್ರಸಾದ್ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

ಮನೆಬಾಗಿಲು ಮೀಟಿ ಚಿನ್ನಾಭರಣ, ಕಳವು

ಮೈಸೂರು, ಜ.28(ಎಸ್‌ಪಿಎನ್)– ಮನೆಯಲ್ಲಿ ಯಾರು ಇಲ್ಲದ ವೇಳೆ ಮನೆಯ ಬಾಗಿಲು ಮೀಟಿ ಒಳನುಗ್ಗಿರುವ ಕಳ್ಳರು, ರೂಂನ ವಾರ್ಡ್‌ರೊಬ್‌ನಲ್ಲಿದ್ದ 9 ಗ್ರಾಂ ಚಿನ್ನದುಂಗರ, 4 ಜೊತೆ ಬೆಳ್ಳಿಚೈನ್ ಹಾಗೂ 12 ಸಾವಿರ ನಗದು ಸೇರಿದಂತೆ ಒಟ್ಟು 70 ಸಾವಿರ ಮೌಲ್ಯದ ವಸ್ತುಗಳನ್ನು ಕಳ್ಳತನ ಮಾಡಿ ಪರಾರಿಯಾಗಿರುವ ಘಟನೆ ಶಾಂತವೇರಿ ಗೋಪಾಲಗೌಡ ನಗರದಲ್ಲಿ ಶನಿವಾರ ನಡೆದಿದೆ.

ಇಲ್ಲಿನ ನಿವಾಸಿ ಎಂ.ಜಿ.ಹೇಮಂತ್ ಎಂಬುವರ ಮನೆಯಲ್ಲಿ ಕಳ್ಳತನವಾಗಿದೆ. ಇವರು ಖಾಸಗಿ ಕಂಪನಿಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಮಾಡಿದರೆ, ಬೆಳಗ್ಗೆ ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಹೆಂಡತಿ ಶಿಲ್ಪ ಖಾಸಗಿ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ. ಜ.27ರಂದು ಶಿಲ್ಪ ಅವರು ಕೆಲಸ ಮಾಡುತ್ತಿದ್ದ ಆಸ್ಪತ್ರೆಗೆ ರಜೆ ಇದ್ದ ಕಾರಣ ತಮ್ಮ ಮಗನನ್ನು ಕರೆದುಕೊಂಡು ತವರು ಮನೆಗೆ ಹೋಗಿದ್ದರು. ನಾನು ಸೆಕ್ಯೂರಿಟಿ ಕೆಲಸ ಮುಗಿಸಿ ಭಾನುವಾರ ಬೆಳಗ್ಗೆ ಮನೆಗೆ ಬಂದು ನೋಡಿದಾಗ ಮನೆಯಲ್ಲಿ ಕಳ್ಳತನವಾಗಿರುವುದು ಕಂಡು ಬಂತು. ಮನೆಯ ಒಳಗೆ ಹೋಗಿ ನೋಡಿದಾಗ ರೂಂನಲ್ಲಿದ್ದ ವಾರ್ಡ್‌ರೊಬ್ ಬಾಗಿಲು ತೆರೆದಿದ್ದು, ಬಟ್ಟೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿದ್ದವು. ತಕ್ಷಣ ನನ್ನ ಹೆಂಡತಿ ಶಿಲ್ಪರಿಗೆ ಮೊಬೈಲ್ ಕರೆ ಮಾಡಿದಾಗ ವಾರ್ಡ್‌ರೊಬ್‌ನಲ್ಲಿ ಚಿನ್ನದ ಉಂಗುರ. 4 ಜೊತೆ ಬೆಳ್ಳಿ ಕಾಲ್‌ಚೈನ್ ಹಾಗೂ 12 ಸಾವಿರ ರೂ. ನಗದು ಇತ್ತು ಎಂದು ಮಾಹಿತಿ ನೀಡಿದರು. ಒಟ್ಟಾರೆ 70 ಸಾವಿರ ಮೌಲ್ಯದ ನಗದು, ಚಿನ್ನಾಭರಣ ಕಳ್ಳತನವಾಗಿರುವ ಬಗ್ಗೆ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪ್ರಕರಣ ದಾಖಸಿಕೊಂಡ ಪೊಲೀಸರು, ಸ್ಥಳ ಪರಿಶೀಲನೆ ನಡೆಸಿ, ಐಪಿಸಿ ಕಲಂ 457, 380 ರಿತ್ಯಾ ಪ್ರಕರಣ ದಾಖಲಿಸಿ, ತನಿಖೆ ಮುಂದುವರೆಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.1.2024 ಸೋಮವಾರ, ಮಳೆ ನಕ್ಷತ್ರ: ಶ್ರವಣ 24.1.2024 ರಿಂದ 05.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಶಾರದಾ ವಿಲಾಸ್ ಕಾಲೇಜು** : 'ಸಂಶೋಧನಾ ವಿಧಾನದಲ್ಲಿ ಇತ್ತೀಚಿನ ಪ್ರವೃತ್ತಿಗಳು' ವಿಷಯ ಕುರಿತು ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರ, ಸ್ಥಳ: ಸೆಂಟನರಿ ಹಾಲ್, ಎಸ್‌ವಿಇಐ, ಬೆಳಗ್ಗೆ 9.30ಕ್ಕೆ

■ **ರಾಮ್‌ಸನ್ಸ್ ಬೊಂಬೆ ಮನೆ** : ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಯುವ ಚೇತನಾ ಫೌಂಡೇಶನ್, ಕ್ವಸ್ಟ್ ಆಲೈಯನ್ಸ್** : ವರ್ಷದ ಉತ್ತಮ ಶಿಕ್ಷಕರ ಪ್ರಶಸ್ತಿ ಪ್ರದಾನ ಸಮಾರಂಭ–2023–24, ಮುಖ್ಯ ಅತಿಥಿಗಳು: ಡಾ. ಜೆ.ವಿ. ನಂದನಕುಮಾರ್, ಉಷಾ ರಘುಪತಿ, ಸಿ.ಎಲ್, ಗೌಡ, ಸ್ಥಳ: ರೋಟರಿ ಭವನ, ಜೆಎಲ್‌ಬಿ ರಸ್ತೆ, ಮುಡಾ ಕಚೇರಿ ಹತ್ತಿರ, ಬೆಳಗ್ಗೆ 10 ಗಂಟೆಗೆ.

■ **ಸಾಹಿತ್ಯ ಅಕಾಡೆಮಿ, ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರ, ಕನ್ನಡ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು** : 'ಕನ್ನಡ ಸಾಹಿತ್ಯ ಸಂಶೋಧನೆಯ ವಿವಿಧ ಆಯಾಮಗಳು ಕುರಿತು ವಿಚಾರ ಸಂಕಿರಣ, ಸ್ವಾಗತ ಭಾಷಣ: ಸಾಹಿತ್ಯ ಅಕಾಡೆಮಿಯ ಆಫೀಸರ್ ಇನ್‌ಚಾರ್ಜ್ ಎಸ್. ರಾಜ್‌ಮೋಹನ್, ಉದ್ಘಾಟನಾ ಭಾಷಣ: ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಚಾರ್ಯರಾದ ಬಿ.ವಿ. ವಸಂತಕುಮಾರ್, ಅಧ್ಯಕ್ಷೀಯ ಭಾಷಣ: ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸಂಚಾಲಕ ಬಸವರಾಜ ಕಲ್ಗುಡಿ, ಗೌರವ ಅತಿಥಿ: ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರದ ಸಂಯೋಜಕರಾದ ಕಲಾಶ್ರೀ ಹೆಚ್.ಎಂ., ಸ್ಥಳ: ಸ್ನಾತಕೋತ್ತರ ಕೇಂದ್ರ ಸೆಮಿನಾರ್ ಹಾಲ್, ಮಹಾರಾಣಿ ಮಹಿಳಾ ಕಲಾ ಕಾಲೇಜು, ಬೆಳಗ್ಗೆ10 ಗಂಟೆಗೆ.

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ** : ದಿ॥ ರಾಜಶೇಖರ ಕೋಟಿಯವರ ಸ್ಮರಣಾರ್ಥ 6ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಮತ್ತು ಅಭಿನಂದನಾ ಸಮಾರಂಭ, ಅಧ್ಯಕ್ಷತೆ: ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಕ್ಯಾಲೆಂಡರ್ ಲೋಕಾರ್ಪಣೆ: ಶಾಸಕರುಗಳಾದ ಹೆಚ್.ಎಂ. ಗಣೇಶ್‌ಪ್ರಸಾದ್, ದರ್ಶನ್ ಧ್ರುವನಾರಾಯಣ, ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಚಂದ್ರಶೇಖರ ತಾಳ್ಯ, 6.15 ಗೀತಾರಾಧನ, 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ: ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.05 ನೆನಪಿನಂಗಳ– ಸಾಹಿತಿ ಡಾ. ಪ್ರಭುಶಂಕರ್ ಅವರೊಂದಿಗೆ ಡಾ. ಜಿ.ಹೆಚ್. ನಾಯಕ್ ಅವರು ನಡೆಸಿದ ಸಂದರ್ಶನ, 10.00 ಎಂ.ಎಸ್. ಶೀಲಾ– ಹಾಡುಗಾರಿಕೆ.

ಮಧ್ಯಾಹ್ನ: 12.30 ದೇವರನಾಮ: ಕವಿತಾ ಕೃಷ್ಣಮೂರ್ತಿ, ಅಜಯ್ ವಾರಿಯರ್, 12.45 ನಮ್ಮ ಆರೋಗ್ಯ: ರುಮೆಟಾಯ್ಡ್ ಸಂಧಿವಾತ: ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು, ಡಾ. ಮಹಾಬಲೇಶ್ವರ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು, 2.35 ರಾಮಾಯಣ ರಸ ಪ್ರಸಂಗಗಳು. ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಕಾವ್ಯದಿಂದ ಆಯ್ದ ಭಾಗಗಳ ವಾಚನಾಭಿನಯ. ಪ್ರಸ್ತುತಿ: ಶ್ರೀ ಗಜಾನನ ಯುವಕ ಮಂಡಲ. ನಿರ್ಮಾಣ ಟಿ.ವಿ. ವಿದ್ಯಾಶಂಕರ್, 3.00 ಡಾ. ಉಮಯಾಳಪುರಂ ಕೆ. ಶಿವರಾಮನ್– ಲಯ ವಿನ್ಯಾಸ.

ಸಂಜೆ: 4.00 ಮಹಿಳಾರಂಗ: ಡಾಕ್ಟರ್ ಸಮಯ, ವಿಷಯ: ಮಹಿಳೆಯರ ಮಾನಸಿಕ ಸ್ಥಿತಿಗಳ ವ್ಯತ್ಯಸದ ಸನ್ನಿವೇಶಗಳು ಮತ್ತು ಪರಿಹಾರ: ಭಾಗವಹಿಸುವವರು– ಆಪ್ತ ಸಲಹೆಗಾರರಾದ ನಾಗಶ್ರೀ, ಪ್ರಸ್ತುತಿ– ಎಂ.ಎಸ್.ಭಾರತಿ, 4.45 ಹಿಂದಿ ಪಾಠ: ಡಾ. ಸ್ಮಿತಾ ಚಿಪ್ಳೂಣ್‌ಕರ್, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು–ಹೊನ್ನು", ತರಕಾರಿ ಬೆಳೆಗಳ ನರ್ಸರಿ ನಿರ್ವಹಣೆ ಕುರಿತು ಸಂವಾದ, ಭಾಗವಹಿಸುತ್ತಾರೆ ಡಾ.ಜೆ.ಎಸ್. ಅರವಿಂದಕುಮಾರ್ ಹಾಗೂ ಎನ್.ಪ್ರಸನ್ನ.

ರಾತ್ರಿ: 9.30 ಮತ್ತೆ ಕೇಳಿ "ಹಾದಿಯಲ್ಲಿ ಕಂಡ ಮುಖ" ರಂಗಕಲಾವಿದೆ ಆಟೋ ಚಾಲಕಿ ಸೌಮ್ಯ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಅಬ್ದುಲ್ ರಶೀದ್, 10.30 ಸವಿನೆನಪು.

■ **ಮೈಸೂರು ವಿಶ್ವವಿದ್ಯಾನಿಲಯ, ಯುವರಾಜ ಕಾಲೇಜು (ಸ್ವಾಯತ್ತತೆ):** ಗುರು ವಿಶಿಷ್ಟ ಪ್ರಶಸ್ತಿ–2023 ಪ್ರದಾನ ಸಮಾರಂಭ, ಸ್ಥಳ: ಪ್ಲಾಟಿನಂ ಜ್ಯುಬಿಲಿ ಆಡಿಟೋರಿಯಂ, ಕಾಲೇಜು ಆವರಣ, ಬೆಳಗ್ಗೆ 11 ಗಂಟೆಗೆ.

■ **ಮೈಸೂರು ಲಯನ್ಸ್ ಸ್ಕೂಲ್** : 42ನೇ ಶಾಲಾ ವಾರ್ಷಿಕೋತ್ಸವ, ಸ್ಥಳ: ಶಾಲಾ ಆವರಣ, ಬನ್ನಿಮಂಟಪ, ಸಂಜೆ 5 ಗಂಟೆಗೆ.

■ **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಜುವೆಲ್ ಆರ್ಟ್** : ಕಲಾವಿದರು ಮತ್ತು ಉಪನ್ಯಾಸಕರಾದ ಡಾ. ವಿಠ್ಠಲ ರಡ್ಡಿ, ಎಫ್. ಚುಳಕಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11 ಗಂಟೆಯಿಂದ.

■ **ಪರಂಪರೆ** : ಗಿರಿಜಾ ಕಲ್ಯಾಣ ಸಪ್ತಾಹ, ಪ್ರವಚನ: ಕನ್ನಡ ಪ್ರಾಧ್ಯಾಪಕರಾದ ಸಂಗೀತ ವಿದುಷಿ ಡಾ. ಜ್ಯೋತಿ ಶಂಕರ್ ಅವರಿಂದ, ಸ್ಥಳ: ಗಣಪತಿ ದೇವಸ್ಥಾನದ ರಜತ್ ಸಭಾಂಗಣ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6 ಗಂಟೆಯಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ತಿಂಗಳ ಸಂಗೀತ ಕಾರ್ಯಕ್ರಮ, ವಿದುಷಿ ಅನುಪಮಾ ಶ್ರೀಮಾಲಿ–ಗಾಯನ, ವಿದುಷಿ ಡಾ.ಎಂ.ಎ.ಜ್ಯೋತಿ–ಪಿಟೀಲು, ವಿದುಷಿ ರಘುನಂದನ್ ವಿ.ಭಾರ್ಗವ–ಮೃದಂಗ, ವಿದುಷಿ ಪಿ.ಎಸ್. ಕುಮಾರ್–ಘಟ, ಸ್ಥಳ:ಶ್ರೀರಾಮಮಂದಿರ, ಜಯನಗರ, ಸಂಜೆ 6 ಗಂಟೆಗೆ.

ಅಮೇರಿಕಾ ಮೂಲದ ಬೋಯಿಂಗ್ ಜೊತೆ ಮೈಸೂರಿನ ರಂಗ್ ಸನ್ಸ್ ಏರೋಸ್ಪೇಸ್ ಒಡಂಬಡಿಕೆ

ಬೋಯಿಂಗ್‌ಗೆ ಟ್ಯೂಬ್, ಡಕ್ಟ್ ಪೂರೈಸಲು ಒಪ್ಪಂದಕ್ಕೆ ಸಹಿ



ಮೈಸೂರಿನ ರಂಗ್ ಸನ್ಸ್ ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪವನ್ ರಂಗ ಅವರು ಬೋಯಿಂಗ್ ಏರೋಸ್ಪೇಸ್‌ನ ಭಾರತದ ಸರಬರಾಜು ಮತ್ತು ಸರಪಳಿಯ ನಿರ್ದೇಶಕ ಅಶ್ವಿನಿ ಭಾರ್ಗವ ಜೊತೆ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ

ಮೈಸೂರು, ಜ.28(ಬಿಎಲ್‌ಯು)– ಮೈಸೂರಿನ ರಂಗ್ ಸನ್ಸ್ ಏರೋಸ್ಪೇಸ್ ಅಮೇರಿಕಾ ಮೂಲದ ಜಾಗತಿಕ ಮಟ್ಟದ ಮುಂಚೂಣಿ ಏರೋಸ್ಪೇಸ್ ಸಂಸ್ಥೆ ಬೋಯಿಂಗ್ ಜೊತೆ ಒಪ್ಪಂದ ಮಾಡಿಕೊಂಡಿದೆ. ಬೋಯಿಂಗ್ ಏರೋಸ್ಪೇಸ್ ಸಿಸ್ಟಂಗಳಿಗೆ ಟ್ಯೂಬ್ ಹಾಗೂ ಡಕ್ಟ್‌ಗಳನ್ನು ಪೂರೈಕೆ ಮಾಡಲು ಮೈಸೂರಿನ ರಂಗ್ ಸನ್ಸ್ ಏರೋಸ್ಪೇಸ್ ಬೋಯಿಂಗ್ ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ.

ಮೈಸೂರು ಮೂಲದ ರಂಗ್ ಸನ್ಸ್ ಏರೋಸ್ಪೇಸ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಪವನ್ ರಂಗ ಅವರು ಬೋಯಿಂಗ್ ಏರೋಸ್ಪೇಸ್‌ನ ಭಾರತದ ಸರಬರಾಜು ಮತ್ತು ಸರಪಳಿಯ ನಿರ್ದೇಶಕ ಅಶ್ವಿನಿ ಭಾರ್ಗವ ಜೊತೆ ಒಪ್ಪಂದ ಮಾಡಿಕೊಂಡು ಒಪ್ಪಂದ ಪತ್ರಗಳನ್ನು ವಿನಿಮಯ ಮಾಡಿಕೊಂಡರು.

ಅಮೇರಿಕಾ ಮೂಲದ ಜಾಗತಿಕ ಏರೋಸ್ಪೇಸ್ ಬೋಯಿಂಗ್ ಜೊತೆ ಒಪ್ಪಂದ ಮಾಡಿಕೊಳ್ಳುತ್ತಿರುವ ಭಾರತದ ಮೊದಲ ಕಂಪನಿ ಎಂಬ ಹೆಗ್ಗಳಿಕೆಗೂ ಮೈಸೂರಿನ ರಂಗ್ ಸನ್ಸ್ ಪಾತ್ರವಾಗಿದೆ. ರಂಗ್ಸ್ ಸನ್ಸ್ ಏರೋಸ್ಪೇಸ್ ಬೋಯಿಂಗ್‌ಗೆ ಟ್ಯೂಬ್ ಹಾಗೂ ಡಕ್ಟ್‌ಗಳನ್ನು ಪೂರೈಕೆ ಮಾಡಲಿದ್ದು, ಈ ಒಪ್ಪಂದ 5 ವರ್ಷದ ಕಾಲಮಿತಿಯದ್ದಾಗಿರುತ್ತದೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಪವನ್ ರಂಗ, ಬೋಯಿಂಗ್ ಜೊತೆ ರಂಗ್ಸ್ ಸನ್ಸ್ ಮಾಡಿಕೊಂಡಿರುವ ಒಪ್ಪಂದ ನಮ್ಮ ಸಂಸ್ಥೆಗೆ ಮಹತ್ವದ ಮೈಲಿಗಲ್ಲಾಗಿದೆ. ಇದು ನಮಗೂ ಹೆಮ್ಮೆ ಪಡುವ ವಿಚಾರವಾಗಿದೆ ಎಂದು ಹೇಳಿದ್ದಾರೆ. ಐದು ವರ್ಷಗಳ ಈ ಒಪ್ಪಂದದಿಂದ ರಂಗ್ ಸನ್ಸ್ ಏರೋಸ್ಪೇಸ್ ಉದ್ಯಮದ ಸ್ಥಾನ ಮತ್ತಷ್ಟು ಗಟ್ಟಿಗೊಳ್ಳುವುದಲ್ಲದೆ ಏರೋಸ್ಪೇಸ್ ಕ್ಷೇತ್ರದಲ್ಲಿ ನಮ್ಮ ಸಂಸ್ಥೆ ಬದ್ಧತೆ ತೋರಿಸುತ್ತದೆ ಎಂದು ಪವನ್ ರಂಗ ತಿಳಿಸಿದ್ದಾರೆ.

ಮೈಸೂರಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪನವರ 125ನೇ ಜನ್ಮದಿನ ಅರ್ಥಪೂರ್ಣ ಆಚರಣೆ

●ದೇಶ ಸೇವೆಗೆ ಕಾರ್ಯಪ್ಪ ಕೊಡುಗೆ ಸ್ಮರಣೀಯ ●ಮುಂದಿನ ವರ್ಷ ಸರ್ಕಾರವೇ ಜನ್ಮದಿನ ಆಚರಿಸಲಿ ●ಕಾರ್ಯಪ್ಪ ಅವರಿಗೆ 'ಭಾರತ ರತ್ನ' ನೀಡಲು ಆಗ್ರಹ



ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತದಲ್ಲಿ ಭಾನುವಾರ ಕೊಡವ ಸಮಾಜ, ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಮತ್ತು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅಭಿಮಾನಿ ಬಳಗ ಸಂಯುಕ್ತವಾಗಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ 125ನೇ ಜನ್ಮ ದಿನವನ್ನು ಆಚರಿಸಲಾಯಿತು.

ಮೈಸೂರು, ಜ.28(ಬಿಎಲ್‌ಯು)– ಮೈಸೂರಿನಲ್ಲಿ ಇಂದು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪನವರ 125 ನೇ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತದಲ್ಲಿ ಕೊಡವ ಸಮಾಜ, ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಮತ್ತು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅಭಿಮಾನಿ ಬಳಗ ಸಂಯುಕ್ತವಾಗಿ ಈ ಕಾರ್ಯಕ್ರಮ ಆಯೋಜಿಸಿದ್ದವು.

ಶಾಸಕ ಕೆ.ಹರೀಶ್‌ಗೌಡ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹರೀಶ್‌ಗೌಡ, ದೇಶದ ಸೈನ್ಯ ಮುನ್ನಡೆಸಿದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಕೊಡುಗೆ ಸ್ಮರಣೀಯ ಎಂದು ಹೇಳಿದರು. ಕಾರ್ಯಪ್ಪ ಅವರು ದೇಶದ ಜನರಿಗೆ ಪ್ರೇರಣೆಯಾಗಿದ್ದು, ಇಂತಹ ಮಹಾನ್ ವ್ಯಕ್ತಿಯ ಜನ್ಮದಿನವನ್ನು ಆಚರಣೆ ಮಾಡುವುದಕ್ಕೆ ಎಲ್ಲರಿಗೂ ಸಂತಸವಿದೆ ಎಂದರು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ತಮ್ಮ 94 ವರ್ಷಗಳ ಜೀವಿತಾವಧಿಯಲ್ಲಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಸದಾ ಉತ್ಸಾಹಿಯಾಗಿ ಇದ್ದರು. ನಿವೃತ್ತಿ ನಂತರ ಎಲ್ಲರೂ ಮನೆಯಲ್ಲಿ ಕೂರುತ್ತಾರೆ. ಆದರೆ ಕಾರ್ಯಪ್ಪ ಅವರು ನಿವೃತ್ತಿ ನಂತರವೂ ಬಹಳ ಚಟುವಟಿಕೆಯಿಂದಿದ್ದು ಹಲವು ಕಾರ್ಯಗಳಲ್ಲಿ ಮಗ್ನರಾಗಿದ್ದರು. ಸೈನ್ಯದ ರೆಜಿಮೆಂಟ್‌ಗಳಿಗೆ ಭೇಟಿ ನೀಡಿ, ಯುವ ಸೈನಿಕರಲ್ಲಿ ಉತ್ಸಾಹ ತುಂಬುತ್ತಿದ್ದರು. ಸೈನ್ಯ ಮಾತ್ರವಲ್ಲದೆ ಹಾಕಿ ಕ್ರೀಡೆಗೆ ಪ್ರೋತ್ಸಾಹಿಸುತ್ತಿದ್ದರು ಎಂದು ತಿಳಿಸಿದರು.

ದೇಶ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಕೊಡುಗೆ ಎಂದೆಂದೂ ಸ್ಮರಣೀಯ ಎಂದು ಶ್ರೀವತ್ಸ ಹೇಳಿದರು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜೀವಿತಾವಧಿಯಲ್ಲಿ ಏನಾದರೊಂದು ಸಾಧನೆ ಮಾಡಿ, ನಿನ್ನ ಗುರುತು ಬಿಟ್ಟು ಹೋಗು ಎಂಬ ಮಾತಿದೆ. ಅದರಂತೆ ದೇಶದ ಸೇನಾ ಪಡೆಯಲ್ಲಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರು ಅಚ್ಚಳಿಯದ ಗುರುತು ಬಿಟ್ಟು ಹೋಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಆದರ್ಶವನ್ನು ನಾವೆಲ್ಲಾ ಅನುಸರಿಸಬೇಕು ಎಂದು ಸಲಹೆ ನೀಡಿದರು. ನಾನು ಕೂಡ ಭಾರತೀಯ ಸೈನ್ಯಲ್ಲಿ ಕೆಲಸ ಮಾಡಿ ಬಂದಿದ್ದೇನೆ. ಸೈನ್ಯಕ್ಕೆ ಸೇರಲು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರೇ ನನಗೆ ಪ್ರೇರಣೆಯಾಗಿದ್ದರು ಎಂದು ಹೇಳಿದರು.

ಕೊಡಗಿನ ಜನರು ಶಿಸ್ತು ಮತ್ತು ಆತಿಥ್ಯಕ್ಕೆ ದೇಶದಲ್ಲೇ ಮಾದರಿಯಾಗಿದ್ದಾರೆ. ದೇಶ ರಕ್ಷಣೆಯ ವಿಚಾರ ಬಂದಾಗ ಕೊಡಗಿನ ಜನರು ಎಂದಿಗೂ ರಾಜೀ ಆಗುವುದಿಲ್ಲ. ಕೊಡಗಿನ ಜನರ ಈ ವಿಶೇಷ ಗುಣವನ್ನು ಎಲ್ಲರೂ ಅನುಸರಿಸಬೇಕು ಎಂದು ಮಂಜೇಗೌಡ ಹೇಳಿದರು.

ತರುವಾಯ ಮಾತನಾಡಿದ ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ನಾಗೇಂದ್ರ ಈ ವೃತ್ತದಲ್ಲಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಚಿಕ್ಕ ಪ್ರತಿಮೆ ಇತ್ತು. ಈಗ ದೊಡ್ಡ ಪ್ರತಿಮೆ ಸ್ಥಾಪಿಸಲಾಗಿದೆ. ಈ ಪ್ರತಿಮೆ ನೋಡುವುದರ ಮೂಲಕವಾದರೂ ಜನರು ಫೀಲ್ಡ್ ಮಾರ್ಷಲ್ ಅವರ ದೇಶ ಪ್ರೇಮದ ಆದರ್ಶ ಗುಣವನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಜನ್ಮ ದಿನವನ್ನು ಕೊಡವರು ಮಾತ್ರವಲ್ಲದೆ ಇತರರು ಸೇರಿ ಪ್ರತಿ ವರ್ಷ ಆಚರಣೆ ಮಾಡಲಾಗುತ್ತಿದೆ. ಆದರೆ ಮುಂದಿನ ವರ್ಷ ಸರ್ಕಾರವೇ ಆಚರಣೆ ಮಾಡಬೇಕು. ಈ ನಿಟ್ಟಿನಲ್ಲಿ ಗಮನ ಹರಿಸಬೇಕು ಎಂದು ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಆಗ್ರಹಿಸಿದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರಿಗೆ 'ಭಾರತ ರತ್ನ' ನೀಡಲು ಒತ್ತಾಯಿಸಿ ಸಹಿ ಸಂಗ್ರಹ ಆರಂಭಿಸಲಾಗುವುದು. ಇದಕ್ಕೆ ಎಲ್ಲರೂ ಬೆಂಬಲಿಸಬೇಕು ಎಂದು ರಮೇಶ್ ಮನವಿ ಮಾಡಿದರು. ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಬಹಳಷ್ಟು ಗಣ್ಯರು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರು ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು.

ಕೊಡವ ಸಮಾಜದ ಅಧ್ಯಕ್ಷ ಪೊಂಜಾಂಡ ಎ.ಗಣಪತಿ, ಕಾರ್ಯದರ್ಶಿ ಬೆಳ್ಳಿಯಪ್ಪ, ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಕುಟ್ಟಿಮಡ ಡಿ.ಮುತ್ತಪ್ಪ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅಭಿಮಾನಿ ಬಳಗದ ಅಧ್ಯಕ್ಷ ನಾಯಕಂಡ ತಿಮ್ಮಯ್ಯ, ಕೊಡವ ಮಹಿಳಾ ಸಂಘದ ಅಧ್ಯಕ್ಷೆ ಲವ್ಲಿ ಅಪ್ಪಯ್ಯ, ಮಾಜಿ ಕಾರ್ಪೋರೇಟರ್ ಎಂ.ಯು.ಸುಬ್ಬಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮೊದಲ ಟೆಸ್ಟ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಮಂಡಿಯೂರಿದ ಟೀಂ ಇಂಡಿಯಾ

ಸ್ವದೇಶದಲ್ಲೇ 28 ರನ್‌ಗಳಿಂದ ಹೀನಾಯ ಸೋಲು!



ಹೈದರಾಬಾದ್: ಭಾರತ ವಿರುದ್ಧದ ಹೈದರಾಬಾದ್ ಟೆಸ್ಟ್‌ನಲ್ಲಿ ಇಂಗ್ಲೆಂಡ್ ಗೆದ್ದು ಬೀಗಿದೆ. ಈ ಪಂದ್ಯದಲ್ಲಿ ಪ್ರವಾಸಿ ತಂಡ 28 ರನ್‌ಗಳಿಂದ ಗೆಲುವು ಸಾಧಿಸಿದೆ

ಹೈದರಾಬಾದ್ ನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡ 28 ರನ್ ಗಳಿಂದ ಗೆಲುವು ಸಾಧಿಸಿದೆ. ಈ ಪಂದ್ಯದಲ್ಲಿ ಭಾರತ ಗೆಲ್ಲಲು 231 ರನ್ ಗುರಿ ಪಡೆದಿತ್ತು. ಆದರೆ ನಾಲ್ಕನೇ ದಿನ ಭಾರತ ತಂಡ ಕೊನೆಯ ಓವರ್‌ನಲ್ಲಿ ಮೊಹಮ್ಮದ್ ಸಿರಾಜ್ ಅವರ ವಿಕೆಟ್‌ನೊಂದಿಗೆ 202 ರನ್‌ಗಳಿಗೆ ಆಲೌಟ್ ಆಯಿತು.

ಒಲಿ ಪೋಪ್ ಅವರ 196 ರನ್‌ಗಳ ಅದ್ಭುತ ಇನ್ನಿಂಗ್ಸ್‌ನಿಂದಾಗಿ ಭಾರತಕ್ಕೆ 231 ರನ್‌ಗಳ ಗುರಿ ನೀಡಿತ್ತು. ಆದರೆ ಭಾರತೀಯ ಬ್ಯಾಟರ್ ಗಳು ಯಾರು ಸಮಚಿತ್ತವಾಗಿ ಬ್ಯಾಟಿಂಗ್ ಮಾಡುವಲ್ಲಿ ವಿಫಲರಾದರು. ರೋಹಿತ್ ಶರ್ಮಾ 39 ರನ್ ಬಾರಿಸಿದ್ದು ಬಿಟ್ಟರೆ ಮತ್ತಾರು ದೊಡ್ಡ ಮೊತ್ತದ ರನ್ ಕಲೆ ಹಾಕಲು ವಿಫಲರಾದರು. ಭಾರತದ ವಿರುದ್ಧ ನಾಲ್ಕನೇ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡ್ ಪರ ಟಾಮ್ ಹಾರ್ಟ್ಲಿ 7 ವಿಕೆಟ್ ಪಡೆದರು. ಇದಲ್ಲದೆ ಜೋ ರೂಟ್ ಮತ್ತು ಜಾಕ್ ಲೀಚ್ ತಲಾ ಒಂದು ವಿಕೆಟ್ ಪಡೆದರು. ಈ ಮೂಲಕ ಇಂಗ್ಲೆಂಡ್ ಪಂದ್ಯದ ನಾಲ್ಕನೇ ದಿನದಾಟದಲ್ಲಿ 28 ರನ್‌ಗಳಿಂದ ಜಯ ಸಾಧಿಸಿದೆ.

ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ತಂಡ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 246 ರನ್ ಗಳಿಸಿತ್ತು. ಈ ಇನ್ನಿಂಗ್ಸ್‌ನಲ್ಲಿ ಬೆನ್ ಸ್ಟೋಕ್ಸ್ ತಂಡದ ಪರ ಗರಿಷ್ಠ 70 ರನ್‌ಗಳ ಇನ್ನಿಂಗ್ಸ್ ಆಡಿದರು. ಇದಕ್ಕೆ ಉತ್ತರವಾಗಿ ಟೀಂ ಇಂಡಿಯಾ ಯಶಸ್ವಿ ಜೈಸ್ವಾಲ್, ಕೆಎಲ್ ರಾಹುಲ್ ಮತ್ತು ರವೀಂದ್ರ ಜಡೇಜಾ ಅವರ ಅರ್ಧ ಶತಕಗಳ ನೆರವಿನಿಂದ 436 ರನ್ ಗಳಿಸಿತು. ಈ ಮೂಲಕ ಟೀಂ ಇಂಡಿಯಾ 190 ರನ್‌ಗಳ ಪ್ರಬಲ ಮುನ್ನಡೆ ಸಾಧಿಸಿತ್ತು. ಆದರೆ ಎರಡನೇ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡ್‌ನ ಜವಾಬ್ದಾರಿಯನ್ನು ಒಲಿ ಪೋಪ್ ವಹಿಸಿಕೊಂಡರು. ಇದಕ್ಕೆ ಉತ್ತರವಾಗಿ, ಇಂಗ್ಲೆಂಡ್‌ನ ಎರಡನೇ ಇನ್ನಿಂಗ್ಸ್ ಉತ್ತಮವಾಗಿ ಪ್ರಾರಂಭವಾಗಲಿಲ್ಲ ಆದರೆ ಒಲಿ ಪೋಪ್ ಏಕಾಂಗಿಯಾಗಿ ತಂಡದ ಜವಾಬ್ದಾರಿಯನ್ನು ವಹಿಸಿಕೊಂಡರು ಮತ್ತು 196 ರನ್‌ಗಳ ಪ್ರಬಲ ಇನ್ನಿಂಗ್ಸ್ ಆಡಿದರು.

ಭಾರತದ ಸ್ವಾತಂತ್ರ್ಯ ಚಳುವಳಿಗೆ ಸುಭಾಷ್ ಚಂದ್ರ ಬೋಸ್ ಮಹತ್ವದ ಕೊಡುಗೆ



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ಭಾನುವಾರ ನಿಜವಾದ ಸ್ವಾತಂತ್ರ್ಯದ ಯೋಧ ನೇತಾಜಿ ಸುಭಾಷ್ ಚಂದ್ರ ಬೋಸ್ ಕುರಿತ ವಿಚಾರ ಸಂಕಿರಣವನ್ನು ಲೇಖಕ ಸಂದೀಪ್ ಬಾಲಕೃಷ್ಣ ಉದ್ಘಾಟಿಸಿದರು.

ಲೇಖಕ ಸಂದೀಪ್ ಬಾಲಕೃಷ್ಣ ಅಭಿಪ್ರಾಯ

ಮೈಸೂರು, ಜ.28(ಬಿಎಲ್‌ಯು)– ಭಾರತದ ಸ್ವಾತಂತ್ರ್ಯ ಚಳುವಳಿಗೆ ಸುಭಾಷ್ ಚಂದ್ರಬೋಸ್ ಅವರದ್ದು ಸ್ಮರಣೀಯ ಕೊಡುಗೆ ಎಂದು ಲೇಖಕ ಸಂದೀಪ್ ಬಾಲಕೃಷ್ಣ ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ಇಂದು ನಿಜವಾದ ಸ್ವಾತಂತ್ರ್ಯ ಯೋಧ ನೇತಾಜಿ ಸುಭಾಷ್ ಚಂದ್ರ ಬೋಸ್ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಸುಭಾಷ್ ಚಂದ್ರ ಬೋಸ್ ಅವರ ಜೀವನ, ಕೊಡುಗೆ ಹಾಗೂ ಮರಣದ ಕೆಲವು ಅಂಶಗಳ ಬಗ್ಗೆ ಈ ವೇಳೆ ವಿವರಿಸಿದರು.

ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಸುಭಾಷ್ ಚಂದ್ರ ಬೋಸ್ ಅವರ ಕೊಡುಗೆ ಸ್ಮರಣೀಯ. ಸ್ವಾತಂತ್ರ್ಯ ಚಳವಳಿಯಲ್ಲಿ ಅವಿರತ ಹೋರಾಟ ಮಾಡಿದ ಸುಭಾಷ್ ಚಂದ್ರಬೋಸ್ ಅವರ ಬಗ್ಗೆ ಎಷ್ಟೇ ಹೊಗಳಿದರೂ ಅದು ಕಡಿಮೆಯೇ ಎಂದು ಹೇಳಿದರು.

ದೇಶದ ಬಹಳಷ್ಟು ಜನರಿಗೆ ಸನ್ಯಾಸಿ ಆಂದೋಲನದ ಬಗ್ಗೆ ಅರಿವೇ ಇಲ್ಲ. ಪರಿಣಾಮಕಾರಿಯಾದ ಈ ಆಂದೋಲನ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಿಚ್ಚು ಹೊತ್ತಿಸಿತು. ಬಂಕಿಮ ಚಂದ್ರ ಚಟರ್ಜಿ ಅವರ ವಂದೇ ಮಾತರಂ ಗೀತೆಗೂ ಇದೇ ಆಂದೋಲನ ಸ್ಫೂರ್ತಿಯಾಗಿತ್ತು ಎಂದರು. ಮೈಸೂರು ರಾಜರು ಸೇರಿದಂತೆ ಬಹಳಷ್ಟು ರಾಜ–ಮಹಾರಾಜರು ಮಠ ಹಾಗೂ ದೇವಸ್ಥಾನಗಳಿಗೆ ದತ್ತಿ ನೀಡುತ್ತಿದ್ದರು. ಈ ಕೊಡುಗೆಗೆ ರಾಜಮನ್ನಣೆ ಇತ್ತು. ಆದರೆ ಬ್ರಿಟಿಷರು ಬಂದು ಇದನ್ನು ಕೊನೆಗಾಣಿಸಿದರು ಎಂದು ಸಂದೀಪ್ ಬಾಲಕೃಷ್ಣ ಹೇಳಿದರು.

ಅಂಕಣಕಾರ ಚಂದ್ರಚೂಡ್ ಘೋಷ್, ಲೇಖಕ ಅನುಜ್ ದಾರ್, ಸಂಶೋಧಕ ಡಾ.ಎ.ಎನ್.ಸಂತೋಷ್ ಕಂಡ, ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಾನಂದ, ಮೈಸೂರು ಸೈನ್ಸ್ ಫೌಂಡೇಷನ್ ಅಧ್ಯಕ್ಷ ಸಿ.ಕೃಷ್ಣೇಗೌಡ, ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲೆ ಡಾ.ಎಂ.ಪೂರ್ಣಿಮಾ, ಪ್ರೊ.ಜ್ಞಾನ ಪ್ರಕಾಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಸದ ಜಿಗಜಿಣಗಿ ಆಸ್ಪತ್ರೆಗೆ ದಾಖಲು



ವಿಜಯಪುರ: ವಿಜಯಪುರ ಲೋಕಸಭಾ ಸದಸ್ಯ ಸಂಸದ ರಮೇಶ ಜಿಗಜಿಣಗಿ ಪ್ರಯಾಣದ ವೇಳೆ ಎದೆನೋವು ಕಾಣಿಸಿಕೊಂಡು, ಬಾಗಲಕೋಟೆಯ ಆಸ್ಪತ್ರೆಗೆ ದಾಖಲಾಗಿರುವ ಘಟನೆ ವರದಿಯಾಗಿದೆ.

ಭಾನುವಾರ ಬೆಳಿಗ್ಗೆ ರಸ್ತೆ ಮಾರ್ಗವಾಗಿ ವಿಜಯಪುರದಿಂದ ಹುಬ್ಬಳ್ಳಿಗೆ ಹೊರಟಿದ್ದ ಸಂಸದ ರಮೇಶ ಜಿಗಜಿಣಗಿ ಅವರಿಗೆ ಬಾಗಲಕೋಟೆ ಜಿಲ್ಲೆ ಬಿಳಗಿ ಬಳಿ ಪ್ರಯಾಣಿಸುವಾಗ ಉಸಿರಾಟದ ಸಮಸ್ಯೆ ಹಾಗೂ ಎದೆನೋವು ಕಾಣಿಸಿಕೊಂಡಿದೆ. ಕೂಡಲೇ ಅವರನ್ನು ಬಾಗಲಕೋಟೆ ಮಾಜಿ ಶಾಸಕ ವೀರಣ್ಣ ಚರಂತಿಮಠ ಅಧ್ಯಕ್ಷತೆಯಲ್ಲಿರುವ ಬಸವೇಶ್ವರರ ವಿದ್ಯಾವರ್ಧಕ ಸಂಸ್ಥೆಯ ಶ್ರೀಕುಮಾರೇಶ್ವರ ಆಸ್ಪತ್ರೆಗೆ ದಾಖಲಿಸಿ, ಆಕ್ಸಿಜನ್ ನೀಡಿ ಚಿಕಿತ್ಸೆ ನೀಡಲಾಗಿದೆ. ಮೇಲ್ನೋಟಕ್ಕೆ ಲಘು ಹೃದಯಾಘಾತ ಆಗಿರುವ ಶಂಕೆಯ ಹಿನ್ನೆಲೆಯಲ್ಲಿ ವೈದ್ಯರು ಹೃದ್ರೋಗಕ್ಕೆ ಸಂಬಂಧಿಸಿದಂತೆ ಎಂಜಿಯೋಗ್ರಾಫಿ ಪರೀಕ್ಷೆಗೆ ಮುಂದಾಗಿದ್ದಾರೆ. ಸದ್ಯ ಜಿಗಜಿಣಗಿ ಅವರ ಆರೋಗ್ಯ ಸುಧಾರಿಸುತ್ತಿದ್ದು, ಯಾವುದೇ ರೀತಿಯಲ್ಲಿ ಆತಂಕ ಪಡುವ ಅಗತ್ಯವಿಲ್ಲ ಎಂದು ಚಿಕಿತ್ಸೆ ನೀಡುತ್ತಿರುವ ವೈದ್ಯರು ಸಂಸದ ಜಿಗಜಿಣಗಿ ಕುಟುಂಬ ಸದಸ್ಯರಿಗೆ ಮಾಹಿತಿ ನೀಡಿದ್ದಾರೆ ಎಂದು ಆಪ್ತ ಮೂಲಗಳು ಹೇಳಿವೆ.

ಗುರುಮಿಠಕಲ್ ಮಾಜಿ ಶಾಸಕ ನಾಗನಗೌಡ ಕಂದಕೂರು ನಿಧನ



ಯಾದಗಿರಿ: ಗುರುಮಿಠಕಲ್ ಮತಕ್ಷೇತ್ರದ ಶಾಸಕ ಶರಣಗೌಡ ಕಂದಕೂರು ಅವರ ತಂದೆ, ಮಾಜಿ ಶಾಸಕ ನಾಗನಗೌಡ ಕಂದಕೂರು (79) ಅವರು ಇಂದು ಬೆಳಿಗ್ಗೆ ಯಾದಗಿರಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ.

ನಾಗನಗೌಡ ಅವರು 2018ರಲ್ಲಿ ಗುರುಮಿಠಕಲ್ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿದ್ದರು. ಮಾಜಿ ಪ್ರಧಾನಿ ದೇವೇಗೌಡ ಅವರ ಕುಟುಂಬಕ್ಕೆ ಅತ್ಯಂತ ಆತ್ಮೀಯರಾಗಿದ್ದ ನಾಗನಗೌಡ ಅವರು ಯಾದಗಿರಿ ಕೃಷಿ ಮಾರುಕಟ್ಟೆ ಅಧ್ಯಕ್ಷರಾಗಿದ್ದರು, ಅಖಂಡ ಕಲಬುರಗಿ ಜಿಲ್ಲಾ ಪರಿಷತ್ತಿನ ಸದಸ್ಯರಾಗಿ, ಜೊತೆಗೆ ಜೆಡಿಎಸ್ ಜಿಲ್ಲಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ನಾಳೆ (ಜ.29) ಹುಟ್ಟೂರೂ ಕಂದಕೂರಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಶಾಸಕ ಶರಣಗೌಡ ಕಂದಕೂರು ಅವರು ತಂದೆ ದಿ.ನಾಗನಗೌಡ ಕಂದಕೂರು ಅಗಲಿದ ಸುದ್ದಿ ತಿಳಿದ ಅಭಿಮಾನಿಗಳು, ಜೆಡಿಎಸ್ ಕಾರ್ಯಕರ್ತರ ಅವರು ಮನೆ ಬಳಿ ಜಮಾಸಿದ್ದಾರೆ.

ಸಾಮಾಜಿಕ ಸೌಹಾರ್ದತೆಗೆ ಧಕ್ಕೆ; ನಾಳೆ ಮೈಸೂರಲ್ಲಿ 'ಮಾನವ ಸರಪಳಿ' ರಚನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಜಗದೀಶ್ ಸೂರ್ಯ ಮಾತನಾಡಿದರು.

ಮೈಸೂರು,ಜ.28(ಜಿಎ)–ಸಾಮಾಜಿಕ ಸೌಹಾರ್ದತೆಗೆ ಧಕ್ಕೆಯಾಗುತ್ತಿರುವುದನ್ನು ವಿರೋಧಿಸಿ ಸೌಹಾರ್ದ ಕರ್ನಾಟಕ ಮೈಸೂರು ಸಂಘಟನೆ ವತಿಯಿಂದ ಮಹಾತ್ಮಗಾಂಧೀಜಿ ಹುತಾತ್ಮರಾದ ದಿನವಾದ ಜ.30ರಂದು ರಾಜ್ಯದಾದ್ಯಂತ ಮಾನವ ಸರಪಳಿ ರಚಿಸಲಾಗುತ್ತಿದ್ದು, ಅದರಂತೆ ಅಂದು ಮೈಸೂರಿನಲ್ಲಿಯೂ ಮಾನವ ಸರಪಳಿ ರಚಿಸಲು ನಿರ್ಧರಿಸಲಾಗಿದೆ ಎಂದು ಹಿರಿಯ ರಂಗಕರ್ಮಿ ಹಾಗೂ ಸಂಘಟನೆಯ ಸಂಚಾಲಕರಾದ ಸಿ. ಬಸವಲಿಂಗಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3 ಗಂಟೆಗೆ ಅರಮನೆಯ ಕೋಟೆ ಆಂಜನೇಯ ದೇವಸ್ಥಾನದಿಂದ, ಅಶೋಕ ರಸ್ತೆಯ ಮಸ್ಜಿದ್ ಎ ಅಜಮ್, ಸೆಂಟ್ ಫಿಲೋಮಿನಾ ಚರ್ಚ್ (ದೊಡ್ಡ ಚರ್ಚ್) ಬಳಿ ಮಾನವ ಸರಪಳಿ ರಚಿಸಲಾಗುವುದು ಎಂದರು.

ಹಲವು ದಶಕಗಳಿಂದಲೂ ಕರ್ನಾಟಕವನ್ನು ಸರ್ವ ಜನಾಂಗದ ಶಾಂತಿಯ ತೋಟ ಎಂದು ಹೆಮ್ಮೆಯಿಂದ ಕರೆಯಾಗುತ್ತಿದೆ. ಇದಕ್ಕೆ ಗಂಭೀರ ಧಕ್ಕೆ ಬಂದೊದಗಿರುವುದು ನಿಚ್ಚಳವಾಗಿದೆ. ಮತಾಂಧತೆಯ ಆಧಾರದಲ್ಲಿ ಜಾತಿ–ಮತ ಧರ್ಮಗಳ ಹೆಸರಿನಲ್ಲಿ ಜನರನ್ನು ವಿಭಜಿಸುವ ಶಕ್ತಿಗಳಿಂದ ನಮ್ಮ ಸಾಮಾಜಿಕ ಸೌಹಾರ್ದತೆಗೆ ತೀವ್ರ ಹಾನಿಯಾಗಿದೆ. ಹೀಗಾಗಿ ಈ ಕಾರ್ಯಕ್ರಮದ ಮೂಲಕ ಇದನ್ನು ವಿರೋಧಿಸಲಾಗುವುದು ಎಂದು ತಿಳಿಸಿದರು.

ಮತೀಯ ದ್ವೇಷ–ಹಗೆತನದ ಭಾವನೆಗಳು ಸಾಮಾನ್ಯ ಜನರ ಮನಸ್ಸನ್ನು ಆವರಿಸಿಕೊಳ್ಳುತ್ತಿರುವ ವಿಷಮ ಸ್ಥಿತಿ ಬಂದಿದೆ. ದೇವರು, ಮತಧರ್ಮ ಮುಂತಾದವುಗಳನ್ನು ಸಂಕುಚಿತ ಉದ್ದೇಶಗಳಿಗೆ ಎಗ್ಗಿಲ್ಲದೇ ಬಳಸಲಾಗುತ್ತಿದೆ. ದಿನ ನಿತ್ಯದ ದ್ವೇಷ ಭಾಷೆಯಿಂದ ನಮ್ಮ ಸಾಮಾಜಿಕ, ಮತೀಯ ದ್ವೇಷದ ಜೊತೆಗೆ ಅಸ್ಪೃಶ್ಯತೆ, ಜಾತೀಯ ದಮನ, ಮಹಿಳೆಯರ ಮೇಲಿನ ದೌರ್ಜನ್ಯ, ಆರ್ಥಿಕ ಅಸಮಾನತೆಗಳ ತೀವ್ರತೆಯೂ ಸೌಹಾರ್ದದ ವಾತಾವರಣವನ್ನು ಮತ್ತಷ್ಟು ಕಲುಷಿತಗೊಳಿಸುತ್ತಿವೆ. ಇಂತಹ ಸಂದರ್ಭದಲ್ಲಿ ಶತ ಶತಮಾನಗಳ ಇತಿಹಾಸವುಳ್ಳ ಕರ್ನಾಟಕದ ಸೌಹಾರ್ದ ಪರಂಪರೆಯನ್ನು ಹಾಗೂ ಜನ ಸಂಸ್ಕೃತಿಯನ್ನು ಗುರುತಿಸಿ ಅದನ್ನು ಮುನ್ನೆಲೆಗೆ ತರುವ ಐತಿಹಾಸಿಕ ಅವಶ್ಯಕತೆ ಉಂಟಾಗಿದೆ. ಈ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಪಿ.ಮರಂಕಯ್ಯ, ಕಾರ್ಮಿಕ ಮುಖಂಡ ಜಗದೀಶ್ ಸೂರ್ಯ, ನೂರ್ ಮರ್ಚೆಂಟ್, ಪಿ.ಎಂ.ಸವಿತಾ, ವರದಯ್ಯ, ಆಲಗೂಡು ಶಿವಕುಮಾರ್ ಉಪಸ್ಥಿತರಿದ್ದರು.

ಬಜೆಟ್‌ನಲ್ಲಿ ಬೇಡಿಕೆ ಈಡೇರಿಸಲು ಆಗ್ರಹಿಸಿ ಫೆ.6ರಂದು ರೈತರಿಂದ 'ಬೆಂಗಳೂರು ಚಲೋ'

ಸಾಲಮನ್ನಾ, ರೈತರಿಗೆ ವಿಮೆ, ಬೆಳೆ ವಿಮೆ, ಬೆಂಬಲ ಬೆಲೆ ಯೋಜನೆಯಡಿ ಪದಾರ್ಥ ಖರೀದಿಗೆ ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಕುರುಬೂರು ಶಾಂತಕುಮಾರ್ ಮಾತನಾಡಿದರು.

ಮೈಸೂರು,ಜ.28(ಜಿಎ)–ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಫೆ.6ರಂದು ಕಬ್ಬು ಬೆಳೆಗಾರರು ಹಾಗೂ ಗ್ರೀನ್ ಬಡ್ಸ್ ಮಹಿಳೆಯರು 'ಬೆಂಗಳೂರು ಚಲೋ' ಹಮ್ಮಿಕೊಂಡಿದ್ದಾರೆ.

ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರ್ ಶಾಂತಕುಮಾರ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ರಾಜ್ಯ ಸರ್ಕಾರ 2024ರಲ್ಲಿ ಮಂಡಿಸುವ ಬಜೆಟ್‌ನಲ್ಲಿ ತೆಲಂಗಾಣ ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡಿರುವಂತೆ ನಮ್ಮ ರಾಜ್ಯದಲ್ಲಿಯೂ ರೈತರ ಸಾಲ ಮನ್ನಾ ಮಾಡಬೇಕು. ಸಕ್ಕರೆ ಕಾರ್ಖಾನೆಗಳು ರೈತರಿಗೆ ಕಡಿತ ಮಾಡಿರುವ ಕಬ್ಬು ಸಾಗಾಣಿಕೆ ಹಣವನ್ನು ರೈತರಿಗೆ ವಾಪಸ್ ಕೊಡಿಸಬೇಕು. ಟನ್ ಕಬ್ಬಿಗೆ 150 ರೂ. ಹೆಚ್ಚುವರಿ ದರವನ್ನು ಕೂಡಲೇ ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿಸಲು ಕ್ರಮ ಕೈಗೊಳ್ಳಬೇಕು. ಇಲ್ಲವೇ ಸರ್ಕಾರವೇ ರೈತರಿಗೆ ಪಾವತಿಸಬೇಕು ಎಂದು ಒತ್ತಾಯಿಸಲು ಈ ಬೆಂಗಳೂರು ಚಲೋ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ತೆಲಂಗಾಣದಲ್ಲಿ ಎಲ್ಲಾ ರೈತರಿಗೂ ರಾಜ್ಯ ಸರ್ಕಾರವೇ ವಿಮಾ ಕಂತು ಪಾವತಿಸಿ 5 ಲಕ್ಷ ಜೀವ ವಿಮೆ ಪಾಲಿಸಿ ಮಾಡಿಸಿದೆ. ಇದರಿಂದ ಆಕಸ್ಮಿಕ ದುರಂತ, ಅಪಘಾತದಲ್ಲಿ ಸಾವು, ಆತ್ಮಹತ್ಯೆಗೆ ಒಳಗಾದ ಕುಟುಂಬಕ್ಕೆ ಐದು ಲಕ್ಷ ರೂ. ಪರಿಹಾರ ಸಿಗುತ್ತದೆ. ಇದೇ ರೀತಿ ಕರ್ನಾಟಕ ರಾಜ್ಯದಲ್ಲೂ ಜಾರಿಗೆ ತರಬೇಕು. ರೈತರ ಎಲ್ಲ ಕೃಷಿ ಉತ್ಪನ್ನಗಳನ್ನು ಪಂಜಾಬ್, ಹರಿಯಾಣ, ತೆಲಂಗಾಣ, ತಮಿಳುನಾಡು ಮಾದರಿಯಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವಂತೆ ಅವರು ಒತ್ತಾಯಿಸಿದರು. ತಮಿಳುನಾಡಿಗೆ ನೀರು ಹರಿಸಿ ಕಾವೇರಿ ಅಚ್ಚುಕಟ್ಟು ರೈತರಿಗೆ ವಂಚನೆ ಮಾಡಿರುವ ಸರ್ಕಾರ ರೈತರಿಗೆ ಕೂಡಲೇ ಎಕರೆಗೆ 25,000 ಪರಿಹಾರ ನೀಡಬೇಕು. ರೈತರು ಬೆಳೆದ ಎಲ್ಲಾ ಪೌಷ್ಟಿಕ ಸಿರಿಧಾನ್ಯಗಳನ್ನು ಹೆಚ್ಚುವರಿ ಬೆಲೆ ನಿಗದಿ ಮಾಡಿ ಸರ್ಕಾರವೇ ಖರೀದಿಸುವಂತಹ ವ್ಯವಸ್ಥೆ ಜಾರಿಗೆ ಬರಬೇಕು. ರೈತ ಉತ್ಪಾದಕ ಸಂಸ್ಥೆಗಳ ಮೂಲಕ ಖರೀದಿಸಿ, ಸರ್ಕಾರದ ಅಂಗಸಂಸ್ಥೆಗಳಾದ ಆಸ್ಪತ್ರೆ ವಿದ್ಯಾರ್ಥಿ ನಿಲಯ, ಜೈಲುಗಳಿಗೆ, ಪೂರೈಸುವ ವ್ಯವಸ್ಥೆ ಮಾಡಬೇಕು. ರೈತರ ಎಲ್ಲಾ ಬೆಳೆಗಳಿಗೆ ಬೆಳೆ ವಿಮೆ ಜಾರಿಯಾಗಬೇಕು. ಬೆಳೆವಿಮೆ ಪದ್ಧತಿ ಕೆಲವು ನೀತಿಗಳು ಬದಲಾಗಬೇಕು. ಅತಿವೃಷ್ಟಿ ಪ್ರಕೃತಿ ವಿಕೋಪ ಬೆಳೆನಷ್ಟಕ್ಕೆ ಪರಿಹಾರ ವೈಜ್ಞಾನಿಕವಾಗಿರಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಲಕ್ಷ್ಮಿಪುರ ವೆಂಕಟೇಶ್, ಕಮಲಮ್ಮ, ಅಂಬಳೆ ಮಂಜುನಾಥ್, ಮಹದೇವಸ್ವಾಮಿ, ಸುನಿಲ್ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ನಾನು ಸಾಯ್ತೀನಿ!
ಗಂಡ : ತಗೋ ಡೈರಿ ಮಿಲ್ಕ್!!
ಹೆಂಡತಿ : ಯಾಕೆ?
ಗಂಡ : ಯಾವ್ದೇ ಒಳ್ಳೆ ಕೆಲ್ಸ ಮಾಡೋಕೆ ಮುನ್ನ ಬಾಯಿ ಸಿಹಿ ಮಾಡ್ಬೇಕಂತೆ!!!

ಮೈಸೂರು ಮಿತ್ರ

ಸೋಮವಾರ, 29 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಮುಂದೆ ಗುರಿ ಇರಬೇಕು, ಹಿಂದೆ ಗುರು ಇರಬೇಕು,
ನಂಬಿ ನಡೆದರೆ ಸಾಕು ಸಾರ್ಥಕ ಬದುಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಓದುವಾಗ ಓದು, ಆಡುವಾಗ ಆಡು'

ನಿಮ್ಮ ಪತ್ರಗಳು

■ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಸಾಹಿತ್ಯ ಸಮ್ಮೇಳನ ಉತ್ತಮ ಪ್ರಯೋಗ

ಮಾನ್ಯರೆ,

ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬರುವ ಫೆಬ್ರವರಿ 8 ರಂದು ನಗರದ ಕಲಾಮಂದಿರದಲ್ಲಿ ಆಯೋಜಿಸಿರುವುದು ಸ್ವಾಗತಾರ್ಹವಾಗಿದೆ. ಸಮ್ಮೇಳನದ ಅಧ್ಯಕ್ಷರಾಗಿ ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದಗೌಡರ ಆಯ್ಕೆಯೂ ಸಹ ಅರ್ಥಪೂರ್ಣವಾಗಿದೆ. ಕನ್ನಡ ಸಾಹಿತ್ಯ ಸಮ್ಮೇಳನಗಳ ಬಗ್ಗೆ ಕೆಲವು ವ್ಯತಿರಿಕ್ತ ಟೀಕೆಗಳು ಆಗಾಗ ಕೇಳಿ ಬರುತ್ತಿದ್ದರೂ ಸಹ, ಸಾಹಿತ್ಯ ಸಮ್ಮೇಳನಗಳು ನಿರಂತರವಾಗಿ ನಡೆದುಕೊಂಡು ಬರುತ್ತಿವೆ. ಜಿಲ್ಲಾ ಮಟ್ಟದಲ್ಲಿ, ತಾಲೂಕು ಮಟ್ಟದಲ್ಲಿ, ಇದೀಗ ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯುತ್ತಿರುವುದು ಒಂದು ಸಕಾರಾತ್ಮಕ ಬೆಳವಣಿಗೆ.

ಮುಂಬರುವ ವರ್ಷಗಳಲ್ಲಿ ಪ್ರತಿ ಗ್ರಾಮದಲ್ಲೂ ಸಹ ಇಂತಹ ಸಮ್ಮೇಳನಗಳು ಏರ್ಪಾಡು ಮಾಡುವಂತಾಗಬೇಕು. ಇದು ಕನ್ನಡದ ಹಬ್ಬ, ಕನ್ನಡ ಭಾಷೆ, ಸಂಸ್ಕೃತಿಯ ಅನಾವರಣ. ಇಂತಹ ಸಮ್ಮೇಳನಗಳಲ್ಲಿ ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ಕಲ್ಪಿಸಬೇಕು. ಕನ್ನಡಿಗರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚೆಯಾಗಿ, ಪರಿಹಾರ ಕಂಡುಕೊಳ್ಳಬೇಕು. ಆಡಂಬರ, ಅಬ್ಬರ, ಮುಂತಾದವುಗಳ ಸೋಂಕಿಲ್ಲದೇ, ಕನ್ನಡದ ತೇರು ರಾಜ್ಯಾದ್ಯಂತ ಪ್ರತಿಯೊಂದು ಗ್ರಾಮದಲ್ಲೂ ಸಾಗಬೇಕು. ಈ ದಿಕ್ಕಿನಲ್ಲಿ ಚಾಮರಾಜ ಕ್ಷೇತ್ರದ ಸಮ್ಮೇಳನ ಪೂರಕ ಶಕ್ತಿಯಾಗಿ ಪರಿಣಮಿಸಲಿ.

– ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು.

■ ಮನುಷ್ಯನಿಗೆ ಸಂತೃಪ್ತಿನೇ ಇಲ್ಲ...

ಮಾನ್ಯರೆ,

ರಾಘವೇಂದ್ರ ಸಿ.ಎಸ್. ಅವರು ಬರೆದ 'ಏನೇ ಮಾಡು; ನಿಷ್ಠೆಯಿಂದ ಮಾಡು' ಲೇಖನ ಚೆನ್ನಾಗಿತ್ತು. ಎಂತಹ ಕೆಲಸ ಸಿಕ್ಕರೂ ಸಂತೃಪ್ತಿ ಇಲ್ಲದೆ ಗೊಣಗುತ್ತಾ ಕೆಲಸ ಮಾಡುವವರಿಗೆ ಕಣ್ಣು ತೆರೆಸುವ ಲೇಖನ.

ಕೆಲಸ ಸಿಗುವವರೆಗೂ ಕೆಲಸ ಇಲ್ಲ ಅಂತ ಕೊರಗುತ್ತಾ ಕೂರುವ ಮನುಷ್ಯ, ಕೆಲಸ ಸಿಕ್ಕಿದ ಮೇಲೆ ಆ ಕೆಲಸದಲ್ಲಿ ನೂರು ದೋಷ ಹುಡುಕುತ್ತಾ ಗೊಣಗುತ್ತಾ ಕೆಲಸ ಮಾಡಿದರೆ ಕೆಲಸದಲ್ಲಿ ನಿಷ್ಠೆ, ಪ್ರಾಮಾಣಿಕತೆ ಬರಲು ಸಾಧ್ಯವೇ ಇಲ್ಲ. ಸಿಕ್ಕ ಕೆಲಸವನ್ನು ಪ್ರೀತಿಸುತ್ತಾ ಯಾರ ಜೊತೆಗೂ ತುಲನೆ ಮಾಡಿಕೊಳ್ಳದೆ ನಿಷ್ಠೆಯಿಂದ ಮಾಡುತ್ತಾ ಹೋದರೆ ಅದರಲ್ಲೇ ಸಂತೃಪ್ತಿ ಹೊಂದಬಹುದು. ಜನ ಸೇವೆಯೇ ಮುಖ್ಯ ಗುರಿಯಾಗಿದ್ದರೆ, ಯಾವ ಪಕ್ಷದಲ್ಲಿದ್ದರೂ ಅದನ್ನು ಮಾಡಬಹುದಾದರೂ ತಮ್ಮ ಸ್ವಾರ್ಥಕ್ಕೋಸ್ಕರ ಪಕ್ಷಾಂತರ ಮಾಡುವ ರಾಜಕಾರಣಿಗಳಿಗೂ ಇದು ಅನ್ವಯಿಸುತ್ತದೆ.

– ರಾಘವೇಂದ್ರ ಜೋಯಿಸ್, ಮೈಸೂರು.

■ ಶಾಸಕ ಶಿವಲಿಂಗೇಗೌಡರ ವರ್ತನೆ ಸರಿಯೇ?

ಮಾನ್ಯರೆ,

ಮೊನ್ನೆ ನಡೆದ ಗಣರಾಜ್ಯೋತ್ಸವ ಸಂದರ್ಭದಲ್ಲಿ ಅರಸೀಕೆರೆಯ ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ಶಾಲಾ ಮಕ್ಕಳು ಕಮಲದ ಹೂ ಹಿಡಿದು ನೃತ್ಯ ಮಾಡಿದರು ಎನ್ನುವ ಕಾರಣಕ್ಕೆ ಅಲ್ಲಿನ ಶಾಸಕ ಶಿವಲಿಂಗೇಗೌಡರು ಶಿಕ್ಷಕಿಯನ್ನು ಹಿಗ್ಗಾ ಮುಗ್ಗಾ ಬೈದು ಅದು ಪಕ್ಷವೊಂದರ ಚಿಹ್ನೆಯ ಸಂಕೇತವಾಗಿದ್ದು ಅದನ್ನು ಇಲ್ಲಿಗೇ ತಂದದ್ದು ಏಕೆ ಎಂದು ಹರಿಹಾಯ್ದಿರುವುದು ಈಗ ಬೆಳಕಿಗೆ ಬಂದಿದೆ. ಆ ಮಹಿಳೆ ಓರ್ವ ಶಿಕ್ಷಕಿ ಎನ್ನುವುದು ಗಮನಿಸಬೇಕಾದ ಸಂಗತಿ. ಜೊತೆಗೆ ಅಲ್ಲಿದ್ದ ಅಧಿಕಾರಿಯೊಬ್ಬರು ಅದಕ್ಕೆ ಸಮಜಾಯಿಷಿ ಕೊಟ್ಟರೂ ಒಪ್ಪಲಿಲ್ಲ ಶಿವಲಿಂಗೇಗೌಡರು. ಕಮಲದ ಹೂ ಅಶೋಕ ಚಕ್ರದಂತೆಯೇ ರಾಷ್ಟ್ರೀಯ ಸಂಕೇತ, ನವಿಲು ರಾಷ್ಟ್ರೀಯ ಪಕ್ಷಿ, ಕಮಲದ ಹೂ ರಾಷ್ಟ್ರ ಹೂ. ಆದ್ದರಿಂದ ಬಳಸಿದ್ದೇವೆ ಎಂದು ಹೇಳಿದರೂ ಶಾಸಕರು ಒಪ್ಪಲಿಲ್ಲ.

ಕಮಲ ಒಂದು ಪಕ್ಷದ ಸಂಕೇತ ಅದನ್ನು ತಂದಿದ್ದು ತಪ್ಪು ಎನ್ನುವ ನೀವು (ಅವರು ಜಾತ್ಯತೀತ ಜನತಾ ದಳದಲ್ಲಿದ್ದಾಗ ಹೀಗಿರಲಿಲ್ಲ) ನಿಮ್ಮ ಪಕ್ಷದ ಚಿಹ್ನೆಯಾದ ಹಸ್ತ (ಕೈ ಹಸ್ತ) ಸರ್ಕಾರಿ ಸಭೆ–ಸಮಾರಂಭಕ್ಕೆ ಬರುವವರು ಕಟ್ ಮಾಡಿಕೊಂಡು ಬರಬೇಕೇ. ಹಾಗೆಂದು ಫರ್ಮಾನು ಹೊರಡಿಸಿ. ನಿಮ್ಮದು ಇದು ಸಿದ್ದರಾಮಯ್ಯನವರನ್ನು ಮೆಚ್ಚಿಸುವ ಪರಿಯೇ ಅಥವಾ ಉದ್ಧಟತನದ ಪರಮಾವಧಿಯೇ ತಿಳಿಸಿ.

ಮಾನ್ಯ ಶಾಸಕರೇ ಯಾರನ್ನೋ ಮೆಚ್ಚಿಸಲು ಇನ್ಯಾರನ್ನೋ ಕಸವಾಗಿ ಕಾಣಬೇಡಿ. ಅದಕ್ಕೆ ಬೆಲೆ ತೆರುವ ದಿನ ದೂರವಿರುವುದಿಲ್ಲ. ಎಚ್ಚರ. ನಿಮ್ಮ ಈ ವರ್ತನೆಗೆ ಧಿಕ್ಕಾರವಿರಲಿ.

– ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು.

■ ಮೈತ್ರಿ ಓಕೆ, ಆದರೆ ತಪ್ಪು ಮರುಕಳಿಸದಿರಲಿ!

ಮಾನ್ಯರೇ,

ಒಮ್ಮೆ ಆ ಕಡೆ, ಒಮ್ಮೆ ಈ ಕಡೆ
ಹಾರುವ ನಿತೀಶರ ನಡೆ ನಿಗೂಢ...
ಅಧಿಕಾರ ಅಲ್ಲೂ ಬೇಕು ಇಲ್ಲೂ ಬೇಕು
ಒಟ್ನಲ್ಲಿ ಎಂಥಾ ಮೈತ್ರಿಗೂ ಸದಾ ಸಿದ್ಧ
ಎನ್ನುವ ನಿತೀಶರನ್ನು ಎಲ್ಲರೂ ನಂಬುತ್ತಾ
ಬಂದಿರುವುದು ನಿಜಕ್ಕೂ ಪವಾಡ!
ಮೈತ್ರಿ ಇರಲಿ ಪರವಾಗಿಲ್ಲ. ಆದರೆ....
ಈ ಹಿಂದೆ ಆದ ತಪ್ಪುಗಳು, ಸಂಕಷ್ಟಗಳು
ಮರುಕಳಿಸದಂತೆ ರಾಜಕೀಯ ಪಕ್ಷಗಳು
ಎಚ್ಚರವಹಿಸಲಿ!

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಒಣಗಿದ ಮರ ತೆರವುಗೊಳಿಸಿ



ಮಾನ್ಯರೇ,

ಮೈಸೂರು–ಹುಣಸೂರು ರಸ್ತೆಯಲ್ಲಿರುವ ಬಸ್ ನಿಲ್ದಾಣದ ಹಿಂಭಾಗ (ಬಿ.ಎಂ. ಆಸ್ಪತ್ರೆ ಪಕ್ಕದಲ್ಲಿರುವ ಉದ್ಯಾನವನ) ಬೃಹತ್ ಗಾತ್ರದ ಮರವಿದ್ದು, ಕೂಡಲೇ ತೆರವುಗೊಳಿಸಬೇಕು. ಈ ಮರವು ಒಣಗಿದ್ದು, ಗಾಳಿ, ಮಳೆಗೆ ಯಾವುದೇ ಸಂದರ್ಭದಲ್ಲಾದರೂ ಬಿದ್ದು ಪ್ರಾಣಹಾನಿ ಆಗುವ ಸಂಭವವಿದೆ. ಅನಾಹುತ ಸಂಭವಿಸುವ ಮೊದಲೇ ಪಾಲಿಕೆ ಅಧಿಕಾರಿಗಳು ಎಚ್ಚೆತ್ತು ಈ ಮರವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.

– ಬಸವರಾಜ್, ನಿವೃತ್ತ ರೈಲ್ವೆ ಅಧಿಕಾರಿ.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಸ್ವರ್ಗ–ನರಕ ಎರಡೂ ನಿನ್ನ ಕೈಯಲ್ಲಿದೆ ತಿಳಕ...!

ಭೂಮಿಯ ಮೇಲೆ ಜನ್ಮ ತಾಳುವ ಕೋಟ್ಯಾಂತರ ಜೀವಿಗಳಲ್ಲಿ ಬಹುಶಃ ಮನುಷ್ಯನೊಬ್ಬನೇ ಸ್ವರ್ಗ–ನರಕ ಎಂದು ಪರಿಭಾವಿಸಿ ಪರಿತಪಿಸುತ್ತಿರುವುದು ಅನಿಸುತ್ತದೆ. ಬೇರಾವ ಜೀವಿಗಳು ತಮ್ಮ ಬದುಕಿನ ಹೊರತಾಗಿ ಚಿಂತಿಸುವುದಿಲ್ಲ. ತಾವಾಯಿತು, ತಮ್ಮ ಆಹಾರ–ಆಶ್ರಯವಾಯಿತು, ತಮ್ಮ ಕುಟುಂಬವಾಯಿತು ಎಂದು ಬದುಕುವ ಕಲೆಯನ್ನು ಕರಗತ ಮಾಡಿಕೊಂಡಿವೆ. ಆದರೆ ಮನುಷ್ಯ ಮಾತ್ರ ಇಲ್ಲಸಲ್ಲದ ಸಂಗತಿಗಳನ್ನು ಚಿಂತಿಸಿ, ನಿರೀಕ್ಷಿಸಿ, ಅದರಿಂದ ವ್ಯಥೆ ಪಟ್ಟು ಕೊರಗುತ್ತಿರುತ್ತಾನೆ. ಮನುಷ್ಯನಿಗೆ ತಾನು ಭೂಮಿಯ ಮೇಲೆ ಎಷ್ಟು ವರ್ಷ ಬದುಕಿರುತ್ತೇನೆ, ಅಷ್ಟು ವರ್ಷ ಎಷ್ಟು ಅರ್ಥಪೂರ್ಣವಾಗಿ ಬದುಕಲು ಯೋಜಿಸಬೇಕಿದೆ ಎಂಬುವುದಕ್ಕಿಂತ ತಾನು ಸತ್ತ ಮೇಲೆ ಸ್ವರ್ಗಕ್ಕೆ ಹೋಗುತ್ತೇನೇಯೇ? ನರಕಕ್ಕೆ ಹೋಗುತ್ತೆನೆಯೇ? ಪುನರ್ಜನ್ಮವಿದೆಯೇ? ಎಂಬುವುದರ ಕುರಿತು ಚಿಂತಿಸುತ್ತಿರುತ್ತಾನೆ. ನರಕದ ಕುರಿತು ಚಿಂತಿಸುವ ಭರದಲ್ಲಿ ಜೀವಿತಾವಧಿಯಲ್ಲಿ ಇರುವ ಸ್ವರ್ಗ–ಸುಖವನ್ನು ಮರೆಯುತ್ತಾ ಇರುತ್ತಾನೆ. ಮನುಷ್ಯನ ದೌರ್ಬಲ್ಯವೇನೆಂದರೆ ಅವನು ವರ್ತಮಾನದಲ್ಲಿ ಬದುಕುವುದಕ್ಕಿಂತ ಹೆಚ್ಚಾಗಿ ಭವಿಷ್ಯತ್ ಕಾಲದ ಊಹೆಯಲ್ಲಿ ಅಥವಾ ಭೂತಕಾಲದ ಕನವರಿಕೆಯಲ್ಲಿಯೇ ತನ್ನ ಜೀವನದ ಬಹುತೇಕ ಸಮಯವನ್ನು ಕಳೆದುಬಿಡುತ್ತಾನೆ. ಆ ಕಾರಣಕ್ಕೆ ಆಧ್ಯಾತ್ಮ ಗುರು ಓಶೋ ರಜನೀಶ್ ಅವರು ಮನುಷ್ಯ ಸತ್ತ ಮೇಲೆ ಸ್ವರ್ಗಕ್ಕೆ ಹೋಗುತ್ತಾನಾ ಅಥವಾ ನರಕಕ್ಕೆ ಹೋಗುತ್ತಾನಾ ಎಂಬುದು ಪ್ರಶ್ನೆಯಲ್ಲ, ಅವನು ಬದುಕಿದ್ದಾಗ ಬದುಕಿದ್ದನಾ? ಎಂಬುದೇ ಪ್ರಶ್ನೆ ಎನ್ನುತ್ತಾರೆ. ಅಂದರೆ ಮನುಷ್ಯ ತನ್ನ ಸುಂದರ ಬದುಕನ್ನು ಅರ್ಥಪೂರ್ಣವಾಗಿ ಬದುಕುವುದನ್ನೇ ಮರೆಯುತ್ತಿದ್ದಾನೆ ಎಂದರ್ಥ.

ಮನುಷ್ಯ ಸತ್ತ ಮೇಲೆ ಸ್ವರ್ಗಕ್ಕೆ ಅಥವಾ ನರಕಕ್ಕೆ ಹೋಗುತ್ತಾನೋ ಇಲ್ಲವೋ ! ಆದರೆ ಬದುಕಿದ್ದಾಗ ಮಾತ್ರ ಇವೆರಡನ್ನೂ ಕಾಣುವ ಅವಕಾಶವಂತೂ ಇರುತ್ತದೆ. ಅನೇಕರು ತಾವು ಸ್ವರ್ಗ ಸದೃಶವಾದ ಬದುಕನ್ನು ಹೊಂದಿದ್ದರೂ ಅದನ್ನು ಅನುಭವಿಸದೇ ತಮ್ಮ ಬದುಕನ್ನು ನರಕ ಸದೃಶ ಮಾಡಿಕೊಳ್ಳುತ್ತಾರೆ. ಅವರಿಗೆ ನೆಮ್ಮದಿಯ ವಾತಾವರಣವಿದ್ದರೂ ನೆಮ್ಮದಿಯಾಗಿ ಆಸ್ವಾದಿಸುವ ಮನೋಭಾವ ಇರುವುದಿಲ್ಲ. ಬಹುತೇಕರಿಗೆ ಇದೊಂದು ಮಾನಸಿಕ ಕಾಯಿಲೆ. ಅವರಿಗೆ ಪ್ರತಿನಿತ್ಯ ಎಷ್ಟೇ ಸುಮಧುರ ಕ್ಷಣಗಳು ಕಣ್ಣಮುಂದೆ ಕಂಡರೂ ಅವುಗಳನ್ನು ನಿರ್ಲಕ್ಷಿಸಿ, ಸದಾ ಋಣಾತ್ಮಕವಾದ ಮಾತುಗಳನ್ನೇ ಆಡುತ್ತಿರುತ್ತಾರೆ. ಅಷ್ಟೇ ಅಲ್ಲದೆ ತಮ್ಮ ಸುತ್ತಮುತ್ತ ಇರುವ ಜನರ ಒಳ್ಳೆಯ ಸಮಯವನ್ನು ಹಾಳುಗೆಡವುತ್ತಾರೆ. ಆಂಗ್ಲ ಲೇಖಕ ನೀಲ್ ರಿಚರ್ಡ್ ಗೈಮನ್ ನರಕ ಎಂಬುದು ನೀನು ಹೋಗುವ ಒಂದು ಸ್ಥಳವಲ್ಲ, ಬದಲಿಗೆ ನೀನೆ ನೀನು ಹೋದಲ್ಲಿಗೆ ಒಯ್ಯುವ ಒಂದು ಸಂಗತಿ ಎಂದು ಭಾವಿಸಿದ್ದೇನೆ ಎಂದು ಹೇಳಿದ್ದಾರೆ. ನರಕ ಎಲ್ಲೂ ಇಲ್ಲ, ಆದರೆ ಕೆಲವರು ಮಾತ್ರ ಸದಾ ತಮ್ಮೊಟ್ಟಿಗೆ ನರಕವನ್ನು ಒಯ್ಯುತ್ತಾರೆ. ತಾವು ನರಕಯಾತನೆ ಅನುಭವಿಸುವುದರ ಜೊತೆಗೆ ಬೇರೆಯವರಿಗೂ ಅನುಭವಿಸುವಂತೆ ಮಾಡಿ ಒಂದು ರೀತಿಯ ಶಿಕ್ಷೆಯನ್ನೇ ವಿಧಿಸುತ್ತಾರೆ.

ಸ್ವರ್ಗ ಹಾಗೂ ನರಕ ಎಂಬುದು ಮನುಷ್ಯನ ಮನಸ್ಥಿತಿ ಎನ್ನಬಹುದು. ಅನೇಕರು ಕುಳಿತಲ್ಲಿಯೇ ಸರ್ವಸುಖವನ್ನು ಬಯಸುತ್ತಾರೆ. ಅವರಿಗೆ ಒಂದು ಸಣ್ಣ ಕೆಲಸ ಹೇಳಿದರೂ ಗೊಣಗಿಕೊಂಡೇ ಮಾಡುತ್ತಾರೆ. ದುಡಿದು ತಿನ್ನುವುದು ಯಾವ ಸ್ವರ್ಗಕ್ಕೂ ಕಮ್ಮಿಯಿಲ್ಲ ಎಂಬ ಅರಿವೇ ಇರುವುದಿಲ್ಲ. ಆದರೆ ಮತ್ತೆ ಕೆಲವರು ಕಾಯಕವೇ ಕೈಲಾಸ ಎಂದು ಭಾವಿಸಿ ತಮ್ಮ ಪರಿಶ್ರಮದ ದುಡಿಮೆಯಲ್ಲೂ ಸುಖವನ್ನು ಕಾಣುತ್ತಾರೆ. ಸೋಮಾರಿಯಾದವರಿಗೆ ಒಮ್ಮೊಮ್ಮೆ ವಿಶ್ರಾಂತಿಯೂ ನರಕ ಎನಿಸಿಬಿಡಬಹುದು. ಆದರೆ ಶ್ರಮಜೀವಿಗೆ ಕೆಲಸವೂ ಸ್ವರ್ಗವಾಗಿ ಪರಿಣಮಿಸಬಹುದು. ಅದು ಅವರವರ ಮನಸ್ಥಿತಿ ಮೇಲೆ ಅವಲಂಭಿಸಿದೆ.

ಮನುಷ್ಯ ಎಷ್ಟೇ ಬುದ್ಧಿವಂತನಾದರೂ ಅನೇಕ ಪ್ರಾಣಿ–ಪಕ್ಷಿಗಳಿಂದ ಕಲಿಯುವ ಅನೇಕ ಪಾಠಗಳಿವೆ. ಮನುಷ್ಯ ಕಷ್ಟವೇ ಇಲ್ಲದೆ ಸುಖದ ಸುಪ್ಪತ್ತಿಗೆ ಏರಲು ಬಯಸುತ್ತಾನೆ. ಯಾವುದೇ ಪ್ರಾಣಿಪಕ್ಷಿಯು ಕುಳಿತಲ್ಲಿಯೇ ಎಲ್ಲವನ್ನೂ ಬಯಸುವುದಿಲ್ಲ. ತಮ್ಮ ಆಹಾರ ಸಂಪಾದನೆಯನ್ನು ಕಷ್ಟಪಟ್ಟು ಸಂಪಾದಿಸಿ ಬದುಕುವ ಕ್ರಮವನ್ನು ಅನುಸರಿಸುತ್ತಿವೆ. ಅಷ್ಟೇ ಅಲ್ಲ ನಿರೀಕ್ಷೆಯಿಲ್ಲದೆ ಬದುಕುವ ಜಾಯಮಾನ ಅವುಗಳದ್ದಾಗಿದೆ. ಪಕ್ಷಿಯೊಂದು ಹಾಡುತ್ತದೆ ಎಂದರೆ ಅದು ಕೈಚಪ್ಪಾಳೆಯನ್ನು ಬಯಸುವುದಿಲ್ಲ. ಆದರೆ ಮನುಷ್ಯ ತಾನು ಮಾಡುವ ಪ್ರತಿಯೊಂದು ಕ್ರಿಯೆಯಲ್ಲೂ ಏನಾದರೂ ನಿರೀಕ್ಷೆಯನ್ನು ಹೊಂದಿರುತ್ತಾನೆ. ಅವನಿಗೆ ನಿರೀಕ್ಷೆಯಂತೆ ನಡೆಯದಿದ್ದರೆ ನಿರಾಸೆಯಾಗುತ್ತದೆ. ಅದರಿಂದಲೇ ಇರುವ ಸಂತೋಷವನ್ನು ಕಳೆದುಕೊಳ್ಳುತ್ತಾನೆ. ಪ್ರಾಣಿ–ಪಕ್ಷಿಗಳಂತೆ ಅನ್ಯರಿಗೋಸ್ಕರ ಬದುಕದೆ ಮನುಷ್ಯರು ತಮಗೋಸ್ಕರ ಬದುಕಿದರೆ ಬದುಕು ರಸಮಯವಾಗುತ್ತದೆ. ಬೇರೆಯವರನ್ನು ಮೆಚ್ಚಿಸಲು ಬದುಕಿದರೆ ಬದುಕಿನಲ್ಲಿ ಯಾತನೆ ಹೆಚ್ಚಾಗಿ ರಸ ಮಾಯವಾಗುತ್ತದೆ ಅಷ್ಟೆ.

ಇಂದಿನ ಆಧುನಿಕ ಬದುಕಿನಲ್ಲಿ ಎಲ್ಲವೂ ಲಾಭನಷ್ಟಗಳ ಲೆಕ್ಕಾಚಾರದಲ್ಲಿಯೇ ನಡೆಯುತ್ತದೆ. ನನಗೇನೂ ಲಾಭ ಎಂಬ ಪ್ರಶ್ನೆಯನ್ನು ದಿನದಲ್ಲಿ ಅನೇಕ ಬಾರಿ ಮನುಷ್ಯ ಚಿಂತಿಸುತ್ತಿರುತ್ತಾನೆ. ಲಾಭವಾದ ಮೇಲೂ ನೆಮ್ಮದಿಯಾಗಿ ಇರುತ್ತಾನೆಯೇ? ಎಂದು ಪ್ರಶ್ನಿಸಿದರೆ ಇಲ್ಲ. ಮತ್ತಷ್ಟು ಲಾಭದ ಆಸೆ ಮನುಷ್ಯನನ್ನು ನಿರಂತರವಾಗಿ ಚಿಂತೆಯಲ್ಲಿ ಇರುವಂತೆ ಮಾಡುತ್ತದೆ. ಬೇಡುವುದರಲ್ಲಿ ಸುಖ ಕಾಣುವ ಮನುಷ್ಯನಿಗೆ ನೀಡುವುದರಲ್ಲಿಯೂ ಸುಖವಿದೆ ಎಂಬ ಸತ್ಯದ ಅರಿವಿರುವುದಿಲ್ಲ. ಗಳಿಸಿ ಉಳಿಸಿದರೆ ಸಾಕು ನಾನು ಸ್ವರ್ಗ ಕಾಣಬಲ್ಲೆ ಅಂದುಕೊಳ್ಳುತ್ತಾನೆ. ಆದರೆ ದುರಾಸೆಯಿಂದ ಮತ್ತೆ ಗಳಿಕೆಯೆಡೆಗೆ ಮುಖ ಮಾಡುತ್ತಾನೆ. ತನಗೆ ಎಷ್ಟು ಬೇಕೋ ಅಷ್ಟು ಇಟ್ಟುಕೊಂಡು ಗಳಿಸಿದ್ದರಲ್ಲಿ ಉಳಿದದ್ದನ್ನು ಅವಶ್ಯಕತೆ ಇರುವವರಿಗೆ ದಾನ ಧರ್ಮ ಮಾಡಿದಲ್ಲಿ ಸ್ವರ್ಗ ಹುಡುಕಿಕೊಂಡು ಹೋಗಬೇಕಿಲ್ಲ. ನೆರವು ಪಡೆದವರ ಕಣ್ಣಿನಲ್ಲಿ ಒಂದು ಸಮಾಧಾನ ಭಾವ, ಕೃತಜ್ಞತಾ ಭಾವ ಇರುತ್ತದೆಯಲ್ಲಾ ಅದು ಮನುಷ್ಯನಿಗೆ ಬೆಲೆ ಕಟ್ಟಲಾಗದ ಸಂತೋಷವನ್ನು ನೀಡುತ್ತದೆ. ಅದು ಎಲ್ಲರ ಅನುಭವಕ್ಕೂ ಬಂದಿರುವುದಿಲ್ಲ. ಏಕೆಂದರೆ ಅವರ ಹಸ್ತ ಏನನ್ನಾದರೂ ಪಡೆಯಲು ಆಕಾಶ ನೋಡುತ್ತದೆಯೇ ಹೊರತು, ಏನನ್ನಾದರೂ ನೀಡಲು ಭೂಮಿಯನ್ನು ನೋಡುವುದಿಲ್ಲ. ಯಾವ ಮನುಷ್ಯ ಸಹಾಯಹಸ್ತ ಚಾಚುತ್ತಾನೆಯೋ ಆತನಿಗೆ ಸತ್ತ ಮೇಲೆ ಸ್ವರ್ಗ ಬಯಸಬೇಕಾದುದೇ ಇಲ್ಲ. ಏಕೆಂದರೆ ಅವನು ಬದುಕಿ ದ್ದಾಗಲೇ ಅದನ್ನು ಕಂಡುಕೊಂಡಿರುತ್ತಾನೆ. ಸಾರ್ಥಕ ಬದುಕು ಕಂಡವನಿಗೆ ಬದುಕು ಸ್ವರ್ಗಮಯವಾಗಿರುತ್ತದೆ.

ಅನೇಕರಿಗೆ ಅಂತಹ ಹೇಳಿಕೊಳ್ಳುವಂತಹ ಕಷ್ಟಗಳೇನೂ ಇರುವುದಿಲ್ಲ. ಅವರನ್ನು ಕಂಡವರಿಗೆ ಭಗವಂತ ನಮಗೆ ಇವರಂತಹ ಬದುಕನ್ನು ಕೊಟ್ಟರೆ ಸಾಕು ಎನ್ನುವಂತೆ ಅವರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿ ಇರುತ್ತದೆ. ಆದರೂ ಸಹ ಅವರು ಸಮಾಧಾನ, ತೃಪ್ತಿ ಹೊಂದಿರುವುದಿಲ್ಲ. ಸದಾ ಅಸಮಾಧಾನ, ಅತೃಪ್ತಿಯಲ್ಲಿಯೇ ಬೇಯುತ್ತಿರುತ್ತಿರುತ್ತಾರೆ. ಇವರು ಇರುವ ಸುಖವನ್ನು ಕಾಣದೆ ಕಷ್ಟವನ್ನು ಕೊಂಡುಕೊಂಡು ಬದುಕುವಂತಹ ಅಭ್ಯಾಸ ಹೊಂದಿರುತ್ತಾರೆ.

ಇನ್ನೂ ಕೆಲವರು ಇರುತ್ತಾರೆ. ಅವರಿಗೆ ಸಣ್ಣ ಕಷ್ಟ ಬಂದರೂ ಜಗತ್ತಿನಲ್ಲಿ ತನ್ನನ್ನು ಹೊರತುಪಡಿಸಿ ಬೇರಾರಿಗೂ ಕಷ್ಟಗಳೇ ಇಲ್ಲವೇನೋ ಎಂದು ಭಾವಿಸುತ್ತಾರೆ. ಬೆಟ್ಟದಷ್ಟು ಸುಖ ಇದ್ದರೂ, ಸಣ್ಣ ಕಲ್ಲಿನಷ್ಟು ಇರುವ ಸುಖವನ್ನು ಬೆಟ್ಟಮಾಡಿ ಸ್ವಯಂ ಕಷ್ಟಕ್ಕೆ ದೂಡಿಕೊಂಡು, ನನ್ನದೂ ಒಂದು ಬದುಕಾ ಎಂದು ಬೈದಾಡಿಕೊಂಡು ತಿರುಗಾಡುತ್ತಿರುತ್ತಾರೆ. ಅನೇಕರಿಗೆ ಈ ಭೂಮಿಯೇ ಒಂದು ನರಕದ ಗ್ರಹ ಎಂದು ಭಾಸವಾಗುತ್ತಿರುತ್ತದೆ. ಅವರು ಈ ಭೂಮಿಯ ಮೇಲೆ ಒಳ್ಳೆಯದನ್ನು ನೋಡುವುದಾಗಲೀ, ಗುರುತಿಸುವುದಾಗಲೀ ಮಾಡುವುದಿಲ್ಲ, ಸದಾ ಕೆಟ್ಟದನ್ನೇ ನೋಡುತ್ತಾ, ಕೆಟ್ಟದ್ದನ್ನೇ ಮಾತನಾಡುತ್ತಾ, ಕೆಟ್ಟದ್ದನ್ನೇ ಪ್ರಚಾರ ಮಾಡುತ್ತಾ ಸುದ್ದಿ ಮಾಧ್ಯಮಗಳ ರೀತಿ ಪದೇ ಪದೇ ಅದನ್ನೇ ವದರುತ್ತಾ ನರಕವನ್ನು ಸೃಷ್ಟಿ ಮಾಡಿಬಿಡುತ್ತಾರೆ. ಅವರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗಿ ಬಿಟ್ಟರೂ ಕೆಲವೇ ದಿನಗಳಲ್ಲಿ ಅದನ್ನು ನರಕವಾಗಿ ಪರಿವರ್ತಿಸಿಬಿಡುತ್ತಾರೆ.

ಭೂಮಿಯ ಮೇಲಿನ ಬದುಕು ನಿಜಕ್ಕೂ ಸುಂದರಮಯವಾಗಿರುತ್ತದೆ. ಅದನ್ನು ತೆರೆದ ಕಣ್ಣಿನಿಂದ ನೋಡಿದರೆ ಸಾಲದು, ತೆರೆದ ಮನಸ್ಸಿನಿಂದ ನೋಡಿ ಆಸ್ವಾದಿಸಬೇಕು. ಕಷ್ಟ, ನೋವು, ಖಾಯಿಲೆ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ದಿನ ಕಾಡುತ್ತಲೇ ಇರುತ್ತದೆ. ಇವುಗಳು ಬದುಕಿನ ಅಂಗ ಎಂದು ಭಾವಿಸಿ, ಬಂದದ್ದು ಬರಲಿ ಮಹದೇವನ ದಯೆ ಇರಲಿ ಎಂದು ಮುನ್ನುಗ್ಗುತ್ತಿದ್ದರೆ ಸ್ವರ್ಗ ಹುಡುಕಿಕೊಂಡು ಹೋಗಬೇಕಿಲ್ಲ. ಐದಾರು ಜನರಿಗೆ ಇರುವ ಕಷ್ಟ ಒಬ್ಬರಿಗೇ ಇದ್ದರೂ ಅವುಗಳನ್ನು ನಗುನಗುತ್ತಾ ಸ್ವೀಕರಿಸಿ ಬದುಕನ್ನು ಹಸನು ಮಾಡಿಕೊಂಡಿರುವ ಅನೇಕರು ನಮ್ಮೊಟ್ಟಿಗೆ ಇದ್ದಾರೆ. ಅವರನ್ನು ಮಾದರಿಯಾಗಿ ಸ್ವೀಕರಿಸಿ ಬದುಕಬೇಕು.


ಸ್ವರ್ಗ–ನರಕ ಎಲ್ಲಾ ಬೇರೆಲ್ಲೂ ಇಲ್ಲ. ಅವೆರಡೂ ನಮ್ಮ ಕೈಯಲ್ಲಿಯೇ ಇವೆ. ಮನಸ್ಸು ಮಾಡಿದರೆ ಮನುಷ್ಯ ಸ್ವರ್ಗವನ್ನು ಕಂಡುಕೊಳ್ಳಬಲ್ಲ, ಹಾಗೆಯೇ ಇದ್ದಲ್ಲಿಯೇ ನರಕವನ್ನೂ ಸೃಷ್ಟಿಸಬಲ್ಲ. ಬದುಕಿನ ವ್ಯಾಖ್ಯಾನ ಒಬ್ಬೊಬ್ಬರಿಗೆ ಒಂದೊಂದು ರೀತಿ ಕಾಣುತ್ತದೆ. ಸೋಲು–ಗೆಲುವು, ಕಷ್ಟ–ಸುಖ, ಹುಟ್ಟು–ಸಾವು ಇವುಗಳು ಎಲ್ಲರಿಗೂ ಒಂದೇ ತೆರನಾಗಿ ಕಾಣುವುದಿಲ್ಲ. ಇವುಗಳನ್ನು ಕಾಣುವಲ್ಲಿ ನಮ್ಮ ಮನೆಯ ಪರಿಸ್ಥಿತಿ, ಬಂಧು–ಬಳಗ, ಶಿಕ್ಷಣ, ಅನುಭವ ಎಲ್ಲವೂ ಕಾರಣವಾಗಿರುತ್ತದೆ. ಅನೇಕ ದಿವ್ಯಾಂಗರು ತಮಗೆ ಅಂಗಾಂಗಗಳ ಕೊರತೆ ಇದ್ದರೂ, ತಮ್ಮ ಶಕ್ತಿ ಮೀರಿ ಪ್ರಯತ್ನಿಸಿ ಏನಾದರೂ ಸಾಧಿಸಿ, ದುಡಿಮೆ ಮಾಡಿ ಪ್ರತಿದಿನ ಹೋರಾಟದ ಬದುಕನ್ನು ನಡೆಸಿ ನಗೆಸೂಸುತ್ತಾರೆ. ಎಲ್ಲಾ ಅಂಗಾಂಗಗಳು ಸರಿಯಿದ್ದರೂ ನನ್ನ ಕೈಯಲ್ಲಿ ಏನೂ ಆಗದು ಎಂದು ಭಾವಿಸಿ, ತನ್ನ ಅದೃಷ್ಟ ಸರಿಯಿಲ್ಲ ಎಂದು ನಿತ್ಯ ಗೊಣಗಿಕೊಂಡು ಹೆತ್ತವರಿಗೆ ಭಾರವಾಗಿ ಬದುಕುವವರೂ ಇದ್ದಾರೆ. ಬದುಕಿನಲ್ಲಿ ಅನಿರೀಕ್ಷಿತವಾಗಿ ಎದುರಾಗುವ ಪರಿಸ್ಥಿತಿಗಳಿಗೆ ಹೊಂದಿಕೊಂಡು ಬದುಕಿದರೆ ಬದುಕು ಸ್ವರ್ಗ, ಅಂದುಕೊಂಡಂತೆ ಬದುಕಲು ಪ್ರಯತ್ನಿಸಿದರೆ ಬದುಕು ನರಕವೇ ಸರಿ. ಏನಂತೀರಿ?

ಪದ ತಾಂಬೂಲ : ಇರುವ ಸ್ವರ್ಗವ ಬಿಟ್ಟು ನರಕ ಹುಡುಕಿ ಹೊರಟವರಿಗೆ ಸ್ವರ್ಗ ಎಂದಿಗೂ ಸಿಗದು.



> “ ಸ್ವರ್ಗ ನರಕ ಎಲ್ಲಾ ಬೇರೆಲ್ಲೂ ಇಲ್ಲ. ಅವೆರಡೂ ನಮ್ಮ ಕೈಯಲ್ಲಿಯೇ ಇವೆ. ಮನಸ್ಸು ಮಾಡಿದರೆ ಮನುಷ್ಯ ಸ್ವರ್ಗವನ್ನು ಕಂಡುಕೊಳ್ಳಬಲ್ಲ, ಹಾಗೆಯೇ ಇದ್ದಲ್ಲಿಯೇ ನರಕವನ್ನೂ ಸೃಷ್ಟಿಸಬಲ್ಲ. ಬದುಕಿನ ವ್ಯಾಖ್ಯಾನ ಒಬ್ಬೊಬ್ಬರಿಗೆ ಒಂದೊಂದು ರೀತಿ ಕಾಣುತ್ತದೆ. ಸೋಲು–ಗೆಲುವು, ಕಷ್ಟ–ಸುಖ, ಹುಟ್ಟು–ಸಾವು ಇವುಗಳು ಎಲ್ಲರಿಗೂ ಒಂದೇ ತೆರನಾಗಿ ಕಾಣುವುದಿಲ್ಲ. ಇವುಗಳನ್ನು ಕಾಣುವಲ್ಲಿ ನಮ್ಮ ಮನೆಯ ಪರಿಸ್ಥಿತಿ, ಬಂಧು–ಬಳಗ, ಶಿಕ್ಷಣ, ಅನುಭವ ಎಲ್ಲವೂ ಕಾರಣವಾಗಿರುತ್ತದೆ. ಅನೇಕ ದಿವ್ಯಾಂಗರು ತಮಗೆ ಅಂಗಾಂಗಗಳ ಕೊರತೆ ಇದ್ದರೂ, ತಮ್ಮ ಶಕ್ತಿ ಮೀರಿ ಪ್ರಯತ್ನಿಸಿ ಏನಾದರೂ ಸಾಧಿಸಿ, ದುಡಿಮೆ ಮಾಡಿ ಪ್ರತಿದಿನ ಹೋರಾಟದ ಬದುಕನ್ನು ನಡೆಸಿ ನಗೆಸೂಸುತ್ತಾರೆ. ಎಲ್ಲಾ ಅಂಗಾಂಗಗಳು ಸರಿಯಿದ್ದರೂ ನನ್ನ ಕೈಯಲ್ಲಿ ಏನೂ ಆಗದು ಎಂದು ಭಾವಿಸಿ, ತನ್ನ ಅದೃಷ್ಟ ಸರಿಯಿಲ್ಲ ಎಂದು ನಿತ್ಯ ಗೊಣಗಿಕೊಂಡು ಹೆತ್ತವರಿಗೆ ಭಾರವಾಗಿ ಬದುಕುವವರೂ ಇದ್ದಾರೆ. ಬದುಕಿನಲ್ಲಿ ಅನಿರೀಕ್ಷಿತವಾಗಿ ಎದುರಾಗುವ ಪರಿಸ್ಥಿತಿಗಳಿಗೆ ಹೊಂದಿಕೊಂಡು ಬದುಕಿದರೆ ಬದುಕು ಸ್ವರ್ಗ, ಅಂದುಕೊಂಡಂತೆ ಬದುಕಲು ಪ್ರಯತ್ನಿಸಿದರೆ ಬದುಕು ನರಕವೇ ಸರಿ.

ಅಖಾಡದಲ್ಲಿ ಧೂಳೆಬ್ಬಿಸಿದ ಪೈಲ್ವಾನರು; ರೋಚಕತೆಯಲ್ಲಿ ತೇಲಿದ ಕುಸ್ತಿ ಅಭಿಮಾನಿಗಳು



ಭಾನುವಾರ ನಡೆದ ನಾಡಕುಸ್ತಿ ಪಂದ್ಯಾವಳಿಯಲ್ಲಿ ಪೈಲ್ವಾನರು ಗೆಲುವಿಗಾಗಿ ಕಾದಾಡಿದರು.

ಮೈಸೂರು,ಜ.28(ಪಿಎಂ)– ಅಖಾಡಕ್ಕಿಳಿದು ತೋಳು–ತೊಡೆ ತಟ್ಟಿ ಕಾದಾಟ ನಡೆಸಿ, ಪಟ್ಟಿಗೆ ಪ್ರತಿಪಟ್ಟು ಹಾಕುತ್ತಾ ಪಲ್ಟಿ ಹೊಡೆಯುತ್ತಿದ್ದ ಕುಸ್ತಿ ಪೈಲ್ವಾನ್‌ಗಳು ಧೂಳೆಬ್ಬಿಸುತ್ತಿದ್ದರೆ, ಕುಸ್ತಿ ಅಭಿಮಾನಿಗಳು ರೋಚಕತೆಯಲ್ಲಿ ತೇಲುತ್ತಿದ್ದರು.

ಕುಸ್ತಿ ಅಭಿಮಾನಿಗಳ ಕೌತುಕದ ಕಣ್ಣುಗಳಲ್ಲಿ ಯಾವ ಪೈಲ್ವಾನ್ ಗೆದ್ದುಬೀಗುವರೆಂಬ ಕಾತುರವಿದ್ದರೆ, ಪೈಲ್ವಾನರು ಅಖಾಡದ ಮಟ್ಟಿ ಮಣ್ಣಿನ ಮಜ್ಜನದಲ್ಲಿ ಗೆಲುವಿಗಾಗಿ ಸೆಣಸಾಡುತ್ತಿದ್ದರು. ಮೈಸೂರು ಜಿಲ್ಲಾ ಕುಸ್ತಿ ಸಂಘದ ವತಿಯಿಂದ ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದ ಡಿ.ದೇವರಾಜ ಅರಸು ವಿವಿದೋದ್ದೇಶ ಕ್ರೀಡಾಂಗಣದ ಅಖಾಡದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 30 ಜೊತೆ ನಾಡಕುಸ್ತಿ ಪಂದ್ಯಾವಳಿಯ ರೋಚಕತೆ ಇದು. ಪಾಂಡವಪುರ ಜೈ ಮಾರುತಿ ಹತ್ತು ಜನಗಳ ಗರಡಿಯ ಪೈ.ಸಂತೋಷ್ ಸಿಂಹ ಅವರ ಶಿಷ್ಯ ಪೈ.ಗುರು ಮತ್ತು ಕ್ಯಾತಮಾರನಹಳ್ಳಿ ಜೂ.ಮಹದೇವು ಅವರ ಶಿಷ್ಯ ಪೈ.ರಕ್ಷಿತ್ ಅವರನ್ನು ಕುಸ್ತಿಗೆ ಬಿಡುವ ಮೂಲಕ ಸಂಸದ ಪ್ರತಾಪ್ ಸಿಂಹ ಪಂದ್ಯಾವಳಿಗೆ ಚಾಲನೆ ನೀಡಿದರು.

ಕಾದಾಟಕ್ಕಿಳಿದ ಈ ಇಬ್ಬರು ಪೈಲ್ವಾನರು ಗೆಲುವಿಗಾಗಿ ಸೆಣಸಾಡಿದರು. ಪರಸ್ಪರರೂ ಪ್ರತಿಸ್ಪರ್ಧಿಯ ಚಿತ್ ಮಾಡಲು ಪಟ್ಟು–ಪ್ರತಿಪಟ್ಟುಗಳನ್ನು ಪ್ರಯೋಗಿಸಿದರೂ ಗೆಲುವು ಮಾತ್ರ ಯಾರಿಗೂ ಒಲಿಯಲಿಲ್ಲ. ಈ ಇಬ್ಬರ ಕುಸ್ತಿಗೆ ನಿಗದಿಯಾಗಿದ್ದ 10 ನಿಮಿಷದ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸಮಬಲ ಎಂದು ಘೋಷಿಸಿ ಇವರ ಕುಸ್ತಿಗೆ ಅಂತ್ಯ ಹಾಡಲಾಯಿತು.

ಚಾಮುಂಡಿ ಕ್ರೀಡಾಂಗಣದ ಪೈ.ಮಧು ಅವರ ಶಿಷ್ಯ ಪೈ.ದೀಕ್ಷಿತ್‌ಗೌಡ ಮತ್ತು ಇಸ್ಕಿಯಾನ್ ಗರಡಿ ಪೈ.ಅಜ್ಞಾಮ್ ಅವರ ಮಗ ಪೈ.ಜಯಿನ್ ಖುರೇಸಿ ನಡುವೆ 15 ನಿಮಿಷಗಳ ಪಂದ್ಯ ನಿಗದಿಯಾಗಿತ್ತು. ಆದರೆ ಐದೂವರೆ ನಿಮಿಷದಲ್ಲೇ ಜಯಿನ್ ಖುರೇಸಿ ಎದುರಾಳಿಯನ್ನು ಚಿತ್ ಮಾಡಿ ಗೆಲುವು ಸಾಧಿಸಿದರು.

ಮೈಸೂರು ಇಸ್ಕಿಯಾನ್ ಗರಡಿಯ ಪೈ.ಹಿದಾಯತ್ ಮತ್ತು ಮೈಸೂರು ಪೈ.ಟೈಗರ್ ಬಾಲಾಜಿ ಅವರ ಪುತ್ರ ಪೈ. ಬಲರಾಮ್ ನಡುವಿನ ಪಂದ್ಯ ಕುಸ್ತಿಯ ರೋಚಕತೆ ಉಣಬಡಿಸಿತು. ನಿಗದಿಯಾಗಿದ್ದ 10 ನಿಮಿಷವೂ ಇಬ್ಬರು ಪೈಲ್ವಾನರು ಚಾಕಚಕತ್ಯೆ ಮೆರೆದರು. ಪರಸ್ಪರರೂ ಬೀರುಸಿನಿಂದ ಕಾದಾಡಿದರೂ ಗೆಲುವು ಮಾತ್ರ ಯಾರಿಗೂ ಒಲಿಯಲಿಲ್ಲ. ಅಂತಿಮವಾಗಿ ಸಮಯ ಮುಗಿದ ಹಿನ್ನೆಲೆಯಲ್ಲಿ ಪಂದ್ಯವನ್ನು ಸಮಬಲ ಎಂದು ಘೋಷಣೆ ಮಾಡಲಾಯಿತು.

ಮಳವಳ್ಳಿ ಶ್ರೀರಾಮರೂಡ ಹತ್ತು ಜನಗಳ ಗರಡಿಯ ಪೈ.ವೆಂಕಟೇಶ್ ಅವರ ಪುತ್ರ ಪೈ.ಹರೀಶ್ ನಾಯಕ ಮತ್ತು ಮೇಳಾಪುರ ಹತ್ತು ಜನಗಳ ಗರಡಿ ಪೈ.ಕೃಷ್ಣೇಗೌಡ ಅವರ ಪುತ್ರ ಪೈ.ಚೇತನ್ ನಡುವಿನ ಪಂದ್ಯವೂ ಪ್ರೇಕ್ಷಕರಲ್ಲಿ ರೋಮಾಂಚನ ಉಂಟು ಮಾಡಿತು. 5 ನಿಮಿಷ ನಡೆದ ಪಂದ್ಯದಲ್ಲಿ ಮಳವಳ್ಳಿಯ ಹರೀಶ್ ನಾಯಕ ಗೆದ್ದು ಬೀಗಿದರು.

ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಮಾಜಿ ಮೇಯರ್ ಪುರುಷೋತ್ತಮ್, ಮುಡಾ ಮಾಜಿ ಅಧ್ಯಕ್ಷ ಡಿ.ಧ್ರುವಕುಮಾರ್, ಜಿಲ್ಲಾ ಕುಸ್ತಿ ಸಂಘದ ಅಧ್ಯಕ್ಷ ಪೈ.ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಪೈ.ಸ್ಟಾರ್ ವೆಂಕಟೇಶ್, ಗೌರವಾಧ್ಯಕ್ಷ ಪೈ.ಫೋಟಾ ರಫಿಕ್, ಸಂಘಟನಾ ಅಧ್ಯಕ್ಷ ಪೈ.ಪ್ರಸನ್ನ ರಾಕ್ ನಂಜನಗೂಡು ಮತ್ತಿತರರು ಹಾಜರಿದ್ದರು.

ಶಕ್ತಿ–ಚತುರತೆ ಮೆರೆದ ಛೋಟಾ ಪೈಲ್ವಾನರು

ಅಖಾಡದಲ್ಲಿ ಛೋಟಾ ಪೈಲ್ವಾನರು (ಬಾಲಕರು) ಪರಸ್ಪರ ಮೆರೆದ ಶಕ್ತಿ–ಚತುರತೆ ನೋಡುಗರಲ್ಲಿ ರೋಮಾಂಚನ ಉಂಟು ಮಾಡಿತು. ಕೇವಲ ಒಂದೆರಡು ನಿಮಿಷ ಕಾದಾಡಿದರೂ ಕುಸ್ತಿಯ ರೋಚಕತೆಯನ್ನು ಪ್ರೇಕ್ಷಕರಿಗೆ ಉಣಬಡಿಸುವಲ್ಲಿ ಬನ್ನೂರಿನ ಪೈ.ರೋಚನ್ ಮತ್ತು ಪೈ.ದೀರಜ್ ಯಶಸ್ವಿಯಾದರು. ಅಂತಿಮವಾಗಿ ದೀರಜ್ ತನ್ನ ಎದುರಾಳಿ ರೋಚನ್‌ನನ್ನು ಚಿತ್ ಮಾಡಿ ಗೆಲುವಿನ ನಗೆಬೀರಿದನು.

ಇದಾದ ಬಳಿಕ ಮತ್ತೊಂದು ಬಾಲ ಜೋಡಿ ಅಖಾಡಕ್ಕಿಳಿಯಿತು. ಪರಸ್ಪರರೂ ಪ್ರತಿಸ್ಪರ್ಧಿಯನ್ನು ಅಂಗಾತ ಮಲಗಿಸಿ ಚಿತ್ ಮಾಡಿ ಗೆಲುವು ಸಾಧಿಸಲು ಸೆಣಸಾಡಿದರು. 3 ನಿಮಿಷ ನಡೆದ ಈ ಪಂದ್ಯದಲ್ಲಿ ಎಂಜಿ ಕೊಪ್ಪಲು ಪೈ.ಕೃಷ್ಣಕುಮಾರ್ ಅವರ ಸಾಕುಮಗ ಪೈ.ಅಪ್ಪುವನ್ನು ಪಡುವಾರಹಳ್ಳಿ ಪೈ.ಬಸಂತ ನಾಯಕ ಅವರ ಪುತ್ರ ಪೈ.ಚಿರಂತ್ (ಚಿರತೆ) ಚಿತ್ ಮಾಡಿ ಗೆದ್ದುಬೀಗಿದ. ಇನ್ನು ಹಲವು ಬಾಲ ಜೊಡಿಗಳು ಅಖಾಡಕ್ಕಿಳಿದು ಧೂಳೆಬ್ಬಿಸಿದವು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನಲ್ಲಿ ಸಿಎಆರ್, ಡಿಎಆರ್ ಪೇದೆಗಳ ನೇಮಕಾತಿ ಲಿಖಿತ ಪರೀಕ್ಷೆ

● ತುಂಬುತೋಳು ಕತ್ತರಿಸಿ ಹಾಫ್ ತೋಳು ಮಾಡಿದರು; ಜೀನ್ಸ್ ಪ್ಯಾಂಟ್ ಬಿಚ್ಚಿ ಬೇರೆ ಪ್ಯಾಂಟ್ ಧರಿಸಿದರು ● ಪರೀಕ್ಷಾ ಅಕ್ರಮ ತಡೆಗೆ ವ್ಯಾಪಕ ಮುನ್ನೆಚ್ಚರಿಕಾ ಕ್ರಮ


ಪರೀಕ್ಷೆ ಬರೆಯಲು ಬಂದ ಅಭ್ಯರ್ಥಿಯ ತುಂಬು ತೋಳಿನ ಶರ್ಟ್ ಕತ್ತರಿಸುತ್ತಿರುವುದು.


ಅಭ್ಯರ್ಥಿ ಪಾದರಕ್ಷೆ ಬಿಚ್ಚಿಸಿ, ತಪಾಸಣೆ ನಡೆಸುತ್ತಿರುವುದು.


ಪರೀಕ್ಷಾ ಕೇಂದ್ರದ ಅಭ್ಯರ್ಥಿ ಚಿತ್ರದೊಂದಿಗೆ ದಾಖಲಿಸುತ್ತಿರುವುದು.


ಮೈಸೂರಿನ ಮಹಾರಾಣಿ ಕಲಾ ಕಾಲೇಜಿನಲ್ಲಿ ಭಾನುವಾರ ಸಿಎಆರ್, ಡಿಎಆರ್ ಪೇದೆಗಳ ಆಯ್ಕೆಯ ಲಿಖಿತ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳು.


ಮೈಸೂರು, ಜ.28(ಎಂಟಿವೈ)- ರಾಜ್ಯದ ನಗರ ಮತ್ತು ಜಿಲ್ಲಾ ಸಶಸ್ತ್ರ ಮೀಸಲು ಪಡೆಯಲ್ಲಿ ಖಾಲಿ ಇರುವ ಪೇದೆಗಳ ಹುದ್ದೆ ಭರ್ತಿಗಾಗಿ ಭಾನುವಾರ ಮೈಸೂರಿನ 36 ಕೇಂದ್ರದಲ್ಲಿ ಬಿಗಿ ಭದ್ರತೆಯಲ್ಲಿ ನಡೆದ ಲಿಖಿತ ಪರೀಕ್ಷೆಯಲ್ಲಿ ಸಾವಿರಾರು ಮಂದಿ ಪುರುಷ ಅಭ್ಯರ್ಥಿಗಳು ಪಾಲ್ಗೊಂಡಿದ್ದರು.

ನಗರ ಸಶಸ್ತ್ರ ಪಡೆ(ಸಿಎಆರ್)ಪೇದೆಗಳ ನೇಮಕಾತಿಗಾಗಿ 29 ಕೇಂದ್ರ ಹಾಗೂ ಜಿಲ್ಲಾ ಸಶಸ್ತ್ರ ಮೀಸಲು(ಡಿಎಆರ್) ಪಡೆಯ ಹುದ್ದೆಗಳಿಗಾಗಿ 7 ಕೇಂದ್ರದಲ್ಲಿ ನಡೆದ ಲಿಖಿತ ಪರೀಕ್ಷೆ ಬರೆಯಲು ಮೈಸೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ 19,400 ಅಭ್ಯರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದರು. ಈ ಹಿಂದೆ ನಡೆದ ಪಿಎಸ್ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಇಂದು ನಡೆದ ಸಶಸ್ತ್ರ ಮೀಸಲು ಪಡೆ ಪೇದೆ ನೇಮಕಾತಿ ಲಿಖಿತ ಪರೀಕ್ಷೆಗೆ ಭಾರಿ ಭದ್ರತೆ ಒದಗಿಸಲಾಗಿತ್ತು.

ಮೈಸೂರಿನ ಮಹಾರಾಣಿ ಸರ್ಕಾರಿ ಕಲಾ ಕಾಲೇಜು, ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜು, ವಿಜಯ ವಿಠಲ ಕಾಲೇಜು, ಟೆರಿಷಿಯನ್ ಕಾಲೇಜು, ಫರೂಕಿಯಾ ಶಾಲೆ, ಜ್ಞಾನಗಂಗಾ ವಿದ್ಯಾಪೀಠ, ಜೆಎಸ್ಎಸ್ ಕಾನೂನು ಕಾಲೇಜು, ಮಹಾರಾಣಿ ಪದವಿ ಪೂರ್ವ ಕಾಲೇಜು, ಮಹಾರಾಣಿ ವಾಣಿಜ್ಯ ಕಾಲೇಜು, ಎಂಎಂಕೆ-ಎಸ್‌ಡಿಎಂ ಕಾಲೇಜು, ಮಹರ್ಷಿ ಪಬ್ಲಿಕ್ ಶಾಲೆ, ಮಾತೃ ಮಂಡಳಿ, ಮಹಾಜನ, ಶಾರದಾವಿಲಾಸ, ಕಾವೇರಿ ಶಿಕ್ಷಣ ಸಂಸ್ಥೆ ಸೇರಿದಂತೆ 36 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಯಿತು.

> ❝ ಮೈಸೂರು ನಗರದಲ್ಲಿ ಭಾನುವಾರ ಸಿಎಆರ್, ಡಿಎಆರ್ ಪೇದೆಗಳ ಆಯ್ಕೆಯ ಲಿಖಿತ ಪರೀಕ್ಷೆ ಯಶಸ್ವಿಯಾಗಿ ನಡೆಯಿತು. ಯಾವುದೇ ಗೊಂದಲವಿಲ್ಲ. – ರಮೇಶ್, ಮೈಸೂರು ನಗರ ಪೊಲೀಸ್ ಆಯುಕ್ತ

ಮೈಸೂರು ನಗರ ಪೊಲೀಸ್ ಇಲಾಖೆ ವತಿಯಿಂದ ಪರೀಕ್ಷೆ ನಡೆಸಲಾಯಿತು. ಎಲ್ಲಾ ಕೇಂದ್ರಗಳಲ್ಲೂ ಕ್ರಮಕ್ಕೆ ಆಸ್ಪದವಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿತ್ತು. ಪ್ರತಿಯೊಂದು ಕೇಂದ್ರದಲ್ಲೂ ಅಭ್ಯರ್ಥಿಗಳನ್ನು 3-4 ಬಾರಿ ತಪಾಸಣೆಗೊಳಪಡಿಸಲಾಯಿತು. ನಿಯಮಾನುಸಾರ ತುಂಬುತೋಳಿನ ಶರ್ಟ್ ಹಾಗೂ ಜೀನ್ಸ್ ಪ್ಯಾಂಟ್ ಧರಿಸಿದ್ದವರಿಗೆ ಪರೀಕ್ಷಾ ಕೇಂದ್ರ ಪ್ರವೇಶಿಸಲು ಅವಕಾಶ ನೀಡಲಿಲ್ಲ. ಇದರಿಂದ ಕೆಲವು ಅಭ್ಯರ್ಥಿಗಳು ಸ್ಥಳದಲ್ಲೇ ಟಿ-ಶರ್ಟ್ ಧರಿಸಿ, ಪ್ಯಾಂಟ್ ಬದಲಿಸಿ ಪರೀಕ್ಷಾ ಕೇಂದ್ರ ಪ್ರವೇಶಿಸಿದರು. ಮತ್ತೆ ಕೆಲವೆಡೆ ಪರೀಕ್ಷಾ ಕೇಂದ್ರದ ಬಳಿಯೇ ತುಂಬು ತೋಳಿನ ಶರ್ಟ್ ಅನ್ನು ಕತ್ತರಿಸಿ ಅರ್ಧ ತೋಳಿನ ಶರ್ಟ್ ಆಗಿ ಪರಿವರ್ತಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಯಿತು. ಅಭ್ಯರ್ಥಿಗಳು ಸೊಂಟಕ್ಕೆ ಹಾಕಿದ್ದ ಬೆಲ್ಟ್ ತೆಗೆಸಿ, ಕೈ ಹಾಗೂ ಕೊರಳಲ್ಲಿದ್ದ ದಾರ, ಸರ, ತಾಯತವನ್ನು ಬಿಚ್ಚಿಸಲಾಯಿತು. ಇನ್‌ಶರ್ಟ್ ಕೂಡ ತೆಗೆಸಲಾಯಿತು. ಪರೀಕ್ಷೆಯಲ್ಲಿ ಕಾಪಿ ಮಾಡಲು ಚೀಟಿ ತಂದಿರುವ ಸಾಧ್ಯತೆ ಹಿನ್ನೆಲೆಯಲ್ಲಿ ಎಲ್ಲರನ್ನು ಕೂಲಂಕಷವಾಗಿ ತಪಾಸಣೆ ಮಾಡಲಾಯಿತು. ಬಳಿಕ ಕೇಂದ್ರ ಪ್ರವೇಶಿಸಿದ ಪ್ರತಿಯೊಬ್ಬರ ಫೋಟೋ ತೆಗೆದು, ಆಧಾರ್ ಕಾರ್ಡ್ ನಂಬರ್ ನಮೂದಿಸಿ ದಾಖಲಿಸಲಾಯಿತು. ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 12.30ರವರೆಗೆ ಪರೀಕ್ಷೆ ನಡೆದರೂ ಪರೀಕ್ಷಾ ಕೇಂದ್ರದ ಸುತ್ತ ಬೆಳಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಪೊಲೀಸ್ ಆಯುಕ್ತ ರಮೇಶ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಅಲ್ಲದೆ ಎಲ್ಲಾ ಎಸಿಪಿ, ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು.



ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯಕ್ಕೆ ಬರುವ ಭಕ್ತಾದಿಗಳು ಮತ್ತು ಚಾಮುಂಡಿಬೆಟ್ಟದ ಗ್ರಾಮಸ್ಥರ ಅನುಕೂಲಕ್ಕಾಗಿ 'ಕೇನ್ಸ್' ಸಂಸ್ಥೆ ವತಿಯಿಂದ ಸಂಪೂರ್ಣ ಸುಸಜ್ಜಿತವಾದ ಆಂಬುಲೆನ್ಸ್ ಅನ್ನು ಮುಜರಾಯಿ ಹಾಗೂ ಸಾರಿಗೆ ಸಚಿವ ರಾಮಲಿಂಗರೆಡ್ಡಿ ಅವರು ಭಾನುವಾರ ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡ, ಧಾರ್ಮಿಕ ದತ್ತಿ ಆಯುಕ್ತರ ಕಚೇರಿಯ ಕೇಂದ್ರ ಸ್ಥಾನಿಕ ಸಹಾಯಕ ಎಸ್.ಎನ್.ಯತಿರಾಜ್ ಸಂಪತ್‌ಕುಮಾರ್, ದೇವಾಲಯದ ಕಾರ್ಯನಿರ್ವಾಹಣಾ ಅಧಿಕಾರಿ ಸಿ.ಜಿ. ಕೃಷ್ಣ ಉಪಸ್ಥಿತರಿದ್ದರು.

ಟೀಂ ಮೈಸೂರಿಂದ ಲಜಪತ್ ರಾಯ್, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಜಯಂತಿ ಆಚರಣೆ

ಮೈಸೂರು, ಜ.28(ಎಸ್‌ಬಿಡಿ)- ಲಾಲಾ ಲಜಪತ್ ರಾಯ್‌ರವರ 160ನೇ ಜಯಂತಿ ಹಾಗೂ ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರ 125ನೇ ಜಯಂತಿಯನ್ನು 'ಟೀಂ ಮೈಸೂರು' ವತಿಯಿಂದ ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಭಾನುವಾರ ಆಚರಿಸಲಾಯಿತು.


ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಟೀಂ ಮೈಸೂರು ವತಿಯಿಂದ ಲಾಲಾ ಲಜಪತ್ ರಾಯ್ ಹಾಗೂ ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರ ಜಯಂತಿ ಆಚರಿಸಲಾಯಿತು.

ಈ ವೇಳೆ ತಂಡದ ಸದಸ್ಯ ಸೃಜನ್ ಮಾತನಾಡಿ, ಲಾಲಾ ಲಜಪತ್ ರಾಯ್ ಅವರು ಪಂಜಾಬ್‌ನ ಕೇಸರಿ ಎಂದೇ ಪ್ರಖ್ಯಾತರಾಗಿದ್ದರು. ಇವರನ್ನು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕ್ರಾಂತಿಕಾರಿಗಳ ಗುರುಗಳೆಂದೇ ಗುರುತಿಸಲಾಗಿತ್ತು. ಬ್ರಿಟಿಷರ ದೌರ್ಜನ್ಯ ಗಮನಿಸಲು ಬ್ರಿಟಿಷ್ ಮಹಾರಾಣಿ ಭಾರತಕ್ಕೆ ಕಳುಹಿಸಿದ್ದ ಸೈಮನ್ ಕಮಿಷನ್‌ನಲ್ಲಿ ಭಾರತೀಯರೇ ಇಲ್ಲದಿರುವ ಬಗ್ಗೆ ಹೋರಾಟವನ್ನು ಉಗ್ರವಾಗಿ ಮುನ್ನಡೆಸಿದರು. ಆ ವೇಳೆ ನಡೆಸಿದ ಅತ್ಯಂತ ಘೋರ ಲಾಠಿ ಪ್ರಹಾರದಲ್ಲಿ ತೀವ್ರವಾಗಿ ಗಾಯಗೊಂಡಿದ್ದರು. ಲಾಲಾ ಲಜಪತ್ ರಾಯ್ ಅವರು ಚಂದ್ರಶೇಖರ್ ಆಜಾದ್, ಭಗತ್ ಸಿಂಗ್, ಸುಖದೇವ್ ಸೇರಿದಂತೆ ಯುವ ಕ್ರಾಂತಿಕಾರಿಗಳಿಗೆ ಸ್ಫೂರ್ತಿಯಾಗಿದ್ದರು ಎಂದು ತಿಳಿಸಿದರು. ಮತ್ತೋರ್ವ ಸದಸ್ಯ ಆನಂದ್ ಮಾತನಾಡಿ, ಭಾರತದ ಪ್ರಪ್ರಥಮ ಮಹಾದಂಡ ನಾಯಕರಾದ ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರ ಶೌರ್ಯ, ಪರಾಕ್ರಮ ನಮಗೆಲ್ಲರಿಗೂ ಆದರ್ಶ. ಇವರನ್ನು 1947ರಲ್ಲಿ ಪಾಕಿಸ್ತಾನದ ವಿರುದ್ಧ ಯುದ್ಧ ಪ್ರಾರಂಭವಾದಾಗ ಪಶ್ಚಿಮ ಸೈನ್ಯದ ಮುಖ್ಯ ಅಧಿಕಾರಿಯನ್ನಾಗಿ ನೇಮಿಸಲಾಯಿತು. ಝಿಲಾ, ದ್ರಾಸ್ ಮತ್ತು ಕಾರ್ಗಿಲ್ ಅನ್ನು ಹಿಂತಿರುಗಿ ಪಡೆಯುವಲ್ಲಿ ಕಾರ್ಯಪ್ಪನವರು ಮಾರ್ಗದರ್ಶನ ಪ್ರಮುಖವಾಗಿತ್ತು. ಅಲ್ಲದೆ, ಲೇಹ್‌ಗೆ ಕಡಿದು ಹೋಗಿದ್ದ ಸಂಪರ್ಕವನ್ನು ಮರು ಸ್ಥಾಪಿಸಿದರು. 1949ರ ಜನವರಿ 15 ರಂದು ಜನರಲ್ ಆಗಿ ಬಡ್ತಿಯನ್ನು ಪಡೆದ ಕಾರ್ಯಪ್ಪನವರು ನಮ್ಮ ಕರ್ನಾಟಕದ ಕೊಡಗಿನವರು ಎಂಬುದು ನಮ್ಮೆಲ್ಲರಿಗೂ ಹೆಮ್ಮೆ ಎಂದರು.

ಸದಸ್ಯ ಕಿರಣ್ ಜೈರಾಮೇಗೌಡ ಮಾತನಾಡಿ, ಮೈಸೂರಿನಲ್ಲಿ ಅನೇಕ ಮಾನ್ಯರ ಹೆಸರಿನಲ್ಲಿ ವೃತ್ತಗಳಿವೆ. ಸಾರ್ವಜನಿಕರು ಮಹನೀಯರ ಹೆಸರಿನಲ್ಲೇ ವೃತ್ತಗಳನ್ನು ಗುರುತಿಸುವುದನ್ನು ರೂಢಿಸಿಕೊಂಡಾಗ ಮಾತ್ರ ಸಾರ್ಥಕವೆನಿಸುತ್ತದೆ ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಗೋಕುಲ್ ಗೋವರ್ಧನ್, ಹಿರಿಯಣ್ಣ, ರಮೇಶ್, ಮುರಳಿ, ಗುರುಮೂರ್ತಿ ಪಂಡಿತ್, ಕೃಷ್ಣ ನವೀನ್, ಗಣೇಶ್, ಅಮರ್, ಚಂದ್ರಶೇಖರ್, ಪ್ರವೀಣ್, ಸೃಜನ್, ನವೀನ್, ಹೇಮಂತ್, ಶಾಂತಕುಮಾರಿ ಮತ್ತಿತರರು ಭಾಗವಹಿಸಿದ್ದರು.

ಬೆಂಕಿ ಹೊತ್ತಿ ಉರಿದ ಎಲೆಕ್ಟ್ರಿಕ್ ಸ್ಕೂಟರ್



ಮೈಸೂರು, ಜ.28(ಎಸ್‌ಬಿಡಿ)- ಚಲಿಸುತ್ತಿದ್ದ ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಹೊಗೆ ಕಾಣಿಸಿಕೊಂಡು ಕೆಲವೇ ನಿಮಿಷಗಳಲ್ಲಿ ಬೆಂಕಿಜ್ವಾಲೆ ಆವರಿಸಿ, ವಾಹನ ಸಂಪೂರ್ಣ ಸುಟ್ಟು ಕರಕಲಾದ ಘಟನೆ ಮೈಸೂರಿನಲ್ಲಿ ಭಾನುವಾರ ನಡೆದಿದೆ.

ಮೈಸೂರಿನ ಕುವೆಂಪುನಗರದ ಎಲೆಕ್ಟ್ರಿಕ್ ಶೋರೂಂವೊಂದರ ಪ್ಯೂರ್ ಇವಿ ಡೆಮೋ ಸ್ಕೂಟರ್, ಮಾನಂದವಾಡಿ ರಸ್ತೆ-ನಂಜನಗೂಡು ರಸ್ತೆ ಸಂಪರ್ಕಿಸುವ ಲಿಂಕ್ ಮೇನ್ ರೋಡ್ (ಶನಿದೇವರ ದೇವಸ್ಥಾನ ರಸ್ತೆ)ನಲ್ಲಿ ಭಾನುವಾರ ರಾತ್ರಿ ಸುಮಾರು 7.30ರ ವೇಳೆಯಲ್ಲಿ ಹೊತ್ತಿ ಉರಿದಿದೆ. ಅದೃಷ್ಟವಶಾತ್ ವಾಹನ ಓಡಿಸುತ್ತಿದ್ದ ಶೋ ರೂಂ ಮಾಲೀಕನ ಸಹೋದರ ವಿಶ್ವಾಸ್ ಅಪಾಯದಿಂದ ಪಾರಾಗಿದ್ದಾರೆ.

ಗ್ರಾಹಕರೊಬ್ಬರ ಸ್ಕೂಟರ್ ಮೈಲೇಜ್ ಕಡಿಮೆಯಾಗಿದೆ ಎಂಬ ಕಾರಣಕ್ಕೆ ವಾಹನದ ಸರ್ವೀಸ್ ಮಾಡಿದ ನಂತರ ಬ್ಯಾಟರಿ ಬದಲಾವಣೆಗೆ ಕಂಪನಿಗೆ ಕಳುಹಿಸಲಾಗಿತ್ತು. ಮೊನ್ನೆಯಷ್ಟೇ ಕಂಪನಿಯಿಂದ ಹೊಸ ಬ್ಯಾಟರಿ ನೀಡಲಾಗಿತ್ತು. ಹೊಸ ಬ್ಯಾಟರಿಯನ್ನು ಪರಿಶೀಲಿಸುವ ಉದ್ದೇಶದಿಂದ ಅದನ್ನು ಶೋ ರೂಂನ ಡೆಮೋ ವಾಹನಕ್ಕೆ ಅಳವಡಿಸಲಾಗಿತ್ತು. ಬ್ಯಾಟರಿ ಕಾರ್ಯಕ್ಷಮತೆ ಪರಿಶೀಲಿಸಿದಂತಾಗುತ್ತದೆ ಎಂದು ಅದೇ ವಾಹನದಲ್ಲೇ ನಂಜನಗೂಡಿನಲ್ಲಿರುವ ಮನೆಗೆ ತೆರಳುತ್ತಿದ್ದಾಗ ಈ ಘಟನೆ ಸಂಭವಿಸಿದೆ. ಮಾನಂದವಾಡಿ ರಸ್ತೆ-ಎಪಿಎಂಸಿ ಬಸ್ ಸ್ಟಾಪ್ ನಡುವಿನ ಲಿಂಕ್ ರಸ್ತೆಯಲ್ಲಿ ಹೋಗುವಾಗ ವಾಹನದಲ್ಲಿ ಹೊಗೆ ಕಾಣಿಸಿಕೊಂಡಿತು. ಕೂಡಲೇ ವಾಹನ ನಿಲ್ಲಿಸುವಷ್ಟರಲ್ಲಿ ಹೊಗೆ ಜಾಸ್ತಿಯಾಯಿತು. ಅದರ ಬ್ಯಾಟರಿ ಹೊರ ತೆಗೆಯಲು ಪ್ರಯತ್ನಿಸಲಾಯಿತಾದರೂ ಸಾಧ್ಯವಾಗಲಿಲ್ಲ. ವಾಹನದ ಮುಂಭಾಗ ಇಟ್ಟುಕೊಂಡಿದ್ದ ಸ್ಪೇರ್ ಬ್ಯಾಟರಿಯನ್ನು ಎತ್ತಿಕೊಂಡು ಸ್ವಲ್ಪ ಹಿಂದಕ್ಕೆ ಬರುವಷ್ಟರಲ್ಲಿ ಬೆಂಕಿ ಕಾಣಿಸಿಕೊಂಡು, ಕೆಲ ಕ್ಷಣದಲ್ಲೇ ಜ್ವಾಲೆ ಸಂಪೂರ್ಣ ವಾಹನವನ್ನು ವ್ಯಾಪಿಸಿತು. ಸ್ಥಳದಲ್ಲಿದ್ದವರು ಮಾಹಿತಿ ನೀಡಿದ್ದರಿಂದ ಅಗ್ನಿ ಶಾಮಕ ಸಿಬ್ಬಂದಿ ಸ್ಥಳಕ್ಕಾಗಮಿಸಿ, ಬೆಂಕಿ ನಂದಿಸಿದರು ಎಂದು ವಾಹನ ಓಡಿಸುತ್ತಿದ್ದ ವಿಶ್ವಾಸ್ ತಿಳಿಸಿದ್ದಾರೆ.

ಹಸಿರು ನಮ್ಮ ಉಸಿರು

ಬಿಇಎಂಎಲ್ ಉದ್ಯೋಗಿ ಪ್ರಶಸ್ತಿಗೆ ಭಾಜನ

ಮೈಸೂರು,ಜ.28(ಪಿಎಂ)- ಗೋವಾದ ಎಬಿಎಂ ಮತ್ತು ಐಎನ್ಎನ್ ಭಾರತ್ ಸಂಸ್ಥೆ ವತಿಯಿಂದ ಕೊಡ ಮಾಡುವ ದಾದಾ ಸಾಹೇಬ್ ಫಾಲ್ಕೆ ಅಂತಾರಾಷ್ಟ್ರೀಯ ಮೋಟಿವೇಷನ್ ಅವಾರ್ಡ್-2024ಕ್ಕೆ ಬಿಇಎಂಎಲ್ ಕಾರ್ಖಾನೆ ಉದ್ಯೋಗಿ ರಮೇಶ್ ಶೆಟ್ಟಿ ಭಾಜನರಾಗಿದ್ದಾರೆ. ಗೋವಾದ ರಾಜಧಾನಿ ಪಣಜಿ ಪಾರ್ಕ್ ಪ್ರೈಮ್ ಪಂಚತಾರಾ ಹೋಟೆಲ್‌ನಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಸದರಿ ಅವಾರ್ಡ್‌ಗಳನ್ನು ನೀಡಲಾಯಿತು. ಅಂತೆಯೇ ಅ.ಸು.ರ ಎಂಬ ನಾಮಾಂಕಿತದಿಂದ ಜನಪ್ರಿಯರಾಗಿರುವ ರಮೇಶ ಶೆಟ್ಟಿ ಅವರಿಗೆ ಕಲೆ, ಸಾಹಿತ್ಯ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಗುರುತಿಸಿ ಸದರಿ ಅವಾರ್ಡ್ ನೀಡಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ಹಾಸ್ಯ, ನೃತ್ಯ, ಸಂಗೀತದ ರಸದೌತಣದೊಂದಿಗೆ ಮೈಸೂರು ಫೆಸ್ಟ್‌ಗೆ ಸಂಭ್ರಮದ ತೆರೆ


ಖ್ಯಾತ ಹಿನ್ನಲೆ ಗಾಯಕ ಸಂತೋಷ್ ವೆಂಕಿ ನೃತ್ಯ-ಸಂಗೀತ ರಸದೌತಣ

ಮೈಸೂರು, ಜ.28(ಎಂಕೆ)- ಜಾರ್ಜಿಯನ್ ಸುಮಧುರ ಶಾಸ್ತ್ರೀಯ ಸಂಗೀತದ ಹೊನಲು... ಹಾಸ್ಯ ದರ್ಬಾರ್‌ನ ಕಚಗುಳಿ... ಲೈವ್ ಇನ್ ಕಾನ್ಸರ್ಟ್ ನೃತ್ಯ-ಸಂಗೀತದ ರಸದೌತಣದೊಂದಿಗೆ ಬ್ರಾಂಡ್ ಮೈಸೂರಿನ ಮೊದಲ ಆಕರ್ಷಣೆಯಾದ ಮೂರು ದಿನಗಳ 'ಮೈಸೂರು ಫೆಸ್ಟ್'ಗೆ ಯಶಸ್ವಿ ತೆರೆಬಿದ್ದಿತು.

ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಬಯಲು ರಂಗಮಂದಿರದಲ್ಲಿ ಪ್ರವಾಸೋದ್ಯಮ ಇಲಾಖೆ, ಮೈಸೂರು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ವತಿಯಿಂದ ಆಯೋಜಿಸಿದ್ದ ಮೈಸೂರು ಫೆಸ್ಟ್‌ನ ಸಾಂಸ್ಕೃತಿಕ ವೈಭವ ವೇದಿಕೆ ಹಾಡು-ನೃತ್ಯ ಹಾಗೂ ಹಾಸ್ಯದ ಸಮಾಗಮದೊಂದಿಗೆ ಭಾನುವಾರ ಸಂಪನ್ನಗೊಂಡಿತು. ವಿಶೇಷ ಆಕರ್ಷಣೆಯೆಂದೇ ಗುರ್ತಿಸಿಕೊಂಡಿದ್ದ ಜಾರ್ಜಿಯಾ ದೇಶದ ಕಲಾವಿದರ ಶಾಸ್ತ್ರೀಯ ಸುಮಧುರ ಸಂಗೀತ ಮನಸ್ಸಿಗೆ ಇಂಪು ನೀಡಿತು. ಆರಂಭದಲ್ಲೇ 'ರಾಷ್ಟ್ರಗೀತೆ' ಹಾಡಿ

ಗಮನ ಸೆಳೆದ ಜಾರ್ಜಿಯಾ ಕಲಾವಿದರ 'ರಾಷ್ಟ್ರಗೀತೆ' ಪ್ರೇಮ

ಗಮನ ಸೆಳೆದ ಜಾರ್ಜಿಯಾ ಕಲಾವಿದರು, ತಮ್ಮ ದೇಶದ ಕಲೆ-ಸಾಹಿತ್ಯ ಸಂಸ್ಕೃತಿಗೆ ಜೊತೆಗೆ ಭಾರತೀಯ ಶಾಸ್ತ್ರೀಯ ಸಂಗೀತವನ್ನು ಪ್ರಸ್ತುತಪಡಿಸುವ ಮೂಲಕ ಅಪಾರ ಮೆಚ್ಚುಗೆಗೆ ಪಾತ್ರರಾದರು. ಜಾರ್ಜಿಯಾ ಕಲಾವಿದರದ ಸೂಲ್ ಗ್ರೂಪ್ ತಂಡ ಶಾಸ್ತ್ರೀಯ ಸಂಗೀತದ ಹಾಡುಗಳನ್ನು ಸುಮಧುರವಾಗಿ ಹಾಡಿ, ಕೊಳಲಿನ ಇಂಪಾದ ನಾದವನ್ನು ಪಸರಿಸಿದರೆ, ನ್ಯೂ ಬಾನ ತಂಡ ಜಾರ್ಜಿಯಾ ದೇಶದ ಸುಪ್ರಸಿದ್ಧ ಹಾಡುಗಳನ್ನು ಹಾಡಿ ಗಮನ ಸೆಳೆದರು.

ನೃತ್ಯ-ಸಂಗೀತದ ರಸದೌತಣ: ಕನ್ನಡದ ಖ್ಯಾತ ಹಿನ್ನೆಲೆ ಗಾಯಕ ಸಂತೋಷ್ ವೆಂಕಿ ನೇತೃತ್ವದಲ್ಲಿ ಪ್ರಸ್ತುತಪಡಿಸಿದ ಲೈವ್ ಇನ್ ಕಾನ್ಸರ್ಟ್ ನೃತ್ಯ-ಸಂಗೀತ ನೆರೆದಿದ್ದ ಅಪಾರ ಸಂಖ್ಯೆಯ ಕಲಾ ಪ್ರೇಕ್ಷಕರಿಗೆ ರಸದೌತಣ ನೀಡಿತು. ಆರಂಭದಲ್ಲಿ ಗಾಯಕಿ ಅನುರಾಧ ಭಟ್, 'ಚೌಕ' ಚಿತ್ರದ 'ಅಪ್ಪ ಐ ಲವ್ ಯು ಅಪ್ಪ' ಹಾಡನ್ನು ಸುಶ್ರಾವ್ಯವಾಗಿ ಹಾಡುವ ಮೂಲಕ ಸುಂದರ ವೇದಿಕೆಯಲ್ಲಿ ಅಪ್ಪನ ಪ್ರೀತಿ ಪರಿಚಯಿಸಿದರು.

ನಂತರ ಗಾಯಕಿ ಐಶ್ವರ್ಯ ರಂಗರಾಜನ್, 'ಏಕ್ ಲವ್ ಯಾ' ಚಿತ್ರದ 'ಮೀಟ್ ಮಾಡಣ ಇಲ್ಲ ಡೇಟ್ ಮಾಡಣ' ಹಾಡಿನೊಂದಿಗೆ ಪಡ್ಡೆ ಯುವ ಸಮೂಹ ಕುಣಿದು ಕುಪ್ಪಳಿಸುವಂತೆ ಮಾಡಿದರು.


ಜಾರ್ಜಿಯಾ ಕಲಾವಿದರು ಭಾರತದ 'ರಾಷ್ಟ್ರಗೀತೆ' ಹಾಡಿ ಗಮನ ಸೆಳೆದರು.


ವಾಗ್ಮಿ ಹಿರೇಮಗಳೂರು ಕಣ್ಣನ್ ಅವರ ಸಾರಥ್ಯದಲ್ಲಿ ನಡೆದ 'ಹಾಸ್ಯ ದರ್ಬಾರ್'

ಗಾಯಕಿ ದಿವ್ಯ ರಾಮಚಂದ್ರನ್, ಖ್ಯಾತ ಕವಿ ಟಿ.ಪಿ.ಕೈಲಾಸಂ ರಚಿತ 'ನಾನು ಕೋಳಿಕೆ ರಂಗ', 'ಗಜಪತಿ ಗರ್ವಭಂಗ' ಚಿತ್ರದ 'ಜಟಕಾ ಕುದುರೆ ಹತ್ತಿ ಪ್ಯಾಟೆಗೋಗುಮಾ', ಯವ್ವ ಯವ್ವ ನಾ ಹ್ಯಾಂಗ' ಎಂಬ ಜನಪದ ಹಾಡಿನೊಂದಿಗೆ ಧೂಳೆಬ್ಬಿಸಿದರು.

ವೆಂಕಿ ಮಿಂಚು: 'ಕೆಜಿಎಫ್' ಚಿತ್ರದ 'ಸಲಾಂ ರಾಕಿ ಬಾಯ್' ಹಾಡಿನೊಂದಿಗೆ ವೇದಿಕೆ ಆಗಮಿಸಿದ ಹಿನ್ನೆಲೆ ಗಾಯಕ ಸಂತೋಷ್ ವೆಂಕಿ, ಮೈಸೂರು ಫೆಸ್ಟ್‌ನಲ್ಲಿ ಮಿಂಚು ಹರಿಸಿದರು. 'ಐರಾವತ' ಚಿತ್ರದ ಟೈಟಲ್ ಹಾಡಿನೊಂದಿಗೆ 'ಮುಕುಂದ-ಮುರಾರಿ' ಚಿತ್ರದ 'ನೀನೇ ರಾಮ ನೀನೇ ಶಾಮ' ಹಾಡಿನೊಂದಿಗೆ ತುಂಬಿದ ಬಯಲು ರಂಗಮಂದಿರದಲ್ಲಿ ಜೈ ಶ್ರೀರಾಮ್ ಘೋಷಣೆ ಮೊಳಗಿಸಿದರು.

ಅಭಿನಂದನೆ: ಇದಕ್ಕೂ ಮುನ್ನ 'ಮೈಸೂರು ಫೆಸ್ಟ್' ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಪ್ರವಾಸೋದ್ಯಮ ಇಲಾಖೆ ಹಾಗೂ ಮೈಸೂರು ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ವತಿಯಿಂದ ಅಭಿನಂದನೆ ಸಲ್ಲಿಸಲಾಯಿತು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಮತ್ತಿತರರು ಉಪಸ್ಥಿತರಿದ್ದರು.

ಜನಸ್ತೋಮ: ಭಾನುವಾರ ರಜಾ ದಿನ ಹಿನ್ನಲೆ 'ಮೈಸೂರು ಫೆಸ್ಟ್'ಗೆ ಜನಸ್ತೋಮವೇ ಹರಿದು ಬಂದಿತ್ತು. ಫುಡ್ ಫೆಸ್ಟ್, ಪ್ಲೆ ಮಾರ್ಕೆಟ್ ಜನಜಂಗುಳಿಯಿಂದ ತುಂಬಿ ತುಳುಕಿದವು.

ಇಡೀ ಮಾನಸಗಂಗೋತ್ರಿ ಆವರಣದಲ್ಲಿ ಹಬ್ಬದ ಸಡಗರ ಸಂಭ್ರಮದ ವಾತಾವರಣ ಮನೆ ಮಾಡಿತ್ತು.

ಹಾಸ್ಯ ದರ್ಬಾರ್ ಕಚಗುಳಿ...

ಗಂಡು ಮೇಲೋ... ಹೆಣ್ಣು ಮೇಲೋ... ಕಣ್ಣೆರಡು ನೋಟ ಒಂದೇ! ಕಾಲೆರಡು ನಡೆಯೊಂದೆ!!

ಬಾಳಿನ ಆಶಯ ಆನಂದ ಪಡೆಯುವುದಾಗಿದೆ ಎನ್ನುತ್ತಲೇ ಸಂಕಷ್ಟದ ಪರಿಸ್ಥಿತಿಯಲ್ಲಿ ಧೈರ್ಯವಾಗಿ ಸಂಸಾರ ನಡೆಸುವುದು ಹೆಂಗಸೋ-ಗಂಡಸೋ ಎಂಬ ವಾದ-ಪ್ರತಿವಾದದೊಂದಿಗೆ ಖ್ಯಾತ ವಾಗ್ಮಿ ಹಿರೇಮಗಳೂರು ಕಣ್ಣನ್ ಅವರ ಸಾರಥ್ಯದಲ್ಲಿ ನಡೆದ 'ಹಾಸ್ಯ ದರ್ಬಾರ್' ಕಾರ್ಯಕ್ರಮ ಮೈಸೂರಿಗರನ್ನು ನಗೆಗಡಲಲ್ಲಿ ತೇಲುವಂತೆ ಮಾಡಿತು. ಮಾತಿನಲ್ಲೇ ಮೋಡಿ ಮಾಡಿದ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ಇಂದುಮತಿ ಸಾಲಿಮಠ, ಮಲ್ಲೇಶ್‌ಗೌಡ ಹೆಂಗಸಿನ ಪರವಾಗಿ ವಾದ ಮಂಡಿಸಿದರೆ, ಮಿಮಿಕ್ರಿ ದಯಾನಂದ್, ವೈ.ವಿ.ಗುಂಡುರಾವ್ ಮತ್ತು ನಾಗಶ್ರೀ ತ್ಯಾಗರಾಜ್ ಗಂಡಸರೇ ಸಂಕಷ್ಟದ ಪರಿಸ್ಥಿತಿಯಲ್ಲಿ ಸಂಸಾರ ನಡೆಸುವುದಾಗಿ ಪ್ರತಿವಾದಿಸಿದರು. ಪುರುಷ ಪ್ರಧಾನ ಸಮಾಜದಲ್ಲಿ ಎಲ್ಲಾ ಕ್ಷೇತ್ರದಲ್ಲಿಯೂ ಸಾಧನೆ ಮಾಡುತ್ತಿರುವ ಹೆಣ್ಣಿಗೆ ನೈಸರ್ಗಿಕವಾಗಿಯೇ ಸಂಕಷ್ಟದ ಪರಿಸ್ಥಿತಿ ಎದುರಿಸುವ ಶಕ್ತಿ ಇದೆ ಎಂಬ ವಾದಕ್ಕೆ ಹೆಣ್ಣನ್ನು ನಂಬರ್ ಒನ್ ಮಾಡಲು ಗಂಡಸಿನ ತ್ಯಾಗ, ತಾಳ್ಮೆ ಇರಲಿದೆ. ತಂದೆ.. ತಂದೆ.. ಎಂದರೆ ತರುವುದೇ ಹೊರತು ಬರಿಗೈಯಲ್ಲಿ ಬರುವುದಲ್ಲ ಎಂದು ಪ್ರತಿವಾದಿಸಲಾಯಿತು.

ಎಲ್ಲಾ ಕಷ್ಟಗಳನ್ನು ಎದುರಿಸುವ ಗುಂಡಿಗೆ ಇರುವುದು ಗಂಡಿಗೆ ಎಂಬ ವಾದಕ್ಕೆ ಗುಂಡಿಗೆ ಇರುವ ಗಂಡಿಗೂ ಹೆಣ್ಣೆ ತಾಯಿ ಎಂದು ಪ್ರತಿವಾದಿಸಲಾಯಿತು. ಮಾತು ಮಾತಿನ ನಡುವೆ ಸಂಕಷ್ಟದ ಪರಿಸ್ಥಿತಿಯಲ್ಲಿ ಸಂಸಾರ ನಡೆಸುವುದೇ ಹೆಣ್ಣೆ ಎಂಬುದನ್ನು ಅರಿತಿರುವ ರಾಜ್ಯ ಸರ್ಕಾರ ಗೃಹಲಕ್ಷ್ಮಿ, ಗೃಹ ಜ್ಯೋತಿ, ಶಕ್ತಿ ಯೋಜನೆಗಳನ್ನು ನೀಡಿದೆ ಎನ್ನುವ ಮೂಲಕ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಶ್ಲಾಘಿಸಲಾಯಿತು. ಅಂತಿಮವಾಗಿ ಕಣ್ಣೆರಡು ನೋಟ ಒಂದೇ.. ಕಾಲೆರಡು ನಡೆಯೊಂದೇ.. ಎಂಬಂತೆ ಗಂಡು-ಹೆಣ್ಣು ಸಂಸಾರದ ಎರಡು ಕಣ್ಣು. ಸುಖ ಸಂಸಾರಕ್ಕೆ ಇಬ್ಬರ ಕೊಡುಗೆಯೂ ಸಮನಾಗಿದೆ ಎಂಬ ಅರಿವನ್ನು ಮೂಡಿಸಲಾಯಿತು.

ಮೈಸೂರು ಮಿತ್ರ ಸೋಮವಾರ 29 ಜನವರಿ 2024

ಸದ್ಯದ ಪರಿಸ್ಥಿತಿಯಲ್ಲಿ ದೇಶ ಮುನ್ನಡೆಸಲು ಮೋದಿ ಸಮರ್ಥರು

ಶತಾಯುಷಿ ಮರಿದೇವರ ಶ್ರೀಗಳ 130ನೇ ಜನ್ಮದಿನೋತ್ಸವದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪ್ರತಿಪಾದನೆ



ಶತಾಯುಷಿ ಮರಿದೇವರು ಶ್ರೀಗಳ 130ನೇ ಜನ್ಮದಿನೋತ್ಸವ ಹಾಗೂ ಚಂದ್ರವನದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮಿಗಳ 25ನೇ ಪಟ್ಟಾಧಿಕಾರ ಕಾರ್ಯಕ್ರಮದ ಸಮಾರೋಪದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಆತ್ಮೀಯವಾಗಿ ಅಭಿನಂದಿಸಿ, ಸನ್ಮಾನಿಸಲಾಯಿತು.

ಮಂಡ್ಯ, ಜ.28– ದೇಶದ ಸದ್ಯದ ಪರಿಸ್ಥಿತಿಯಲ್ಲಿ ದೇಶದ ಅಭಿವೃದ್ಧಿ ಹಾಗೂ ಭಾರತೀಯರನ್ನು ಮುನ್ನಡೆಸಲು ಪ್ರಧಾನಿ ನರೇಂದ್ರ ಮೋದಿಯವರೇ ಸಮರ್ಥ ನಾಯಕರಾಗಿದ್ದು, ನಾವು ಕೂಡ ಅವರ ನಾಯಕತ್ವ ಬೆಂಬಲಿಸಿದ್ದೇವೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ತಿಳಿಸಿದ್ದಾರೆ.

ಶ್ರೀರಂಗಪಟ್ಟಣದ ಪೂರ್ವ ವಾಹಿನಿಯ ಚಂದ್ರವನ ಆಶ್ರಮದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಶತಾಯುಷಿ ಮರಿದೇವರು ಶ್ರೀಗಳ 130ನೇ ಜನ್ಮದಿನೋತ್ಸವ ಹಾಗೂ ಚಂದ್ರವನದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮಿಗಳ 25ನೇ ಪಟ್ಟಾಧಿಕಾರ ಕಾರ್ಯಕ್ರಮದ ಸಮಾರೋಪದಲ್ಲಿ ಡಿಎಂಎಸ್ ಯೋಗ ಮತ್ತು ಆರ್ಯುವೇದ ಕೇಂದ್ರ ಆಸ್ಪತ್ರೆಯನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಭಾರತ ಸರಿ ಸುಮಾರು 150 ಕೋಟಿ ಜನರನ್ನು ಹೊಂದಿದ್ದು, ಈ ದೇಶದ ಎಲ್ಲಾ ವರ್ಗ ಹಾಗೂ ಧರ್ಮದ ಜನರನ್ನು ಒಟ್ಟುಗೂಡಿಸಿ ಅಭಿವೃದ್ಧಿ ಪಥದ ಹಾದಿಯಲ್ಲಿ ಕೊಂಡೊಯ್ಯಲು ಮೋದಿ ಅವರೇ ಸೂಕ್ತವಾದ ನಾಯಕರಾಗಿದ್ದಾರೆ. ಜತೆಗೆ ರಾಜ್ಯದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಸಹ ರಾಜಕೀಯ ಹಾಗೂ ಪ್ರಸ್ತುತ ಸನ್ನಿವೇಶದಲ್ಲಿ ತಮ್ಮೊಂದಿಗೆ ಇದ್ದು ಸಾಮಾಜಿಕ ಹಾಗೂ ರೈತಪರ ಹುಟ್ಟು ಹೋರಾಟ ನಾಯಕರಾಗಿದ್ದಾರೆ. ರೈತರಿಗಾಗಿ ಪಾದಯಾತ್ರೆ ನಡೆಸಿದ ಕೀರ್ತಿ ಅವರಿಗಿದೆ ನಾನು ಪ್ರಾರಂಭದ ದಿನಗಳಲ್ಲಿ ನನಗೂ ಅವರಿಗೂ ದ್ವೇಷ ಮನೋಭಾವವಿತ್ತು. ಆದರೆ ರಾಜಕಾರಣ ದಲ್ಲಿ ಯಾರೂ ಶತ್ರುಗಳು ಅಲ್ಲ, ಮಿತ್ರರು ಅಲ್ಲ. ದೇಶ ಮತ್ತು ರಾಜ್ಯದ ಐಕ್ಯತೆ ಹಾಗೂ ಪ್ರಗತಿಗೆ ನಾವೆಲ್ಲರು ಒಂದಾಗಿದ್ದೇವೆ ಎಂದರು.

ಕಳೆದ 25 ವರ್ಷಗಳ ಹಿಂದೆ ಬೇಬಿ ಮಠಕ್ಕೆ ನಾನು ಭೇಟಿ ನೀಡಿದ್ದ ನೆನಪು ಇನ್ನು ಹಚ್ಚ ಹಸಿರಾಗಿದ್ದು, ಅದೇ ಹಾದಿಯಲ್ಲಿ ಚಂದ್ರವನ ಮಠ ಹಾಗೂ ಶ್ರೀಗಳ ಸಾಕಷ್ಟು ಸಾಮಾಜಿಕ ಹಾಗೂ ಧಾರ್ಮಿಕ ಸತ್ಕಾರ್ಯಗಳು ಮನಸ್ಸಿಗೆ ಹರ್ಷ ತಂದಿದೆ. ಇಂದು ಸಂತರೊಂದಿಗೆ ತಮ್ಮ ಸಮ್ಮಿಲನ ಸ್ಮರಣೀಯ. ಶತಾಯುಷಿ ಮರಿದೇವರು ಶ್ರೀಗಳ ಕಾಲದಿಂದ ಬೇಬಿ ಮಠದೊಂದಿಗೆ ತಮ್ಮ ಉತ್ತಮ ಒಡನಾಟವಿದ್ದು, ಇಷ್ಟು ವರ್ಷಗಳ ಬಳಿಕ ಕಾವೇರಿ ಮಡಿಲ ಚಂದ್ರವನ ಆಶ್ರಮಕ್ಕೆ ಆಗಮಿಸಿ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮಿಗಳ ದರ್ಶನದೊಂದಿಗೆ ದಾರ್ಶನಿಕ ಕಾರ್ಯಗಳಲ್ಲಿ ರಾಜ್ಯದ ಹಲವು ಮಠಾಧೀಶರೊಂದಿಗೆ ಭಾಗಿಯಾಗಿರುವುದು ಹರ್ಷ ತಂದಿದೆ. ಶ್ರೀಮಠ ಇನ್ನಷ್ಟು ಅಭಿವೃದ್ಧಿಗೊಳ್ಳಲಿ ಎಂದರು.

ಕಾರ್ಯಕ್ರಮದಲ್ಲಿ ಧ್ಯಾನ ಮಂದಿರ ಉದ್ಘಾಟಿಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ಚಂದ್ರವನ ಆಶ್ರಮವನ್ನು ಕಳೆದ 25 ವರ್ಷಗಳಲ್ಲಿ ತ್ರಿನೇತ್ರ ಮಹಂತ ಶಿವಯೋಗಿ ಶ್ರೀಗಳು ಎಲ್ಲ ವರ್ಗದ ಭಕ್ತರ ವಿಶ್ವಾಸ ಗಳಿಸಿ ಯಶಸ್ವಿಯಾಗಿ ಕಟ್ಟಿದ್ದಾರೆ. ನಾನು ಕೂಡ ಈ ಮಠದ ಭಕ್ತ ಎನ್ನಿಸಿಕೊಳ್ಳುವುದರಲ್ಲಿ ಸಂತಸವಿದೆ. ಭವಿಷ್ಯದಲ್ಲಿ ಶ್ರೀ ಮಠವು ಇನ್ನಷ್ಟು ಉತ್ತುಂಗಕ್ಕೆ ಏರಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಕ್ಷೇತ್ರದ ಮಠಾಧೀಶ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮಿಗಳು, ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮಿಗಳು ಚಂದ್ರವನ ಆಶ್ರಮದ ಪೀಠಾಧಿಪತಿ ಶ್ರೀತ್ರಿನೇತ್ರ ಮಹಂತ ಶಿವಯೋಗಿ ಶ್ರೀಗಳ ಜಲಯೋಗ ಪುಸ್ತಕವನ್ನು ಲೋಕಾರ್ಪಣೆಗೊಳಿಸಿದರು.

ಕಾರ್ಯಕ್ರಮದಲ್ಲಿ ಬೆಳಗಾವಿಯ ಹುಕ್ಕೇರಿಯ ಚಂದ್ರಶೇಖರ ಶಿವಾಚಾರ್ಯ ಶ್ರೀ, ಸಿದ್ದಲಿಂಗ ಶಿಚಾರ್ಯ ಶ್ರೀಗಳು, ಶಾಸಕರಾದ ಜಿ.ಟಿ.ದೇವೇಗೌಡ, ಎಚ್.ಟಿ. ಮಂಜು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ, ಮಠದ ಕಾರ್ಯದರ್ಶಿ ಟಿ.ಪಿ. ಶಿವಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮೊತ್ತಹಳ್ಳಿ ಹಾಲು ಉತ್ಪಾದಕರ ಸಂಘಕ್ಕೆ ನಿರ್ದೇಶಕರ ಆಯ್ಕೆ

ಮಂಡ್ಯ, ಜ.28– ತಾಲೂಕಿನ ಕೊತ್ತತ್ತಿ ಹೋಬಳಿಯ ಮೊತ್ತಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಯ 5 ವರ್ಷಗಳ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆಯಿತು. ಒಟ್ಟು 10 ನಿರ್ದೇಶಕರ ಸ್ಥಾನಕ್ಕೆ ಒಟ್ಟು 15 ಮಂದಿ ನಾಮಪತ್ರ ಸಲ್ಲಿಸಿದ್ದರು. ಚುನಾವಣೆಯಲ್ಲಿ 10 ಮಂದಿ ಜಯಗಳಿಸಿದ್ದು ಜಯರಾಮು ಎಂ.ಟಿ.ಸುನಿಲ್ ಕುಮಾರ್, ಎಸ್.ರಾಜು, ಎಂ.ಸಿ.ರೂಪೇಶ್, ಕೆ.ರಮೇಶ್, ಜಿ.ಕೆ.ಸಿದ್ದೇಗೌಡ, ವರದಯ್ಯ, ಶ್ವೇತಾ, ಭಾಗ್ಯಮ್ಮ, ಎಂ.ಬಿ.ರತ್ನ ಅವರುಗಳು ಮುಂದಿನ ಐದು ವರ್ಷಗಳ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎಂ.ಸುಜಾತ ಆಯ್ಕೆಯಾದ ಪಟ್ಟಿಯನ್ನು ಪ್ರಕಟಿಸಿದರು.

ಇಂದು 'ಮಂಡ್ಯ ಚಲೋ' ಪ್ರತಿಭಟನಾ ಮೆರವಣಿಗೆ

ಮಂಡ್ಯ, ಜ.28–ಹನುಮಧ್ವಜ ತೆರವುಗೊಳಿಸಿರುವ ಕ್ರಮವನ್ನು ಖಂಡಿಸಿ ನಾಳೆ(ಸೋಮವಾರ) ಬಿಜೆಪಿ, ಜೆಡಿಎಸ್ ಮತ್ತು ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು 'ಮಂಡ್ಯ ಚಲೋ' ಪ್ರತಿಭಟನಾ ಮೆರವಣಿಗೆ ಹಮ್ಮಿಕೊಂಡಿದ್ದಾರೆ.

ಸೋಮವಾರ ಬೆಳಗ್ಗೆ 7.30ಕ್ಕೆ ತಾಲೂಕಿನ ಕೆರಗೋಡು ರಾಮ ಮಂದಿರ ಬಳಿಯಿಂದ ಪಾದಯಾತ್ರೆ ಹೊರಡುವ ಕಾರ್ಯ ಕರ್ತರು ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಮುತ್ತಿಗೆ ಹಾಕಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ(ಜ.29) ಬೆಂಗಳೂರಿನ ಮೈಸೂರ್ ಬ್ಯಾಂಕ್ ಸರ್ಕಲ್‌ನಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಕೆರಗೋಡು ಘಟನೆ ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದು, ಅದನ್ನು ಮುಗಿಸಿಕೊಂಡು ಆರ್. ಅಶೋಕ್ ಮತ್ತು ಮಾಜಿ ಸಚಿವ ಅಶ್ವತ್ಥ ನಾರಾಯಣ್ ಸೇರಿದಂತೆ ರಾಜ್ಯ ಮಟ್ಟದ ನಾಯಕರು 'ಮಂಡ್ಯ ಚಲೋ' ಪ್ರತಿಭಟನೆಯಲ್ಲಿ ಭಾಗವಹಿಸುವರು ಎಂದು ಮೂಲಗಳು ತಿಳಿಸಿವೆ.

ಮೇಲುಕೋಟೆ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ಚಿಕ್ಕಗೋಪುರಕ್ಕೆ ತೆಂಗಲೆನಾಮ

52 ವರ್ಷಗಳ ವಿವಾದ ತಾರ್ಕಿಕ ಅಂತ್ಯ



ಮೇಲುಕೋಟೆ ಯೋಗಾನರಸಿಂಹಸ್ವಾಮಿ ಬೆಟ್ಟದ ಚಿಕ್ಕಗೋಪುರದ ಮೇಲೆ ನ್ಯಾಯಾಲಯದ ಆದೇಶದಂತೆ ತೆಂಗಲೆನಾಮ ಹಾಕಲಾಗಿದೆ.

ಮೇಲುಕೋಟೆ, ಜ.28– ರಾಜ್ಯದ ಪ್ರಸಿದ್ಧ ನರಸಿಂಹ ದೇಗುಲಗಳಲ್ಲಿ ಒಂದಾದ ಮೇಲುಕೋಟೆ ಬೆಟ್ಟದ ಶ್ರೀಯೋಗಾನರಸಿಂಹಸ್ವಾಮಿ ದೇವಾಲಯದ ಚಿಕ್ಕ ಗೋಪುರಕ್ಕೆ ತೆಂಗಲೆನಾಮ ಹಾಕಲಾಗಿದೆ. ಇದರಿಂದ 52 ವರ್ಷಗಳ ವಿವಾದ ತಾರ್ಕಿಕ ಅಂತ್ಯ ಕಂಡಂತಾಗಿದೆ.

ಯೋಗನರಸಿಂಹಸ್ವಾಮಿ ದೇಗುಲದ ಚಿಕ್ಕ ಗೋಪುರವನ್ನು 1972ರಲ್ಲಿ ಜೀರ್ಣೋದ್ಧಾರದ ವೇಳೆ ಪಾಂಡವಪುರ ತಹಶೀಲ್ದಾರ್ ಆದೇಶದಂತೆ ತೆಂಗಲೆ ನಾಮ ತೆಗೆದು ವಡಗಲೆ ನಾಮ ಹಾಕಲಾಗಿತ್ತು. ಚಿಕ್ಕ ಗೋಪುರಕ್ಕೆ ವಡಗಲೆನಾಮ ಹಾಕಿದ್ದು, ವಿವಾದವಾಗಿ ಪ್ರಕರಣ 1973ರಲ್ಲಿ ಹೈಕೋರ್ಟ್ ಮೆಟ್ಟಿಲೇರಿತ್ತು. ಹೈಕೋರ್ಟ್ ಪ್ರಕರಣವನ್ನು ಪಾಂಡವಪುರ ಕಿರಿಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹರಿಸಿಕೊಳ್ಳುವಂತೆ ಆದೇಶಿಸಿತ್ತು. ತೀರ್ಪು ಹೊರಬಿದ್ದ ನಂತರ ಮತ್ತೆ ಪಾಂಡವಪುರ ಹಿರಿಯ ಶ್ರೇಣಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲಾಗಿ 22 ವರ್ಷಗಳ ಸುದೀರ್ಘ ವಿಚಾರಣೆಯ ನಂತರ ನ್ಯಾಯಾಲಯ 29 ಪುಟಗಳ ತೀರ್ಪು ನೀಡಿ ವಡಗಲೆನಾಮ ತೆಗೆದು ಚಿಕ್ಕಗೋಪುರಕ್ಕೆ ತೆಂಗಲೆ ನಾಮ ಅಳವಡಿಸುವಂತೆ ಆದೇಶ ಮಾಡಿದೆ.

ಜೆಎಂಎಫ್‌ಸಿ ನ್ಯಾಯಾಲಯದ ಆದೇಶದಂತೆ ಧಾರ್ಮಿಕ ದತ್ತಿ ಆಯುಕ್ತರು ನೀಡಿದ ನಿರ್ದೇಶನದಂತೆ ಗುರುವಾರ ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿ ಮಹೇಶ್, ಪಾರುಪತ್ತೇಗಾರ ಶ್ರೀಧರ್, ಅರ್ಚಕ ನಾರಾಯಣಭಟ್, ಅಡುಗೆಮನೆ ಕೈಂಕರ್ಯ ಪರರಾದ ಎಂ.ಕೆ ರಾಮಸ್ವಾಮಿ ಅಯ್ಯಂಗಾರ್ ಅಧ್ಯಾಪಕರಾದ ಶ್ರೀರಂಗಂಶಲ್ವ ನಾರಾಯಣನ್, ವಿದ್ವಾನ್ ಬಿ.ವಿ. ಆನಂದಾಳ್ವಾರ್ ಸಮಕ್ಷಮದಲ್ಲಿ ಯೋಗಾನರಸಿಂಹಸ್ವಾಮಿ ದೇವಾಲಯದ ಒಳಭಾಗದ ಚಿಕ್ಕಗೋಪುರದ ಮೇಲಿದ್ದ ವಡಗಲೆ ನಾಮವನ್ನು ತೆಗೆದು ತೆಂಗಲೆ ನಾಮವನ್ನು ಹಾಕಿಸಿದರು.

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಡಿಸಿಎಂ ಡಿಕೆಶಿ ಸಂಬಂಧಿ ಎಂದು ಹೇಳಿಕೊಂಡು ಗಲಾಟೆ

ಟೋಲ್ ಪ್ಲಾಜಾದಲ್ಲಿ ಟೋಲ್ ಕಟ್ಟಲು ನಿರಾಕರಿಸಿ ಮಹಿಳಾ ಸಿಬ್ಬಂದಿಗೆ ಕಪಾಳ ಮೋಕ್ಷ

ಶ್ರೀರಂಗಪಟ್ಟಣ, ಜ.28– ಮೈಸೂರು–ಬೆಂಗಳೂರು ಹೆದ್ದಾರಿಯ ಟೋಲ್ ಪ್ಲಾಜಾದಲ್ಲಿ ತಾನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂಬಂಧಿ ಎಂದು ಹೇಳಿಕೊಂಡು ಟೋಲ್ ಕಟ್ಟುವ ವಿಚಾರಕ್ಕೆ ಜಗಳ ಮಾಡಿ ಮಹಿಳಾ ಸಿಬ್ಬಂದಿ ಕಪಾಳಕ್ಕೆ ಹೊಡೆದು, ಹಲ್ಲೆ ನಡೆಸಿರುವ ಘಟನೆ ಸಂಭವಿಸಿದೆ.

ಬೆಂಗಳೂರಿನ ಕಡೆಯಿಂದ ಬರುತ್ತಿದ್ದ ಕಾರಿನಲ್ಲಿದ್ದವರು ಟೋಲ್ ಕಟ್ಟಲು ನಿರಾಕರಿಸಿ ನಾನು ಡಿಸಿಎಂ ಡಿ.ಕೆ. ಶಿವಕುಮಾರ್ ಸಂಬಂಧಿ. ಟೋಲ್ ಕಟ್ಟುವುದಿಲ್ಲ ಎಂದು ಜೆರಾಕ್ಸ್ ಪಾಸ್ ತೋರಿಸಿದ್ದಾನೆ ಆದರೆ ಇದು ಜೆರಾಕ್ಸ್ ಆಗಿದ್ದು, ಇದನ್ನು ಪರಿಗಣಿಸಲು ಸಾಧ್ಯವಿಲ್ಲ. ಹಾಗಾಗಿ ನೀವು ಟೋಲ್ ಕಟ್ಟಲೇಬೇಕು ಎಂದು ಸಿಬ್ಬಂದಿ ಹೇಳಿದ್ದಾರೆ. ಆದರೆ ಇದನ್ನು ಒಪ್ಪದ ಸವಾರ ಕೆಲಕಾಲ ತಕರಾರು ತಗೆದು ಕೊನೆಗೆ ಮೊಬೈಲ್‌ನಲ್ಲಿ ಆನ್‌ಲೈನ್ ಮೂಲಕ ಸ್ಕ್ಯಾನ್ ಮಾಡಿ ಹಣ ಪಾವತಿಸಿದ್ದಾನೆ ಆದರೆ ಮೊಬೈಲ್‌ನಲ್ಲಿ ಆ ಕೋಡ್ ನಂಬರ್ ಬರೆದುಕೊಳ್ಳಲು ಮೊಬೈಲ್



ತೋರಿಸಲು ಮಹಿಳಾ ಸಿಬ್ಬಂದಿ ಹೇಳಿದ್ದಾರೆ.

ಇದಕ್ಕೆ ಒಪ್ಪದ ಸವಾರ ನಾನು ಹಣ ಪಾವತಿಸಿದ್ದೇನೆ. ಅದನ್ನು ನಿಮ್ಮ ಕಂಪ್ಯೂಟರ್‌ನಲ್ಲಿ ನೋಡಿಕೊಳ್ಳಿ ಎಂದಿದ್ದಾರೆ. ಇದರಿಂದ ಮಾತಿಗೆ ಮಾತು ಬೆಳೆದು ಒಬ್ಬರಿಗೊಬ್ಬರು ನಿಂದಿಸಿಕೊಂಡು ಕಾರಿನಲ್ಲಿದ್ದ ವ್ಯಕ್ತಿ ಮಹಿಳಾ ಸಿಬ್ಬಂದಿಯ ಕಪಾಳಕ್ಕೆ ಹೊಡೆದು ಹಲ್ಲೆ ನಡೆಸಿದ್ದಾನೆ. ತಕ್ಷಣ ಇತರ ಸಿಬ್ಬಂದಿ ಇದನ್ನು ತಡೆದಿದ್ದಾರೆ. ನಂತರ ಸಿಬ್ಬಂದಿಗಳು ಸಿಸಿಟಿವಿ ವಿಡಿಯೋ ಸಮೇತ ಶ್ರೀರಂಗಪಟ್ಟಣ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಸದ್ಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದೇವೆ ಎಂದು ಇನ್ಸ್‌ಪೆಕ್ಟರ್ ಕುಮಾರ್ ತಿಳಿಸಿದ್ದಾರೆ.

ಕುಟುಂಬ ಸಮೇತರಾಗಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆ

ಮಂಡ್ಯ, ಜ.28– ಜೆಡಿಎಸ್ ಪಕ್ಷಕ್ಕೆ ಅಧಿಕೃತವಾಗಿ ಮರಳುವ ಮೂಲಕ ಮಾತೃ ಪಕ್ಷಕ್ಕೆ ಸೇರಿದ ಕಲ್ಲಹಳ್ಳಿ ಎಂ.ಜಿ.ಬಡಾವಣೆ ನಿವಾಸಿಗಳಾದ ಸಿದ್ದರಾಮೇಗೌಡ ಕುಟುಂಬ ಸಮೇತರಾಗಿ ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರು ನೇತೃತ್ವದಲ್ಲಿ ಸೇರ್ಪಡೆಯಾದರು. ಪಕ್ಷದ ಬಾವುಟ ಕೊಟ್ಟು ಗೌರವಿಸಿದ ಬಿ.ಆರ್.ರಾಮಚಂದ್ರ ಅವರು ಮಾತನಾಡಿ, ಸಿದ್ದರಾಮೇಗೌಡ ಸೇರಿದಂತೆ ಅವರ ಕುಟುಂಬ ಸಮೇತರಾಗಿ ಹಾಗೂ ತಮ್ಮ ಸ್ನೇಹಿತರು ಹಿತೈಷಿಗಳೊಂದಿಗೆ ಜೆಡಿಎಸ್ ಪಕ್ಷಕ್ಕೆ ಸೇರಿರುವುದು ಸಂತೋಷದ ವಿಷಯವಾಗಿದೆ ಎಂದರು.

ಮುಂಬರುವ ದಿನಗಳಲ್ಲಿ ಮತ್ತಷ್ಟು ಮುಖಂಡರುಗಳನ್ನು ಪಕ್ಷಕ್ಕೆ ಕರೆತರುವ ಮೂಲಕ ಪಕ್ಷವನ್ನು ಸದೃಢವಾಗಿ ಕಟ್ಟಲು ಶ್ರಮಿಸುತ್ತೇವೆ, ನಮ್ಮ ನಾಯಕರಾದ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಕಾರ್ಯಕರ್ತರಾದಿಯಾಗಿ ಶಕ್ತಿ ತುಂಬುವ ಕೆಲಸ ಮಾಡುತ್ತೇವೆ, ಎಲ್ಲರೂ ಮತ್ತಷ್ಟು ನಮ್ಮ ಪಕ್ಷಕ್ಕೆ ಕರೆತರುವ ಕೆಲಸವನ್ನು ಎಲ್ಲರೂ ಮಾಡೋಣ ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಪಕ್ಷಕ್ಕೆ ಆಗಮಿಸಿದ ಎಲ್ಲರಿಗೂ ಶಾಲು ಹಾಗೂ ಹೂವಿನ ಹಾರ ಹಾಕುವ ಮುಖಾಂತರ ಸ್ವಾಗತಿಸಲಾಯಿತು. ಗ್ರಾಪಂ ಮಾಜಿ ಅಧ್ಯಕ್ಷೆ ಲಕ್ಷ್ಮಮ್ಮ, ಅರವಿಂದ್, ರವಿ, ಮಂಜು ಭಾಗವಹಿಸಿದ್ದರು.

ಕೆರಗೋಡಿನಲ್ಲಿ ಹನುಮ ಧ್ವಜ ಇಳಿಸಿದ ವಿವಾದ

ಹನುಮ ಧ್ವಜ ತೆಗೆಯುವ ಸಲುವಾಗಿ ಕಾನೂನು ನಿಯಮ ಧಿಕ್ಕರಿಸಿ ರಾಷ್ಟ್ರಧ್ವಜ ಹಾರಿಸಿದ್ದಾರೆ

ಪ್ರತಿಪಕ್ಷ ನಾಯಕ ಆರ್.ಅಶೋಕ್ ಕಿಡಿ



ಮಂಡ್ಯ, ಜ.28– ಉದ್ದೇಶಪೂರ್ವಕವಾಗಿ ಕೆರಗೋಡುವಿನ ರಾಮಮಂದಿರದ ಮುಂಭಾಗದ ಧ್ವಜಸ್ತಂಭದಲ್ಲಿ ಹಾರಾಡುತ್ತಿದ್ದ ಹನುಮ ಧ್ವಜ ತೆಗೆಯುವ ಸಲುವಾಗಿ ಕಾನೂನು ನಿಯಮ ಧಿಕ್ಕರಿಸಿ ಕಾಂಗ್ರೆಸ್ ಸರ್ಕಾರ ಕುಮ್ಮಕ್ಕು ನೀಡಿ, ಪೊಲೀಸರ ಮುಖಾಂತರ ರಾಷ್ಟ್ರಧ್ವಜವನ್ನು ಅಕ್ರಮವಾಗಿ ಹಾರಿಸಿದ್ದಾರೆ ಎಂದು ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದರು. ಭಾನುವಾರ ವಿವಾದಿತ ಕೆರಗೋಡು ಧ್ವಜಸ್ಥಂಭ ಸ್ಥಳಕ್ಕೆ ಬಿಜೆಪಿ ನಿಯೋಗದೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹನುಮ ಬಾವುಟ ವಿಚಾರದಲ್ಲಿ ಕಾಂಗ್ರೆಸ್ ಯೋಗ್ಯತೆ ಇಡೀ ದೇಶಕ್ಕೆ ಗೊತ್ತಾಗಿದೆ. ನಾವು ನಮ್ಮ ಸ್ವಂತ ಆಸ್ತಿ ಕೇಳುತ್ತಿಲ್ಲ. ರಾಮನಿಗಾಗಿ ದೇವಸ್ಥಾನದ ಮುಂದೆ ಇರುವ ಜಾಗದಲ್ಲಿ ಧ್ವಜ ಹಾರಿಸಿದ್ದೇವೆ. ಆದರೆ ನಮ್ಮ ಹೋರಾಟ ಹತ್ತಿಕ್ಕಲು ಯಾವುದೋ ಸಮಯದಲ್ಲಿ ರಾಷ್ಟ್ರಧ್ವಜ ಹಾರಿಸಿ ಕಾನೂನು ಉಲ್ಲಂಘಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಷ್ಟ್ರಧ್ವಜ ಹಾರಿಸಲು ನಿಯಮವಿದೆ. ರಾಷ್ಟ್ರೀಯ ಹಬ್ಬದ ಸಂದರ್ಭದಲ್ಲಷ್ಟೇ ಹಾರಿಸಬೇಕು. ಬೆಳಿಗ್ಗೆ ಹಾರಿಸಿ, ಸಂಜೆ ಬಾವುಟವನ್ನು ಕೆಳಗಿಳಿಸಬೇಕು. ಆದರೆ ಮಟ ಮಟ ಮಧ್ಯಾಹ್ನ ಯಾವುದೋ ಪಟಭದ್ರ ಹಿತಾಸಕ್ತಿ ಗಾಗಿ ರಾಷ್ಟ್ರಧ್ವಜವನ್ನು ನಿಯಮ ಬಾಹಿರವಾಗಿ ಹಾರಿಸಲು ಸರ್ಕಾರಕ್ಕೆ ಯಾವ ಹಕ್ಕಿದೆ ಎಂದು ಪ್ರಶ್ನಿಸಿದರು.

ಸರ್ಕಾರಕ್ಕಂತೂ ಬುದ್ದಿ ಇಲ್ಲ. ಅಧಿಕಾರಿಗಳು ಸಹ ಬುದ್ದಿ ಇಲ್ಲದಂತೆ ವರ್ತಿಸುತ್ತಿದ್ದು, ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಬೂಟಿನ ಕಾಲಿನಲ್ಲೇ ಹನುಮ ಧ್ವಜವನ್ನು ಕಿತ್ತೆಸೆದಿದ್ದಾರೆ. ಇದಕ್ಕೆ ವಿರೋಧ ಮಾಡಿದವರಿಗೆ ಲಾಠಿ ಚಾರ್ಜ್ ಮಾಡಿ, ಹನುಮನ ನಾಡಿನಲ್ಲಿ ಹನುಮನಿಗೆ ಅಪಮಾನ ಮಾಡಿದ್ದಾರೆ. ಹನುಮ ಧ್ವಜ ಇದ್ದರೆ ಕಾಂಗ್ರೆಸ್ಸಿಗರಿಗೆನು ಸಮಸ್ಯೆ ಎಂದು ಪ್ರಶ್ನಿಸಿದ ಅವರು, ಈ ವಿಚಾರದಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಇದರ ಹಿಂದಿರುವವರ ಹೆಸರು ಬಯಲಾಗಬೇಕು. ಕಾಂಗ್ರೆಸ್‌ನ ಚಿತಾವಣೆ ಜನರಿಗೆ ತಿಳಿಯಬೇಕೆಂದರು.

ಬಾವುಟ ತೆಗೆಯಲು ಪಂಚಾಯ್ತಿಗೆ ಅಧಿಕಾರ ಇದೆಯೋ ಇಲ್ಲವೋ ಗೊತ್ತಿಲ್ಲ. ಸಮಸ್ಯೆಯಾಗಿದ್ದರೆ ಕೆರಗೋಡು ಪಂಚಾಯ್ತಿಯ ಅಧಿಕಾರಿಗಳು ಕೋರ್ಟ್‌ಗೆ ಹೋಗಬೇಕಿತ್ತು. ಏಕಾಏಕಿ ಬಾವುಟ ತೆಗೆಸಿದ್ದು ತಪ್ಪು ಎಂದ ಅವರು, ಕಾಂಗ್ರೆಸ್‌ಗೆ ರಾಮ, ಕೇಸರಿ ಹನುಮ ಕಂಡರೆ ಕೆಂಡ ಮಂಡಲರಾಗುತ್ತಾರೆ. ಟೋಪಿ, ಮಸೀದಿಗೆ ಮಾತ್ರ ಬೆಲೆ ಕೊಡುತ್ತಾರೆ. ಘಟನೆ ವಿರುದ್ಧ ಉಗ್ರ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ನಾಳೆ (ಸೋಮವಾರ) ಕೆರಗೋಡಿನಿಂದ ಮಂಡ್ಯ ಡಿಸಿ ಕಚೇರಿವರೆಗೆ ಪಾದಯಾತ್ರೆಯನ್ನು ಜೆಡಿಎಸ್ ಹಾಗೂ ಬಿಜೆಪಿ ಜಂಟಿಯಾಗಿ ಮಾಡಲಿದ್ದು, ಚಿಕ್ಕಮಗಳೂರಿನ ದತ್ತಪೀಠ ಮಾದರಿಯಲ್ಲಿ ಈ ಹೋರಾಟ ನಡೆಯಲಿದ್ದು, ಹನುಮ ಭಕ್ತರ ಮೇಲೆ ಲಾಠಿಪ್ರಹಾರ ಮಾಡಿದ್ದಾರೆ. ಸಿದ್ದರಾಮಯ್ಯ ಎದೆಯಲ್ಲಿ ಟಿಪ್ಪು ಸುಲ್ತಾನ್ ಇದ್ದು, ಬಾಯಲ್ಲಿ ಮಾತ್ರ ರಾಮನಿದ್ದಾನೆ. ಹನುಮನ ಶಾಪ ಕಾಂಗ್ರೆಸ್‌ಗೆ ತಟ್ಟಿದ್ದು ಲಂಕಾ ದಹನವಾದಂತೆ ಕಾಂಗ್ರೆಸ್ ಸಹ ದಹನವಾಗುತ್ತದೆ ಎಂದು ಎಚ್ಚರಿಸಿದರು.

ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ ಮಾತನಾಡಿ, ಇಲ್ಲಿರುವುದು ಪ್ರಜಾಪ್ರಭುತ್ವದ ಸರ್ಕಾರವೋ ಅಥವಾ ತಾಲಿಬಾನ್ ಸರ್ಕಾರವೋ ಎಂಬ ಪ್ರಶ್ನೆ ನನಗೆ ಮೂಡಿದೆ. ಸ್ವಂತ ಹಣದಿಂದ ಜನರೇ ಧ್ವಜಸ್ಥಂಭ ಕಟ್ಟಿಸಿ, ರಾಷ್ಟ್ರ, ನಾಡ, ಧಾರ್ಮಿಕ ಧ್ವಜಗಳನ್ನು ಹಾರಿಸಿಕೊಂಡರೆ ಕಾಂಗ್ರೆಸ್ಸಿಗರಿಗೇನು ಸಮಸ್ಯೆ? ಇದನ್ನು ತಡೆಯುವ ಅಧಿಕಾರ ಇವರಿಗೆ ಕೊಟ್ಟವರ್ಯಾರು ಎಂದು ಪ್ರಶ್ನಿಸಿದರು.

ಸಂಘರ್ಷದಲ್ಲಿ ನನ್ನ ಕೈವಾಡವಿಲ್ಲ, ಜೆಡಿಎಸ್– ಬಿಜೆಪಿಯಿಂದ ಸಾಮರಸ್ಯ ಹಾಳು

ಮಂಡ್ಯ, ಜ.28– ಕೆರಗೋಡಿನ ಹನುಮ ಧ್ವಜ ವಿವಾದದ ಸಂಘರ್ಷದಲ್ಲಿ ನನ್ನ ಹೆಸರನ್ನು ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರು ತಳುಕು ಹಾಕಿ, ನನ್ನ ವಿರುದ್ಧ ಪ್ರತಿಭಟನೆ ನಡೆಸಿದ್ದು, ಘಟನೆಗೂ ನನಗೂ ಯಾವುದೇ ಸಂಬಂಧವಿಲ್ಲ. ಈ ಹಿಂದೆ ಯಾವತ್ತೂ ಸಹ ಧಾರ್ಮಿಕ ವಿವಾದಕ್ಕೆ ಸಾಕ್ಷಿಯಾಗದ ಮಂಡ್ಯ ನಗರದ ಸಾಮರಸ್ಯವನ್ನು ಎರಡು ಪಕ್ಷದ ಮುಖಂಡರು ಹಾಳು ಮಾಡಲು ಹೊರಟಿದ್ದಾರೆ ಎಂದು ಮಂಡ್ಯ ಶಾಸಕ ಗಣಿಗ ರವಿಕುಮಾರ್ ಆಕ್ರೋಶ ವ್ಯಕ್ತಪಡಿಸಿದರು. ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಹಾಗೂ ಬಿಜೆಪಿ ಒಂದಾಗಿ ಮಂಡ್ಯದಲ್ಲಿ ಅಶಾಂತಿ ಸೃಷ್ಟಿಸಲು ಮುಂದಾಗಿದ್ದಾರೆ. ಇದರಲ್ಲಿ ನನ್ನದು ಯಾವುದೇ ಕೈವಾಡ ವಿಲ್ಲ. ಪ್ರಸ್ತುತ ವಿವಾದಕ್ಕೆ ಕಾರಣವಾಗಿರುವ ಧ್ವಜಸ್ಥಂಭದ ಜಾಗದಲ್ಲಿ ಹೈಟೆಕ್ ಬಸ್ ನಿಲ್ದಾಣ ಸ್ಥಾಪಿಸಲು ಇತ್ತೀಚೆಗೆ ಆ ಸ್ಥಳವನ್ನು ಪರಿಶೀಲನೆ ನಡೆಸಿದ್ದೆ. ಆಗ ಪ್ರತಿಭಟನೆ ಮಾಡುತ್ತಿರುವ ಜೆಡಿಎಸ್ ಕಾರ್ಯಕರ್ತರು ಧ್ವಜಸ್ಥಂಭ ಸ್ಥಾಪಿಸುತ್ತಿದ್ದು, ನೀವು ಬಸ್ ನಿಲ್ದಾಣ ನಿರ್ಮಿಸಲು ಮುಂದಾದಾಗ ಧ್ವಜಸ್ಥಂಭ ತೆಗೆಯುವಾಗಿ ಹೇಳಿದ್ದರು. ಆದರೆ ಇದೀಗ ಅವರ ವರಸೆಯೇ ಬದಲಾಗಿದೆ ಎಂದು ಕಿಡಿಕಾರಿದರು.



ಬಸ್ ನಿಲ್ದಾಣ ಆರಂಭವಾಗಲು ಇನ್ನೂ ಹಲವು ವರ್ಷ ಬೇಕೆಂದು ಅವರೇ ನಿರ್ಧರಿಸಿ ಧ್ವಜಸ್ಥಂಭ ನಿರ್ಮಿಸಿದ್ದಾರೆ. ಆದರೆ ನಾನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರನ್ನು ಸಂಪರ್ಕಿಸಿ, ಬಸ್ ನಿಲ್ದಾಣದ ಕಾಮಗಾರಿ ಆರಂಭಿಸಲು ಮುಂಗಡ 2 ಕೋಟಿ ಹಣವನ್ನು ಮೀಸಲಿರಿಸಿ ನಿಲ್ದಾಣ ಸ್ಥಾಪನೆಗೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿದ್ದೆ. ಇದರಿಂದ ಕುಪಿತರಾಗಿ ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಾ, ಹನುಮ ಧ್ವಜ ವಿವಾದ ಆರಂಭಿಸಿದ್ದಾರೆ. ಜೆಡಿಎಸ್ ಹಾಗೂ ಬಿಜೆಪಿಗೆ ಅಭಿವೃದ್ಧಿಗಿಂತ ರಾಜಕಾರಣವೇ ಮಹತ್ವದ್ದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ರಾಜಕೀಯ ಷಡ್ಯಂತ್ರ ಮಾಡುತ್ತಿದೆ: ಸುರೇಶ್‌ಗೌಡ



ಮಂಡ್ಯ, ಜ.28– ಹನುಮ ಧ್ವಜ ಕೆಳಗಿಳಿಸುವ ವಿಚಾರದಲ್ಲಿ ಕಾಂಗ್ರೆಸ್ ಸಂಪೂರ್ಣ ರಾಜಕೀಯ ಷಡ್ಯಂತ್ರ ಮಾಡುತ್ತಿದ್ದು, ಇಳಿಸಿರುವ ಧ್ವಜವನ್ನ ಮತ್ತೆ ಹಾರಿಸಬೇಕು. ಬೇಕಿದ್ದರೆ ಸಿದ್ದರಾಮಯ್ಯ ಅವರೇ ಬಂದು ಧ್ವಜ ಹಾರಿಸಲಿ ಎಂದು ಮಾಜಿ ಶಾಸಕ ಕೆ.ಸುರೇಶ್‌ಗೌಡ ಆಗ್ರಹಿಸಿದರು.

ವಿವಾದಿತ ಸ್ಥಳವಾದ ಕೆರಗೋಡುವಿನ ಧ್ವಜ ಸ್ಥಂಭದ ಬಳಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತ ನಾಡಿದ ಅವರು, ಬೇಕಿದ್ದರೆ ಸಿಎಂ ಸಿದ್ದರಾಮಯ್ಯ ಅವರೇ ಬಂದು ಹನುಮ ಧ್ವಜ ಹಾರಿಸಲಿ. ಮತ್ತೆ ಧ್ವಜ ಹಾರಿಸದಿದ್ದರೆ ಈ ವಿವಾದದ ಹೋರಾಟ ಮತ್ತೊಂದು ಸ್ವರೂಪ ಪಡೆದುಕೊಳ್ಳುತ್ತದೆ. ನಾವು ಶಾಂತಿ ಬಯಸಿದ್ದೇವೆ, ಅವರಾಗೆ ಬಂದು ಮತ್ತೆ ಅದೇ ಜಾಗದಲ್ಲಿ ಧ್ವಜ ಹಾರಿಸಲಿ ಎಂದು ಒತ್ತಾಯಿಸಿದರು. ಷಡ್ಯಂತ್ರದ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕುಮ್ಮಕ್ಕು ಸಹ ಇದ್ದು, ಇಂತಹ ವಿಚಾರದಲ್ಲಿ ರಾಜಕೀಯ ಮಾಡುವ ಅವರಿಗೆ ಚಲುವ ರಾಯಸ್ವಾಮಿ ಗೆ ಬುದ್ದಿ ಇದೆಯಾ ಎಂದು ಪ್ರಶ್ನಿಸಿದರು.

ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಇಂದ್ರೇಶ್ ಮಾತನಾಡಿ, ಸ್ಥಳೀಯ ಶಾಸಕ ರವಿಕುಮಾರ್ ಹಾಗೂ ಸಚಿವ ಚಲುವರಾಯಸ್ವಾಮಿ ಕುಮ್ಮಕ್ಕಿನಿಂದ ಹನುಮ ಧ್ವಜ ಇಳಿಸಲಾಗಿದೆ. ಗ್ರಾಮಸ್ಥರು ಒಗ್ಗಟ್ಟಾಗಿ ಹನುಮ ಧ್ವಜ ಸ್ಥಾಪಿಸಿದ್ದರು. ಅಧಿಕಾರಿಗಳನ್ನ ಬಳಸಿಕೊಂಡು ಶಾಸಕ ರವಿಕುಮಾರ್ ಹಾಗೂ ಚಲುವರಾಯಸ್ವಾಮಿ ಹನುಮ ಧ್ವಜವನ್ನ ಇಳಿಸಿದ್ದಾರೆ. ರಾಮಮಂದಿರ ಉದ್ಘಾಟನೆ ದಿನ ಜನರು ಹಬ್ಬದಂತೆ ಸಂಭ್ರಮಿಸಿದ್ದನ್ನ ತಡೆಯಲಾಗದೆ ಈ ರೀತಿ ಮಾಡಲಾಗಿದೆ ಎಂದು ಕಿಡಿಕಾರಿದರು. ಹನುಮ ಧ್ವಜದ ವಿಚಾರವನ್ನ ರಾಜಕೀಯ ಮಾಡಿದ್ದಾರೆ. ನಾಳೆ ಬೆಳಗ್ಗೆ ಗ್ರಾಮದಿಂದ ಡಿಸಿ ಕಚೇರಿ ವರೆಗೆ ಸಾವಿರಾರು ಕಾರ್ಯಕರ್ತರು ಪಾದಯಾತ್ರೆ ಹೊರಡಲಿದ್ದೇವೆ. ಹನುಮ ಧ್ವಜ ಮತ್ತೆ ಹಾರಿಸಲಿದ್ದೇವೆ. ಇವತ್ತಿನಿಂದ ಈ ಕುರಿತು ಹೋರಾಟಗಳು ಆರಂಭವಾಗಲಿವೆ ಎಂದರು.

ಯುವಕ ನೀರು ಪಾಲು

ಹೆಚ್.ಡಿ.ಕೋಟೆ, ಜ.28– ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯದ ಹಿನ್ನೀರಿನಲ್ಲಿ ಈಜಲು ಹೋದ ಯುವಕನೋರ್ವ ಸಾವನ್ನಪ್ಪಿರುವ ಘಟನೆ ಭಾನುವಾರ ನಡೆದಿದೆ. ನಂಜನಗೂಡು ತಾಲೂಕಿನ ಹೊಸವೀಡು ಗ್ರಾಮದ ಯುವಕ ಸಾಗರ್(20) ನೀರು ಪಾಲಾದವರು. ಈತ ಭಾನುವಾರ ರಜೆ ಇದ್ದಿದ್ದರಿಂದ ಸಿರಮಳ್ಳಿ ಗ್ರಾಮದ ತನ್ನ ಮಾವನ ಮನೆಗೆ ಆಗಮಿಸಿದ್ದ ಎನ್ನಲಾಗಿದೆ. ಆದರೆ ಕಬಿನಿ ಜಲಾಶಯದ ಹಿನ್ನೀರಿನಲ್ಲಿ ಈಜಲು ಹೋಗಿದ್ದು, ಮತ್ತೆ ದಡಕ್ಕೆ ಬರಲು ಸಾಧ್ಯವಾಗದೇ ನೀರಿನಲ್ಲಿ ಮುಳುಗುತ್ತಿದ್ದನ್ನು ಕಂಡ ನದಿ ಪಾತ್ರದಲ್ಲಿದ್ದ ಯುವಕರು ಸಾಗರ್‌ನನ್ನು ರಕ್ಷಿಸಿ, ಚಿಕಿತ್ಸೆಗಾಗಿ ಸರಗೂರಿನ ವಿವೇಕಾನಂದ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ವೇಳೆ ಸಾಗರ್ ಸಾವನ್ನಪ್ಪಿದ್ದಾನೆ ಎನ್ನಲಾಗಿದೆ. ಈ ಸಂಬಂಧ ಅಂತರ ಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನಂಜನಗೂಡಿನ ಬಕಾರ್ಡಿ ಇಂಡಿಯಾ ಲಿಮಿಟೆಡ್‌ನಲ್ಲಿ 75ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಡಿಸ್ಟಿಲರಿ ಅಧಿಕಾರಿ ಎಸ್.ಎಂ.ಮಹೇಶ್ ಧ್ವಜಾರೋಹಣ ನೆರವೇರಿಸಿದರು. ಡಿಸ್ಟಲರಿ ಅಧಿಕಾರಿಗಳಾದ ಜಿ.ಎಂ.ಶೈಲೇಶ್ ರೈ ಸೇರಿದಂತೆ ಇನ್ನಿತರರಿದ್ದರು.

ಸಂವಿಧಾನ ಇರುವವರೆಗೆ ದೇಶ ಸದೃಢ

ಸಹಾಯಕ ಸರ್ಕಾರಿ ಅಭಿಯೋಜಕ ಹೆಚ್.ಪಿ.ಮಹೇಂದ್ರ



ಸರಗೂರಿನಲ್ಲಿ 75ನೇ ಗಣರಾಜ್ಯೋತ್ಸವ ಆಚರಿಸಲಾಯಿತು.

ಸರಗೂರು, ಜ.28– ಎಲ್ಲಿವರೆಗೆ ಸಂವಿಧಾನ ಸದೃಢವಾಗಿರುತ್ತದೆಯೋ ಅಲ್ಲಿವರೆಗೆ ದೇಶವೂ ಸದೃಢವಾಗಿರುತ್ತದೆ ಎಂದು ಜೆಎಂಎಫ್‌ಸಿ ನ್ಯಾಯಾಲಯದ ಸಹಾಯಕ ಸರ್ಕಾರಿ ಅಭಿಯೋಜಕ ಹೆಚ್.ಪಿ.ಮಹೇಂದ್ರ ಅಭಿಪ್ರಾಯಪಟ್ಟರು.

ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಒಂದು ಕುಟುಂಬ ಮುನ್ನಡೆಸಲು ಮನೆ ಮುಖ್ಯಸ್ಥ ಹೇಗೆ ಮುಖ್ಯ ಪಾತ್ರ ವಹಿಸುತ್ತಾನೋ ಹಾಗೇ ಒಂದು ದೇಶ ಮುನ್ನಡೆಸಲು ಸಂವಿಧಾನ ಪ್ರಮುಖ ಪಾತ್ರ ವಹಿಸುತ್ತದೆ. ನಾವೆಲ್ಲರೂ ಸುರಕ್ಷಿತವಾಗಿ ಜೀವಿಸುತ್ತಿದ್ದೇವೆ ಎಂದರೆ ಅದಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನ ಕಾರಣ ಎಂದರು. ಸಂಸ್ಥೆಯ ಸಮುದಾಯ ಆರೋಗ್ಯ ಕಾರ್ಯಕ್ರಮಗಳ ಯೋಜನಾ ನಿರ್ದೇಶಕ ಡಾ.ಆರ್. ಅಭಿಷೇಕ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ದರು. ಇದೇ ವೇಳೆ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಭಾರತ ಸಂವಿ ಧಾನ ಹಾಗೂ ಗಣರಾಜ್ಯೋತ್ಸವ ಕುರಿತು ರಸಪ್ರಶ್ನೆ ಕಾರ್ಯಕ್ರಮ ಏರ್ಪಡಿಸಲಾಯಿತು.

ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಆರೋಗ್ಯ ಕ್ಷೇತ್ರದ ಮುಖ್ಯಸ್ಥ ಡಾ.ಕುಮಾರ್, ವಿವೇಕಾನಂದ ಸ್ಮಾರಕ ಆಸ್ಪತ್ರೆ ನಿರ್ದೇಶಕ ಡಾ.ರವೀಂದ್ರನಾಥ್ ಶ್ರಾಫ್, ಉಪ ನಿರ್ದೇಶಕ ಡಾ.ಶಂಕರ್, ನಿವೃತ್ತ ಜಿಲ್ಲಾ ನೇತ್ರಾಧಿಕಾರಿ ಆರ್.ಟಿ.ಶಶಿಕಲಾ ಆಸ್ಪತ್ರೆ ವ್ಯವಸ್ಥಾಪಕ ಸುಷ್ಮಶ್ರೀ, ಡಾ.ಅರುಣ್ ಕುಮಾರ್, ಡಾ.ನಾಗೇಶ್, ಡಾ.ಮನೋಹರ್ ಪ್ರಸಾದ್, ದೀಪಶ್ರೀ, ಬೀನಾ, ಕಾರ್ಯಕ್ರಮಗಳ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗ, ಸಾರ್ವಜನಿಕರು ಉಪಸ್ಥಿತರಿದ್ದರು.

ಇಂದು ಜಾತ್ರಾ ಮಹೋತ್ಸವ

ನಂಜನಗೂಡು, ಜ.28– ತಾಲೂಕಿನ ಬಿದರಗೂಡು ಗ್ರಾಮದಲ್ಲಿ ಸಿದ್ದಪ್ಪಾಜಿಯವರ 23ನೇ ವಾರ್ಷಿಕೋತ್ಸವದ ಅಂಗವಾಗಿ ಜ.29 ರಂದು ಜಾತ್ರಾ ಮಹೋತ್ಸವ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜಾತ್ರಾ ಮಹೋತ್ಸವದ ಅಂಗವಾಗಿ ಜ.28 ರಂದು ರಾತ್ರಿ 7.30ಕ್ಕೆ ರುದ್ರ ಹೋಮ ನಡೆಯಿತು. ಜ.29 ರಂದು ಬೆಳಗ್ಗೆ 6 ರಿಂದ 8ರವರೆಗೆ ಮಡಿ ನಡ, ಬೆಳಗ್ಗೆ 9ಕ್ಕೆ ಭಕ್ತರು ಬಾಯಿಗೆ ಬೀಗ ಹಾಕಿಸಿಕೊಂಡು ಕಪಿಲಾ ನದಿಯಿಂದ ಛತ್ರಿ, ಚಾಮರ, ವೀರಗಾಸೆ, ಕಂಸಾಳೆ, ಡೊಳ್ಳುಕುಣಿತ, ಗಾರುಡಿ ಗೊಂಬೆಗಳಂತಹ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಹಾಲರವಿ ಉತ್ಸವವು ಜರುಗಲಿದೆ. ಮಧ್ಯಾಹ್ನ 12 ಗಂಟೆಗೆ ಕೊಂಡೋತ್ಸವ ಜರುಗಲಿದೆ. ನಂತರ ಗ್ರಾಮದ ಪ್ರಮುಖ ಬೀದಿಯಲ್ಲಿ ಸಿದ್ದಪ್ಪಾಜಿ ಅವರ ಪಲ್ಲಕ್ಕಿ ಉತ್ಸವು ವಿಜೃಂಭಣೆಯಿಂದ ನಡೆಯಲಿದೆ ಎಂದು ದೇವಾಲಯದ ಮುಖ್ಯ ಅರ್ಚಕ ವೀರಭದ್ರಸ್ವಾಮಿ ಮಾಹಿತಿ ನೀಡಿದ್ದಾರೆ.



ಹೆಚ್.ಡಿ.ಕೋಟೆ ತಾಲೂಕಿನ ಮಾದಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 75ನೇ ಗಣರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಇದೇ ವೇಳೆ ಕೆನರಾ ರೊಬೆಕೊ ಮ್ಯೂಚುಯಲ್ ಫಂಡ್ಸ್ ಬ್ರಾಂಚ್ ಮ್ಯಾನೇಜರ್ ವಿನ್ಸೆಂಟ್ ಶಾಲೆಯ 7ನೇ ತರಗತಿ ಮಕ್ಕಳಿಗೆ ಸೈಕಲ್ ಕೊಡುಗೆ ನೀಡಿದರು. ಮಾದಾಪುರ ಗ್ರಾಪಂ ಅಧ್ಯಕ್ಷ ಮಹೇಶ್ ನಾಯಕ್, ರೋಟರಿ ಪಂಚಶೀಲ್ ಮೈಸೂರು ಅಧ್ಯಕ್ಷ ಕಿರಣ್ ರಾಬರ್ಟ್, ಸಾಯಿ ಫೌಂಡೇಶನ್ ಮ್ಯಾನೇಜಿಂಗ್ ಟ್ರಸ್ಟಿ ರಾಜರಾಮನ್, ಆನಂದ್ ಹಾಗೂ ಸೋಮೇಶ್ ನೇತೃತ್ವದಲ್ಲಿ ಶಾಲೆ ಕಾಂಪೌಂಡ್, ಶೌಚಾಲಯ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಬಿ.ಜೆ. ಆದರ್ಶಗೆ ಪಿಎಚ್.ಡಿ ಪದವಿ



ಮೈಸೂರು, ಜ.28– ಡಾ. ಸುಜಾತ ಬಿ. ಹಂಚಿನಲ್ಕರ್ ಅವರ ಮಾರ್ಗದರ್ಶನದಲ್ಲಿ ಬಿ.ಜೆ. ಆದರ್ಶ ಅವರು ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಮಿತ್ರ

ಒಂದನೇ ಪುಟದಿಂದ

ಮಂಡ್ಯದ ಕೆರಗೋಡು ಉದ್ವಿಗ್ನ

ಹಾರಿಸಲಾಗಿದ್ದ ಹನುಮ ಧ್ವಜವನ್ನು ತೆರವುಗೊಳಿಸಲಾಗುತ್ತಿದೆ ಎಂಬ ವಿಷಯ ತಿಳಿದ ಜೆಡಿಎಸ್, ಬಿಜೆಪಿ ಮತ್ತು ಹಿಂದೂಪರ ಸಂಘಟನೆಗಳು ಶನಿವಾರ ರಾತ್ರಿಯಿಂದಲೇ ರಾಮಮಂದಿರದ ಬಳಿ ಜಮಾಯಿಸಿ ಪ್ರತಿಭಟನೆ ನಡೆಸಲಾರಂಭಿಸಿದರು.

ನಿಯಮ ಉಲ್ಲಂಘಿಸಿ ಹನುಮ ಧ್ವಜವನ್ನು ಹಾರಿಸಿರುವುದರಿಂದ ಅದನ್ನು ತೆರವುಗೊಳಿಸಲಾಗುವುದು ಎಂದು ಹೇಳಿ ಪೊಲೀಸರು ಭಾನುವಾರ ಬೆಳಗ್ಗೆ ಪ್ರತಿಭಟನಾಕಾರರ ಭಾರೀ ವಿರೋಧದ ನಡುವೆಯೂ ಹನುಮಧ್ವಜವನ್ನು ಕೆಳಗೆ ಇಳಿಸಿದರು. ಇದನ್ನು ಖಂಡಿಸಿ ಜೆಡಿಎಸ್, ಬಿಜೆಪಿ ಹಾಗೂ ಹಿಂದೂ ಸಂಘಟನೆಗಳ ನೂರಾರು ಕಾರ್ಯಕರ್ತರು ಪ್ರತಿಭಟನೆ ಆರಂಭಿಸಿದರು. ಈ ವಿಷಯ ತಿಳಿದ ಹಿಂದೂಪರ ಸಂಘಟನೆ ಮತ್ತು ರಾಜ್ಯ ಬಿಜೆಪಿ ನಾಯಕರು ಗ್ರಾಮಕ್ಕೆ ಧಾವಿಸಲಾರಂಭಿಸಿದರು. ಇದರಿಂದ ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿರುವುದನ್ನು ಅರಿತ ಪೊಲೀಸರು ಲಾಠಿ ಪ್ರಹಾರ ನಡೆಸಿ, ಪ್ರತಿಭಟನಾಕಾರರನ್ನು ಚದುರಿಸಿದರು. ಇದರಿಂದ ಕೆರಗೋಡು ಗ್ರಾಮದಲ್ಲಿ ಪರಿಸ್ಥಿತಿ ಉದ್ವಿಗ್ನತೆಯಿಂದ ಕೂಡಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಘಟನೆಯ ವಿವರ: ಕಳೆದ ಸೋಮವಾರ (ಜ.22) ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆ ಹಾಗೂ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆಯ ಅಂಗವಾಗಿ ಗ್ರಾಮದ ಮಧ್ಯಭಾಗದಲ್ಲಿರುವ ರಂಗಮಂದಿರದ ಆವರಣದಲ್ಲಿರುವ 108 ಅಡಿ ಎತ್ತರದ ನೂತನ ಧ್ವಜಸ್ತಂಭದಲ್ಲಿ ಕೇಸರಿ ಹನುಮ ಧ್ವಜ ಬಾವುಟ ಹಾರಿಸಲಾಗಿತ್ತು. ಹನುಮ ಧ್ವಜ ಹಾರಾಟಕ್ಕೆ ಅನುಮತಿ ನೀಡುವಂತೆ ಗ್ರಾಮದ ಶ್ರೀ ಗೌರಿಶಂಕರ ಸೇವಾ ಟ್ರಸ್ಟ್ ಜ.17ರಂದು ಕೆರಗೋಡು ಗ್ರಾಪಂಗೆ ಮನವಿ ಮಾಡಿತ್ತು. ಕೆರಗೋಡು ಗ್ರಾಪಂ ಸಭೆ ನಡೆಸಿ, ಸಭೆಯಲ್ಲಿ ಈ ಪ್ರಸ್ತಾಪಕ್ಕೆ ಜೆಡಿಎಸ್, ಬಿಜೆಪಿ, ಕಾಂಗ್ರೆಸ್‌ನ ಹಲವು ಸದಸ್ಯರು ಬೆಂಬಲ ಸೂಚಿಸಿದರೆ ಕೆಲವರು ವಿರೋಧ ವ್ಯಕ್ತಪಡಿಸಿದ್ದರು. ಆಗ ಗ್ರಾಪಂ ಕರ್ನಾಟಕ ಧ್ವಜ, ಕನ್ನಡ ಧ್ವಜ ಮತ್ತು ರಾಷ್ಟ್ರ ಧ್ವಜ ಹಾರಾಟಕ್ಕೆ ಮಾತ್ರ ಷರತ್ತುಬದ್ಧ ಅನುಮತಿ ನೀಡಿತ್ತು ಆದರೆ, ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಯ ಹಿಂದಿನ ದಿನವೇ ಹನುಮ ಬಾವುಟ ಹಾರಿಸಲಾಗಿತ್ತು. ಜ.26ರಂದು ಗಣರಾಜ್ಯೋತ್ಸವ ಹಿನ್ನೆಲೆಯಲ್ಲಿ ಅದನ್ನು ಇಳಿಸಿ ರಾಷ್ಟ್ರೀಯ ಧ್ವಜ ಹಾರಿಸಲಾಗಿತ್ತು. ಬಳಿಕ ಶನಿವಾರ ಗ್ರಾಮದ ಕೆಲ ಯುವಕರು ಮತ್ತೆ ಕೇಸರಿ ಹನುಮಧ್ವಜ ಹಾರಿಸಿದ್ದರು. ಇದರ ವಿರುದ್ಧ ಕೆಲವರು ದೂರು ನೀಡಿದ ಹಿನ್ನೆಲೆಯಲ್ಲಿ ಶನಿವಾರ ತಾಲೂಕು ಪಂಚಾಯಿತಿ ಇಓ ವೀಣಾ ಸ್ಥಳಕ್ಕೆ ಭೇಟಿ ನೀಡಿ, ಧ್ವಜ ತೆರವಿಗೆ ಮುಂದಾದಾಗ ಇದಕ್ಕೆ ಭಾರೀ ವಿರೋಧ ವ್ಯಕ್ತವಾಯಿತು. ಇದರಿಂದ ಎಚ್ಚೆತ್ತ ಗ್ರಾಮದ ಕೆಲ ಯುವಕರು, ಜೆಡಿಎಸ್, ಬಿಜೆಪಿ, ಹಿಂದೂಪರ ಕಾರ್ಯಕರ್ತರ ಬೆಂಬಲದೊಂದಿಗೆ ರಾತ್ರಿಯೇ ಪ್ರತಿಭಟನೆಗಿಳಿದರು. ಜೊತೆಗೆ ಇಡೀ ರಾತ್ರಿ ಹನುಮಧ್ವಜ ಇಳಿಸದಂತೆ ಸ್ಥಳದಲ್ಲೇ ಕುಳಿತು ಕಾಯ್ದುಕೊಂಡಿದ್ದರು.

ರಾಜಕೀಯ ತಿರುವು ಪಡೆದ ವಿವಾದ: ನೂರಾರು ಜೆಡಿಎಸ್, ಬಿಜೆಪಿ ಮತ್ತು ಹಿಂದೂಪರ ಕಾರ್ಯಕರ್ತರು, ಮುಖಂಡರಾದ ಬಿ.ಆರ್.ರಾಮಚಂದ್ರ, ಎಂ.ಎಸ್.ರಘುನಂದನ್ ಹಾಗೂ ಅಶೋಕ್ ಜಯರಾಂ ನೇತೃತ್ವದಲ್ಲಿ ಜಮಾವಣೆಗೊಳ್ಳುತ್ತಿದ್ದಂತೆ ಭಾನುವಾರ ಬೆಳಗ್ಗೆ 6.30ಕ್ಕೆ ಸ್ಥಳಕ್ಕೆ ಎಸ್ಪಿ ಎನ್.ಯತೀಶ್ ನೇತೃತ್ವದಲ್ಲಿ ಪೊಲೀಸರು ಮತ್ತಷ್ಟು ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿ, ಸಶಸ್ತ್ರ ಮೀಸಲು ಪಡೆಯನ್ನು ತಂದು ನಿಲ್ಲಿಸಿದರು. ಹನುಮ ಧ್ವಜ ಇಳಿಸುವ ಮಾಹಿತಿ ಅರಿತ ಕಾರ್ಯಕರ್ತರು ಪ್ರತಿಭಟನೆ ತೀವ್ರಗೊಳಿಸಿ, ಜೈ ಶ್ರೀರಾಮ್, ಜೈ ಶ್ರೀರಾಮ್ ಸೇರಿದಂತೆ ದೇಶದ ಪರ ಘೋಷಣೆಗಳನ್ನು ಮೊಳಗಿಸಿದರು. ಜೊತೆಗೆ ಪೊಲೀಸರು ಮತ್ತು ಜಿಲ್ಲಾಡಳಿತದ ವಿರುದ್ಧ ಧಿಕ್ಕಾರದ ಘೋಷಣೆಗಳ ಕೂಗಲಾರಂಭಿಸಿದರು. ಎಸಿ ಶಿವಮೂರ್ತಿ, ತಹಸೀಲ್ದಾರ್ ಶಿವಕುಮಾರ್ ಬಿರಾದಾರ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಹನುಮ ಬಾವುಟ ತೆರವಿಗೆ ಜಿಲ್ಲಾಡಳಿತ ಆದೇಶ: ಸರ್ಕಾರಿ ಜಾಗದಲ್ಲಿ ಅಳವಡಿಸಿರುವ ಧ್ವಜಸ್ತಂಭದಲ್ಲಿ ರಾಷ್ಟ್ರ ಹಾಗೂ ನಾಡಧ್ವಜ ಹೊರತುಪಡಿಸಿ ಉಳಿದ ಧಾರ್ಮಿಕ ಬಾವುಟಗಳನ್ನು ಹಾರಿಸಲು ಅವಕಾಶವಿಲ್ಲ ಎಂಬ ನಿಯಮವನ್ನು ಉಲ್ಲೇಖಿಸಿ, ಹನುಮಧ್ವಜ ತೆರವುಗೊಳಿಸುವಂತೆ ಅಧಿಕಾರಿಗಳ ಮೌಖಿಕ ಆದೇಶ ಬಂದ ಹಿನ್ನಲೆಯಲ್ಲಿ ಪೊಲೀಸರು ಹನುಮ ಧ್ವಜ ತೆರವಿಗೆ ಮುಂದಾದರು. ಭಾರೀ ವಿರೋಧದ ನಡುವೆಯೂ ನೂರಾರು ಪೊಲೀಸರು ಧ್ವಜಸ್ತಂಭದಿಂದ ಹನುಮ ಧ್ವಜವನ್ನು ಭಾನುವಾರ ಬೆಳಗ್ಗೆ 8.30ರ ಸಮಯದಲ್ಲಿ ಕೆಳಗೆ ಇಳಿಸಿ, ಪಕ್ಕದ ರಾಮಮಂದಿರಕ್ಕೆ ಕೊಂಡೊಯ್ದರು.

ಗಣಿಗ ರವಿಕುಮಾರ್ ವಿರುದ್ಧ ಆಕ್ರೋಶ: ಬಲವಂತವಾಗಿ ಹನುಮ ಧ್ವಜವನ್ನು ಕೆಳಗಿಳಿಸುವುದರ ಹಿಂದೆ ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ಕೈವಾಡವಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ಜೆಡಿಎಸ್, ಬಿಜೆಪಿ ಕಾರ್ಯಕರ್ತರು ರವಿಕುಮಾರ್ ಫ್ಲೆಕ್ಸ್ ಹರಿದು ಹಾಕಿ, ಆಕ್ರೋಶ ವ್ಯಕ್ತಪಡಿಸಿದರು.

ಮತ್ತೆ ಹನುಮ ಧ್ವಜ ಹಾರಿಸಲು ಯತ್ನ: ಪೊಲೀಸರು ಹನುಮ ಧ್ವಜವನ್ನು ತೆರವುಗೊಳಿಸಿದ ಮೇಲೆ ಕಾರ್ಯಕರ್ತರು ಮತ್ತೆ ಹನುಮ ಧ್ವಜ ಹಾರಿಸಲು ಹಲವು ಬಾರಿ ಯತ್ನಿಸಿದರಾದರೂ ಪೊಲೀಸರು ಅದಕ್ಕೆ ಅವಕಾಶ ಕೊಡಲಿಲ್ಲ. ಇತ್ತ ಪೊಲೀಸರು ಸಹ ಅನೇಕ ಬಾರಿ ರಾಷ್ಟ್ರಧ್ವಜ ಹಾರಿಸಲು ಯತ್ನಿಸಿದರೂ ಅವರ ಪ್ರಯತ್ನವೂ ಫಲಪ್ರದವಾಗಲಿಲ್ಲ.

144 ಸೆಕ್ಷನ್ ಜಾರಿ: ಹನುಮ ಧ್ವಜ ಕೆಳಗಿಳಿಸುವ ಮುನ್ನ ಕೆರಗೋಡು ಗ್ರಾಮದಲ್ಲಿ 144 ಸೆಕ್ಷನ್ ಜಾರಿ ಮಾಡಲಾಗಿತ್ತು. ಗುಂಪು ಸೇರದಂತೆ ಧ್ವನಿವರ್ಧಕದ ಮೂಲಕ ಪ್ರತಿಭಟನಾಕಾರರಿಗೆ ಎಚ್ಚರಿಕೆ ನೀಡಿದರು. ಕೆರಗೋಡು ಗ್ರಾಮದಲ್ಲಿ 144ಸೆಕ್ಷನ್ ಜಾರಿಯಲ್ಲಿದೆ. 5ಕ್ಕೂ ಹೆಚ್ಚು ಮಂದಿ ಒಂದೆಡೆ ಸೇರುವಂತಿಲ್ಲ, ದಯವಿಟ್ಟು ಹೊರಡಿ ಎಂದು ಮನವಿ ಮಾಡಿದರು. ನೂರಕ್ಕೂ ಹೆಚ್ಚು ಜನ ಪೊಲೀಸರನ್ನು ನಿಯೋಜಿಸಿದರೂ, ಹಿಂದೂಪರ ಕಾರ್ಯಕರ್ತರು ಧ್ವಜ ಪುನರ್ ಪ್ರತಿಷ್ಠಾಪನೆಗಾಗಿ ಹೋರಾಟ ಮುಂದುವರೆಸಿದರು.

ಹಲವು ನಾಯಕರ ಭೇಟಿ: ಈ ನಡುವೆ ಘಟನಾ ಸ್ಥಳಕ್ಕೆ ಮಾಜಿ ಶಾಸಕರಾದ ಸುರೇಶ್‌ಗೌಡ, ಡಿ.ಸಿ.ತಮ್ಮಣ್ಣ, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಬಿಜೆಪಿ ಮುಖಂಡರಾದ ಅಶೋಕ್ ಜಯರಾಂ, ಇಂಡುವಾಳು ಸಚ್ಚಿದಾನಂದ ಸೇರಿದಂತೆ ಎರಡು ಪಕ್ಷದ ಹಲವು ಮುಖಂಡರು ಭೇಟಿ ನೀಡಿ, ಘಟನೆಯನ್ನು ಖಂಡಿಸಿದರು.

ಅಶೋಕ್ ಆಗಮನಕ್ಕೂ ಮುನ್ನ ಲಾಠಿ ಚಾರ್ಜ್: ಬೆಳಗ್ಗೆ ಆರಂಭವಾದ ಪ್ರತಿಭಟನೆ ಮಧ್ಯಾಹ್ನ 3ಗಂಟೆಯಾದರೂ ನಿಲ್ಲದ ಕಾರಣ ಜೊತೆಗೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಆಗಮನ ಹಿನ್ನೆಲೆಯಲ್ಲಿ ಅಧಿಕ ಕಾರ್ಯಕರ್ತರು ಜಮಾಯಿಸುವುದರಿಂದ ಪರಿಸ್ಥಿತಿ ಕೈಮೀರುವ ಹಿನ್ನೆಲೆಯಲ್ಲಿ ಎಚ್ಚೆತ್ತ ಪೊಲೀಸರು, ಪರಿಸ್ಥಿತಿಯನ್ನು ಹತೋಟಿಗೆ ತರಲು ನೂರಾರು ಮಂದಿ ಇದ್ದ ಜೆಡಿಎಸ್– ಬಿಜೆಪಿ ಕಾರ್ಯಕರ್ತರ ಮೇಲೆ ಲಾಠಿ ಚಾರ್ಜ್ ಮಾಡಿ, ಗುಂಪನ್ನು ಚದುರಿಸಿದರು. ಕಾರ್ಯಕರ್ತರು ಸಹ ಪೊಲೀಸರು ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಆರೋಪಿಸಿ, ಬ್ಯಾರಿಕೇಡ್‌ಗಳನ್ನು ಮನಬಂದಂತೆ ಎಸೆದರು. ಅಂತಿಮವಾಗಿ ರಾಷ್ಟ್ರಧ್ವಜವನ್ನು ಹಾರಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು. ಲಾಠಿಚಾರ್ಜ್ ವೇಳೆ ಕೆಲ ಕಾರ್ಯಕರ್ತರಿಗೆ ಗಂಭೀರವಾಗಿ ಗಾಯವಾಗಿದ್ದು, ಇದು ಸಹ ಆಕ್ರೋಶಕ್ಕೆ ಗುರಿಯಾಯಿತು.

ಹನುಮಧ್ವಜ ವಿಚಾರದಲ್ಲಿ ರಾಜಕೀಯ ಮಾಡಿಲ್ಲ

ಹಾರಿಸುತ್ತೇವೆ ಅಂತಾರೆ. ಆಗ ಅವಕಾಶ ಕೊಡಲು ಆಗುತ್ತಾ.? ಒಂದು ಕಡೆ ಅವಕಾಶ ಕೊಟ್ಟರೆ ಎಲ್ಲೆಡೆ ಬಾವುಟ ಹಾರಿಸುವುದಾಗಿ ಅನುಮತಿ ಕೇಳುತ್ತಾರೆ ಎಂದು ಕಿಡಿಕಾರಿದರು. ಸ್ಥಳೀಯ ಯುವಕರು ಒಳ್ಳೆಯವರೇ; ಆದರೆ ಅವರನ್ನೂ ದಾರಿ ತಪ್ಪಿಸಲಾಗಿದೆ. ಬೇಕಿದ್ದರೆ ಎಲ್ಲರ ಜೊತೆ ಕೂತು ಮಾತನಾಡುತ್ತೇನೆ. ಮತ್ತೊಂದು ಕಡೆ ಹನುಮಾನ್ ಧ್ವಜ ಕಟ್ಟಲು ಅವಕಾಶ ಮಾಡಿಕೊಡೋಣ. ಖಾಸಗಿ ಜಾಗದಲ್ಲಿ ಅಥವಾ ದೇವಾಲಯದ ಮುಂದೆ ಹಾಕಲು ಅವಕಾಶ ಕೊಡೋಣ. ನಾನೂ ರಾಮನ ಭಕ್ತ, ನಮ್ಮ ಮನೆ ದೇವರು ವಿಷ್ಣು ನಾವು ಯಾವುದೇ ಧ್ವಜದ ವಿರೋಧಿಗಳಲ್ಲ. ಪಂಚಾಯ್ತಿಯಲ್ಲಿ ಇದಕ್ಕೆ ಅನುಮೋದನೆ ನೀಡಿದ್ದರೆ ತಪ್ಪು. ಅವರ ವಿರುದ್ಧವೂ ಕ್ರಮ ಆಗುತ್ತೆ ಎಂದು ಎಚ್ಚರಿಸಿದರು.

ನಾನು ಗ್ರಾಮದ ಯುವಕರ ಜೊತೆ ಇದ್ದೇನೆ

ಮಂಡ್ಯ, ಜ.28– ಕೆರಗೋಡು ಗ್ರಾಮದ ಧ್ವಜಸ್ತಂಭ ಉದ್ಘಾಟನಾ ಕಾರ್ಯಕ್ರಮಕ್ಕೆ ಆಯೋಜಕರು ನನಗೆ ಆಹ್ವಾನ ನೀಡಿದ್ದರು. ಆದರೆ ಕ್ಷೇತ್ರದ ಶಾಸಕನಾದ ತಮ್ಮನ್ನು ಕರೆಯಲಿಲ್ಲ ಎನ್ನುವ ಒಂದೇ ಕಾರಣಕ್ಕೆ ಕೆರಗೋಡು ಗ್ರಾಮದ ಯುವಕರ ಮೇಲೆ ದಬ್ಬಾಳಿಕೆ ನಡೆಸಿ ಲಾಠಿಚಾರ್ಜ್ ಮಾಡಿಸಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆರೋಪ ಮಾಡಿದ್ದಾರೆ.



ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕೆರಗೋಡು ಗ್ರಾಮದಲ್ಲಿ ಏನೆಲ್ಲಾ ಧ್ವಂಸ ಮಾಡಲಾಗಿದೆಯೋ ಅದೆಲ್ಲಾ ಯಥಾಸ್ಥಿತಿಗೆ ಬರಬೇಕು. ನಾನು ಕೆರಗೋಡು ಗ್ರಾಮದ ಯುವಕರ ಜತೆ ಇದ್ದೇನೆ. ಮಂಡ್ಯದ ಕೆರಗೋಡಿನಲ್ಲಿ ಹನುಮಧ್ವಜದ ವಿಷಯದಲ್ಲಿ ಪೊಲೀಸರು, ರಾಜ್ಯ ಕಾಂಗ್ರೆಸ್ ಸರಕಾರದ ವರ್ತನೆ ಅಕ್ಷಮ್ಯ, ಅನಾಗರಿಕ. ಕಾಂಗ್ರೆಸ್‌ನ ಕಣಕಣದಲ್ಲೂ ಜನದ್ವೇಷವೇ ತುಂಬಿದೆ. ಆ ಮನಃಸ್ಥಿತಿಯನ್ನು ಮತ್ತೆಮತ್ತೆ ರುಜುವಾತು ಮಾಡುತ್ತಿದೆ. ಮುಗ್ಧ ಯುವಕರ ಮೇಲೆ ಲಾಠಿಚಾರ್ಜ್ ಮಾಡುವವರೆಗೂ ಆ ದ್ವೇಷ ಬಂದು ನಿಂತಿದೆ ಎಂದು ಕಿಡಿಕಾರಿದ್ದಾರೆ. ಕೆರಗೋಡುವಿನಲ್ಲಿ ಯುವಕರು ತಾವೇ ಹಣ ಸಂಗ್ರಹಿಸಿ ಭಕ್ತಿಯಿಂದ ಸ್ಥಾಪಿಸಿದ ಹನುಮ ಧ್ವಜಸ್ತಂಭ ಧ್ವಂಸ ಮಾಡಿ, ಧ್ವಜ ಇಳಿಸಿದ್ದು, ಪ್ರಶ್ನಿಸಿದ ಹನುಮಭಕ್ತ ಯುವಕರ ಮೇಲೆ ಲಾಠಿಚಾರ್ಜ್ ಮಾಡಿರುವ ಪೊಲೀಸರ ವರ್ತನೆ ಅತಿರೇಕದ್ದು. ಲಾಠಿಚಾರ್ಜ್ ಮಾಡಲು ಇವರಿಗೆ ಆದೇಶಿಸಿದ ಆ ಬೃಹಸ್ಪತಿ ಯಾರು? ಯುವಕರು ಪಂಚಾಯಿತಿ ಅನುಮತಿ ಪಡೆದೇ ಧ್ವಜಸ್ತಂಭ ನಿರ್ಮಿಸಿದ್ದಾರೆ ಎಂದರು.

ಬಿಹಾರ್ ಸಿಎಂ ಆಗಿ ಪ್ರಮಾಣವಚನ

ಕಾಲ ಮುಖ್ಯಮಂತ್ರಿಯಾಗಿರುವ ದಾಖಲೆ ಅವರದ್ದಾಗಿದೆ. ಇನ್ನೂ ಗಮನಾರ್ಹ ಅಂಶವೆಂದರೆ ನಿತೀಶ್ ಕುಮಾರ್ ಅವರು ತಮ್ಮ ಪಕ್ಷ ಬಹುಮತ ಪಡೆಯದೆಯೇ ಸುದೀರ್ಘ ಕಾಲ ರಾಜ್ಯದ ಚುಕ್ಕಾಣಿ ಹಿಡಿದಿರುವುದು. ಬಿಜೆಪಿ ಜೊತೆ ಜೆಡಿಯು ಮರುಮೈತ್ರಿ ಮಾಡಿಕೊಳ್ಳುವ ಮುನ್ನ ಆರ್‌ಜೆಡಿ, ಕಾಂಗ್ರೆಸ್ ಜೊತೆ ಸೇರಿ ಮಹಾಘಟಬಂದನ್ ಮೈತ್ರಿಕೂಟದ ಭಾಗವಾಗಿತ್ತು. ಕೇಂದ್ರದ ಎನ್‌ಡಿಎ ಮೈತ್ರಿಕೂಟಕ್ಕೆ ತಿಲಾಂಜಲಿ ಹಾಡಿ ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟದ ಭಾಗವಾಗಿತ್ತು. ಆದರೆ, ಕಾಂಗ್ರೆಸ್ ಪಕ್ಷದಿಂದ ಇಂಡಿಯಾ ಒಕ್ಕೂಟಕ್ಕೆ ಧಕ್ಕೆಯಾಗುತ್ತಿದೆ ಎಂದು ಆರೋಪಿಸಿ ನಿತೀಶ್ ಕುಮಾರ್ ಅವರು ಮೈತ್ರಿಕೂಟದಿಂದ ಹೊರಬರಲು ನಿರ್ಧರಿಸಿದ್ದಾರೆ.

ಇದೀಗ ಮತ್ತೆ ಎನ್‌ಡಿಎ ತೆಕ್ಕೆಗೆ ಅವರು ಬಂದಿದ್ದು, ಬಿಜೆಪಿ ಜೊತೆ ಸೇರಿ ಬಿಹಾರದಲ್ಲಿ ಹೊಸ ಸರ್ಕಾರ ಮುನ್ನಡೆಸುತ್ತಿದ್ದಾರೆ. ಲೋಕಸಭಾ ಚುನಾವಣೆಯ ಮೇಲೆ ಕಣ್ಣು ಇಟ್ಟಿರುವ ಬಿಜೆಪಿಗೂ ಈಗ ಒಂದಷ್ಟು ಬಲ ಹೆಚ್ಚಿದಂತಾಗಿದೆ.

ದೇವರಾಜ ಅರಸು ಸಾಮಾಜಿಕ ಕಾರ್ಯ ಪರಿಗಣಿಸಿ 'ಭಾರತ ರತ್ನ' ನೀಡಿ


ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಕೇಂದ್ರಕ್ಕೆ ಒತ್ತಾಯ

ಮೈಸೂರು,ಜ.28(ಜಿಎ)–ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ ಸಾಮಾಜಿಕ ಕಾರ್ಯಗಳನ್ನು ಗುರುತಿಸಿ ಅವರಿಗೆ ಭಾರತ ಸರ್ಕಾರ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಬೇಕೆಂದು ವಿಧಾನಪರಿಷತ್ ಸದಸ್ಯ ಅಡಗೂರು ಎಚ್.ವಿಶ್ವನಾಥ್ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.ದೇವರಾಜು ಅವರ ಪ್ರತಿಮೆಯನ್ನು ನೂತನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ನಿರ್ಮಿಸಲು 92 ಲಕ್ಷ ರೂ.ಅನುಮೋದನೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಿ ಅವರುಗಳಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ದೇವರಾಜ ಅರಸು ಅವರು ಒಂದು ಶಕ್ತಿಯಾಗಿ ರಾಜ್ಯದಲ್ಲಿ ಸಾಮಾಜಿಕ ನ್ಯಾಯ ತಂದರು. ತುರ್ತು ಪರಿಸ್ಥಿತಿಯನ್ನು ಉತ್ತಮವಾಗಿ ನಿಭಾಯಿಸಿ ಭೂ ಸುಧಾರಣಾ, ಜೀತ ಪದ್ಧತಿ ವಿಮೋಚನೆ, ಮಲ ಹೊರುವ ಪದ್ಧತಿ ವಿರುದ್ಧ ಕಾಯ್ದೆಗಳನ್ನು ತರುವ ಮೂಲಕ ಸಾಮಾಜಿಕ ಸುಧಾರಣೆ ಮಾಡಿದರು. ರಾಜ್ಯದಲ್ಲಿ ವಿವಿಧ ಸಮುದಾಯಗಳ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿನಿಲಯಗಳನ್ನು ಕಟ್ಟಿಸುವ ಮೂಲಕ ಅಕ್ಷರ ಕ್ರಾಂತಿಗೆ ನಾಂದಿ ಹಾಡಿದರು ಎಂದರು.

ಈ ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡಿದ ಹಲವರು ಐಎಎಸ್–ಕೆಎಎಸ್ ಅಧಿಕಾರಿಗಳಾಗಿದ್ದಾರೆ. ಸಮುದಾಯಗಳಿಗೂ ರಾಜಕೀಯ ಅಧಿಕಾರ ನೀಡಿರುವುದು ದೇವರಾಜ ಅರಸು ಅವರ ಸಾಧನೆಯಾಗಿದ್ದು, ಆ ಸಮಯದಲ್ಲಿ ಮೂವತ್ತು ವರ್ಷದೊಳಗಿನ 70 ಮಂದಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾದರು. ಈ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮಾತನಾಡಿದರು.

ಎಲ್ಲಾ ಸಾಮಾಜಿಕ ಕಾರ್ಯಗಳ ಹರಿಕಾರರಾದ ಡಿ.ದೇವರಾಜ ಅರಸು ಅವರಿಗೆ 'ಭಾರತ ರತ್ನ' ನೀಡಿ ಗೌರವಿಸಬೇಕಿದೆ ಎಂದು ಆಗ್ರಹಿಸಿದರು.

ಕಾಂತರಾಜು ವರದಿ ಜಾರಿಗೆ ಒತ್ತಾಯಿಸಿದ ವಿಶ್ವನಾಥ್, ಸಮೀಕ್ಷೆ ನಡೆಸಲು 160 ಕೋಟಿ ರೂ.ವೆಚ್ಚ ತಗುಲಿದೆ. ಒಂದು ಲಕ್ಷಕ್ಕೂ ಅಧಿಕ ಶಿಕ್ಷಕರು, 28 ಉನ್ನತ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಉಸ್ತುವಾರಿ ವಹಿಸಿಕೊಂಡಿದ್ದು, ಒಟ್ಟು 1,351 ಜಾತಿಗಳ ಸಮೀಕ್ಷೆಯಾಗಿದೆ. ಇದನ್ನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಪರಿಶೀಲಿಸಿ ವೈಜ್ಞಾನಿಕವಾಗಿದೆ ಎಂದು ಖಾತರಿ ಪಡಿಸಿದೆ. ಆದ್ದರಿಂದ ಜಾತಿ ಜನಗಣತಿ ವರದಿಯನ್ನು ಅಂಗೀಕರಿಸಬೇಕು ಎಂದು ಮನವಿ ಮಾಡಿದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ವರದಿಯನ್ನು ಅವೈಜ್ಞಾನಿಕವೆಂದು ವಿರೋಧ ಮಾಡುತ್ತಿದ್ದಾರೆ. ಆದರೆ, ವರದಿ ಬಿಡುಗಡೆಗು ಮುನ್ನವೇ ಅವೈಜ್ಞಾನಿಕವೆಂದು ವಿರೋಧ ಮಾಡುವುದು ಸರಿಯಲ್ಲ. ಹೀಗಾಗಿ ರಾಜ್ಯ ಸರ್ಕಾರ ವರದಿಯನ್ನು ಸ್ವೀಕರಿಸಿ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ

ಫ್ಯಾಮಿಲಿ ಪಕ್ಷ

ಜೆಡಿಎಸ್ ಪಕ್ಷದಲ್ಲಿ ಹೆಸರಿಗಷ್ಟೇ ಅಧ್ಯಕ್ಷ ಗಾದಿ ನೀಡುತ್ತಾರೆ. ಯಾವುದೇ ಅಧಿಕಾರ ಚಲಾಯಿಸಲು ಸಾಧ್ಯವಿಲ್ಲ. ಇತ್ತೀಚೆಗೆ ಬಿಜೆಪಿಯೊಂದಿಗೆ ಮೈತ್ರಿ ಮಾತುಕತೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಭೇಟಿಗೆ ಯಾರ್ ಯಾರು ತೆರಳಿದ್ದರು ಎಂಬುದು ಗೊತ್ತಿದೆ. ಜೆಡಿಎಸ್ ಫ್ಯಾಮಿಲಿ ಪಕ್ಷವಾಗಿದ್ದು, ಅದು ತಾತ–ಮಗ–ಮೊಮ್ಮಕ್ಕಳ ಪಕ್ಷ.

-ಹೆಚ್.ವಿಶ್ವನಾಥ್, ವಿಧಾನಪರಿಷತ್, ಸದಸ್ಯ

ಚರ್ಚೆಗೆ ಒಳಪಡಿಸಬೇಕು. ಸದ್ಯದಲ್ಲಿಯೇ ನಾನು ಚಿಂತಕರು, ವಿದ್ಯಾರ್ಥಿಗಳು, ಕನ್ನಡಪರ ಸಂಘಟನೆಗಳ ಸಭೆ ನಡೆಸಿ ಸರ್ಕಾರದ ಗಮನ ಸೆಳೆದು ವರದಿ ಜಾರಿಗೆ ಆಗ್ರಹಿಸುತ್ತದೆ ಎಂದರು.

ಕಾಂತರಾಜು ವರದಿಗೆ ಸ್ವಾಮೀಜಿಗಳು ವಿರೋಧ ವ್ಯಕ್ತಪಡಿಸಿದ ಕುರಿತು ಪ್ರತಿಕ್ರಿಯಿಸಿದ ಅವರು, ಸ್ವಾಮೀಜಿಗಳು ಸಂವಿಧಾನವನ್ನು ಓದಿಕೊಂಡಿಲ್ಲ. ಅವರ ಬಾಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಹೆಸರು ಬರುವುದಿಲ್ಲ. ವರದಿ ಬಿಡುಗಡೆಯಾಗದೆ ಅವೈಜ್ಞಾನಿಕ ಎನ್ನುತ್ತಾರೆ ಎಂದು ಕಿಡಿಕಾರಿದರು.

ರಾಮಮಂದಿರದಿಂದ ಲೋಕಸಭೆಯಲ್ಲಿ ಹೆಚ್ಚು ಮತ ಗಳಿಸಬಹುದೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಮಮಂದಿರ ಮತ್ತು ಜನತಂತ್ರ ವ್ಯವಸ್ಥೆಗೂ ಸಂಬಂಧ ಇಲ್ಲ. ರಾಮ ಭಾರತೀಯ ಅಸ್ಮಿತೆ. ದಮನಿ ದಮನಿಯಲ್ಲಿಯೂ ರಾಮನಿದ್ದಾನೆ. ರಾಮಮಂದಿರ ಚುನಾವಣೆಯಲ್ಲಿ ಪರಿಣಾಮ ಬೀರುವುದಿಲ್ಲ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿಯ ಪದಾಧಿಕಾರಿಗಳಾದ ವೈ.ಡಿ.ರಾಜಣ್ಣ ಎಂ.ಚಂದ್ರಶೇಖರ್, ಜಾಕೀರ್ ಹುಸೇನ್, ಡೈರಿ ವೆಂಕಟೇಶ್ ಉಪಸ್ಥಿತರಿದ್ದರು.

ಸಿಎಂ, ಮಂತ್ರಿಗಳು ಶ್ಯಾಮನೂರು ಶಿವಶಂಕರಪ್ಪ ಮೇಲೆ ಡಿಪೆಂಡ್ ಆಗಿದ್ದಾರೆ

ಸಂಸದ ಬಿ.ವೈ. ರಾಘವೇಂದ್ರ ಅವರನ್ನು ಗೆಲ್ಲಿಸಿ ಎಂಬ ಶ್ಯಾಮನೂರು ಶಿವಶಂಕರಪ್ಪ ಹೇಳಿಕೆಗೆ ಪ್ರತಿಕ್ರಿಯಿಸಿದ ಹೆಚ್.ವಿಶ್ವನಾಥ್, ಶ್ಯಾಮನೂರು ಶಿವಶಂಕರಪ್ಪ ಕೃತಜ್ಞತೆಯೇ ಇಲ್ಲದ ನಾಯಕ. ದುಡ್ಡು ಇದೆ. ಎಲ್ಲರನ್ನೂ ಕೊಂಡುಕೊಳ್ಳಬಹುದು ಅಂದುಕೊಂಡಿದ್ದಾರೆ. ನಮ್ಮವರೇ ಸರಿ ಇಲ್ಲ. ಮುಖ್ಯಮಂತ್ರಿಗಳು ಅವರ ಮೇಲೆ ಡಿಪೆಂಡ್ ಆಗಿದ್ದಾರೆ. ಅಲ್ಲಿಗೆ ಹೋದಾಗ ಅವರ ಗೆಸ್ಟ್ ಹೌಸ್‌ನಲ್ಲೇ ಮಲಗುತ್ತಾರೆ. ಕಾಂಗ್ರೆಸ್ ಪಕ್ಷ ಜೀವಂತವಾಗಿದ್ದರೆ ಶಿವಕುಮಾರ್ ಬಂಡೆಯಾಗಿದ್ದರೆ ಅಮಾನತು ಮಾಡಿ. ಅವರು ಇಲ್ಲದಿದ್ದರೆ ಕಾಂಗ್ರೆಸ್ ನಡೆಯಲ್ವಾ? ಎಂದು ಏಕವಚನದಲ್ಲೇ ಪ್ರಶ್ನಿಸಿ, ಕಾಂಗ್ರೆಸ್ ಪಕ್ಷದಿಂದ ಶ್ಯಾಮನೂರು ಶಿವಶಂಕರ ಅವರನ್ನು ಹೊರಗೆ ತಳ್ಳಿ. ಶ್ಯಾಮನೂರು ಶಿವಶಂಕರಪ್ಪಗೆ ನಾಚಿಕೆ ಆಗಲ್ವಾ? ಎಂದು ಕಿಡಿಕಾರಿದ್ದಾರೆ.

ವಿದ್ಯಾರ್ಥಿ ದಿಸೆಯಲ್ಲೇ ನಾಡಾಭಿಮಾನ ಮೈಗೂಡಿಸಿಕೊಳ್ಳಿ

ವಿದ್ಯಾರ್ಥಿಗಳಿಗೆ ಹಿರಿಯ ಸಾಹಿತಿ ಬನ್ನೂರು ರಾಜು ಕಿವಿಮಾತು



ಗಣರಾಜ್ಯೋತ್ಸವದ ಹಿನ್ನೆಲೆಯಲ್ಲಿ ನಡೆಸಲಾದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಜ.28(ಎಸ್‌ಬಿಡಿ)– ಪ್ರತಿಯೊಬ್ಬರಲ್ಲೂ ರಾಷ್ಟ್ರಪ್ರಜ್ಞೆ ಸದಾ ಜಾಗೃತವಾಗಿರಬೇಕು ಎಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ಕಾವೇರಿ ಬಳಗ ಮತ್ತು ಹಿರಣ್ಮಯಿ ಪ್ರತಿಷ್ಠಾನ ಸಂಯುಕ್ತವಾಗಿ ಮಕ್ಕಳಲ್ಲಿ ಸಂವಿಧಾನದ ಅರಿವು ಮೂಡಿಸುವ ಉದ್ದೇಶದಿಂದ ಮೈಸೂರಿನ ಅಗ್ರಹಾರದಲ್ಲಿನ ಅಕ್ಕನ ಬಳಗ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಿದ್ದ 'ನಮ್ಮ ದೇಶ ಶ್ರೇಷ್ಠ ಭಾರತ' ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಎಲ್ಲರಲ್ಲೂ ರಾಷ್ಟ್ರಪ್ರಜ್ಞೆ ಜಾಗೃತವಾಗಿರಬೇಕು. ಈ ನಿಟ್ಟಿನಲ್ಲಿ ದೇಶಪ್ರೇಮ, ದೇಶಭಕ್ತಿ, ದೇಶಾಭಿಮಾನ, ನಾಡ ಪ್ರೇಮ, ನಾಡಭಕ್ತಿ, ನಾಡಾಭಿಮಾನವನ್ನು ವಿದ್ಯಾರ್ಥಿ ದಿಸೆಯಲ್ಲೇ ಮೈಗೂಡಿಸಿಕೊಳ್ಳಬೇಕು. ಭಾರತದ ಪುಣ್ಯಭೂಮಿಯಲ್ಲಿರುವ ನಾವೆಲ್ಲಾ ಧನ್ಯರು. ಭಾರತವೇ ಒಂದು ಸ್ವರ್ಗ. ನಾವು ನಿತ್ಯ ತಾಯಿ ಭಾರತಿಯನ್ನು ಪೂಜಿಸಬೇಕು. ಸೌಹಾರ್ದತೆಯಿಂದ ಬದುಕುವ ಮೂಲಕ ಭಾವೈಕ್ಯ ಭಾರತವನ್ನು ಕಟ್ಟಬೇಕು ಎಂದರು.

ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಭಾರತ ಸಂವಿಧಾನವು ಸರ್ವರನ್ನೂ ಕತ್ತಲೆಯಿಂದ ಬೆಳಕಿನತ್ತ ಕರೆದೊಯ್ಯುವ ದೀವಿಗೆಯಾಗಿದೆ. ನಮ್ಮ ಸಂವಿಧಾನಕ್ಕೆ ಕಿಂಚಿತ್ತು ಆಪತ್ತಾದರೂ ಭಾರತೀಯರೆಲ್ಲಾ ರಕ್ಷಣೆಗೆ ನಿಲ್ಲಬೇಕು. ಸರ್ವಶ್ರೇಷ್ಠವಾದ ಸಂವಿಧಾನ ನಮ್ಮ ದೇಶದ ರಕ್ಷಾ ಕವಚವಾಗಿದೆ ಎನ್ನುವುದನ್ನು ಮರೆಯಬಾರದು ಎಂದು ಹೇಳಿದರು.

ಗಣರಾಜ್ಯೋತ್ಸವದ ಹಿನ್ನೆಲೆಯಲ್ಲಿ ನಡೆಸಲಾದ ಭಾಷಣ ಸ್ಪರ್ಧೆಯಲ್ಲಿ ಜಯಲಕ್ಷ್ಮಿ ಹಿರಿಯ ಪ್ರಾಥಮಿಕ ಶಾಲೆಯ ಬಿ.ಬಿ.ಅಮೀನಾ (ಪ್ರ), ಅಕ್ಕನ ಬಳಗ ಹಿರಿಯ ಪ್ರಾಥಮಿಕ ಶಾಲೆಯ ಸಂದೀಪ್(ದ್ವಿ) ಮತ್ತು ರಸ ಪ್ರಶ್ನೆ ಸ್ಪರ್ಧೆಯಲ್ಲಿ ಲಲಿತ ಕಲಾ ಮಂದಿರದ ಹಿರಿಯ ಪ್ರಾಥಮಿಕ ಶಾಲೆಯ ಕಿರಣ್(ಪ್ರ), ಶ್ರೀಕಾಂತ ಹಿರಿಯ ಪ್ರಾಥಮಿಕ ಶಾಲೆಯ ಬಂದೇಗೌಡ (ದ್ವಿ) ಹಾಗೂ ಚಿತ್ರಕಲಾ ಸ್ಪರ್ಧೆಯಲ್ಲಿ ಬುಶ್ರಾ ಅಂಜುಮ್ (ಪ್ರ), ಆತಿಯಾ ಕೌಶಿಕ್(ದ್ವಿ) ವಿಜೇತರಾದರು. ಇವರಿಗೆ ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ ಬಹುಮಾನ ವಿತರಿಸಿದರು.

ಕಾರ್ಯಕ್ರಮದಲ್ಲಿ ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಅಕ್ಕನ ಬಳಗ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಸುಗುಣಾವತಿ, ಜ್ಞಾನ ವಿಜ್ಞಾನ ಸಮಿತಿಯ ಹೆಚ್.ವಿ.ಮುರಳೀಧರ್, ಚಿತ್ರಕಲಾ ಶಿಕ್ಷಕ ಮನೋಹರ್ ಮತ್ತಿತರರು ಉಪಸ್ಥಿತರಿದ್ದರು.

ರಾಷ್ಟ್ರಪತಿಗೆ ಏಕವಚನ ಬಳಕೆ; ಮುಖ್ಯಮಂತ್ರಿ ಸಿದ್ದರಾಮಯ್ಯ ವಜಾಕ್ಕೆ ಕುಮಾರಸ್ವಾಮಿ ಆಗ್ರಹ

ಬೆಂಗಳೂರು: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಏಕವಚನದಲ್ಲಿ ತುಚ್ಛವಾಗಿ ಸಂಬೋಧಿಸಿದ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೂಡಲೇ ವಜಾ ಮಾಡಬೇಕು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.



ಡೋಂಗಿ ಪ್ರಜಾಪ್ರಭುತ್ವವಾದಿಯ ಅಸಲಿ ಮುಖ ಕಳಚಿಬಿದ್ದಿದೆ. ಒಂದು ಕ್ಷಣವೂ ಮುಖ್ಯಮಂತ್ರಿ ಪದವಿಯಲ್ಲಿ ಇರಲು ಅವರು ಅರ್ಹರಲ್ಲ. ಕೂಡಲೇ ತಾವೆಸಗಿರುವ ಅಪಚಾರಕ್ಕೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಅಥವಾ ರಾಜ್ಯಪಾಲರೇ ಅವರನ್ನು ಮುಖ್ಯಮಂತ್ರಿ ಕುರ್ಚಿಯಿಂದ ಕಿತ್ತೆಸೆಯಬೇಕು ಎಂದು ಒತ್ತಾಯಿಸಿದ್ದಾರೆ.

ಶೋಷಿತ ಬುಡಕಟ್ಟು ಸಮುದಾಯದಿಂದ ಬಂದ ದೇಶದ ಮೊತ್ತಮೊದಲ ರಾಷ್ಟ್ರಪತಿಗಳು, ಅದರಲ್ಲಿಯೂ ಮಹಿಳೆ. ಶೋಷಿತರ ಜಾಗೃತಿ ಸಮಾವೇಶದಲ್ಲೇ ಅವರಿಗೆ ಮುಖ್ಯಮಂತ್ರಿ ಅಪಮಾನ ಎಸಗಿದ್ದಾರೆ. ಸಾರ್ವಜನಿಕ ವೇದಿಕೆಯಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳನ್ನು ಮುಖ್ಯಮಂತ್ರಿಯೊಬ್ಬರು ಸಂಬೋಧಿಸುವ ರೀತಿಯೇ ಇದು. ಸಿದ್ದರಾಮಯ್ಯ ಅವರ ನಡವಳಿಕೆ ಕರ್ನಾಟಕಕ್ಕೆ ಅಂಟಿದ ಅಳಿಸಲಾಗದ ಕಳಂಕ ಅವರ ಈ ಕೀಳುಮಾತು ದೇಶಕ್ಕೆ ಸಂವಿಧಾನಕ್ಕೆ ಆಗಿರುವ ಘೋರ ಅಪಚಾರ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಚಾಮರಾಜನಗರದಲ್ಲಿ ಸಿದ್ದರಾಮಯ್ಯ ಅವರ ಸುಪುತ್ರ ಯತೀಂದ್ರ ಭಾಷಣ ಮಾಡುತ್ತಿದ್ದಾಗ ಯಾರೋ ಒಬ್ಬರು ಏಕವಚನದಲ್ಲಿ ಪ್ರಶ್ನಿಸಿದರೆಂಬ ಕಾರಣಕ್ಕೆ ಪೊಲೀಸರು ಆತನನ್ನು ಅಟ್ಟಾಡಿಸಿಕೊಂಡು ಹೋಗಿ ಬಂಧಿಸಿ ದರದರನೆ ಎಳೆದುಕೊಂಡು ಹೋದರು. ಹಾಗಿದ್ದರೆ, ರಾಷ್ಟ್ರಪತಿಗಳನ್ನೇ ಏಕವಚನದಲ್ಲಿ ಸಂಬೋಧಿಸಿದ ಈ ಮುಖ್ಯಮಂತ್ರಿಗೇನು ಶಿಕ್ಷೆ? ಎಂದು ಪ್ರಶ್ನಿಸಿದ್ದಾರೆ. ಈ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮಹೇಳಿಕೆಗೆ ವಿಷಾಧ ವ್ಯಕ್ತಪಡಿಸಿದ್ದಾರೆ.



ಮೈಸೂರಿನ ಹಿನಕಲ್‌ನಲ್ಲಿರುವ ಹಿರಿಯ ಜೀವಿಗಳ ಆಶ್ರಯ ತಾಣ ವಾತ್ಸಲ್ಯ ಸೇವಾಶ್ರಮದಲ್ಲಿ 75ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಎ.ಸಿ.ರವಿಕುಮಾರ್, ಗೌರವ ಕಾರ್ಯದರ್ಶಿ ಶ್ರೀಮತಿ ನಾಗರತ್ನ, ಶಶಿಕಲಾ, ಹಿರಿಯ ಜೀವಿಗಳು ಚಿತ್ರದಲ್ಲಿದ್ದಾರೆ.

ಮೈಸೂರಲ್ಲೂ ಉಂಟು ಪ್ರಾಗೈತಿಹಾಸಿಕ ಕಾಲದ ಮಾನವನ ಕೈಚಳಕ


ಪುರಾತತ್ವ ಇಲಾಖೆ ಅಂಗಳದಲ್ಲಿ ಅಂದಿನ ಅವಶೇಷಗಳ ಛಾಯಾಚಿತ್ರ ಪ್ರದರ್ಶನದ ಗ್ಯಾಲರಿ ಉದ್ಘಾಟನೆ

ಮೈಸೂರು,ಜ.28(ಪಿಎಂ)– ಪ್ರಾಗೈತಿಹಾಸಿಕ (ಇತಿಹಾಸಪೂರ್ವ) ಕಾಲಘಟ್ಟದ ಕುರುಹುಗಳು ಕರ್ನಾಟಕದಲ್ಲೂ ಹರಡಿಕೊಂಡಿವೆ. ಇಂತಹ ನೆಲೆಗಳಿಗೊಮ್ಮೆ ಭೇಟಿ ನೀಡಿದರೆ ಅಂದಿನ ಮಾನವನ ಚಟುವಟಿಕೆಗಳು ಶಿಲೆಗಳಲ್ಲಿ ಇಂದಿಗೂ ಉಳಿದುಕೊಂಡಿರುವುದು ಗೋಚರಿಸುತ್ತದೆ.

ಮೈಸೂರಲ್ಲೂ ಉಂಟು ಪ್ರಾಗೈತಿಹಾಸಿಕ ಕಾಲದ ಮಾನವನ ಕೈಚಳಕದ ಕುರುಹುಗಳು! ಹೌದು, ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದಲ್ಲಿರುವ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ ಭೇಟಿ ನೀಡಿದರೆ ಸಾಕು. ಇಲ್ಲಿರುವ 'ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಅವಶೇಷಗಳ ಛಾಯಾಚಿತ್ರ ಪ್ರದರ್ಶನ'ದ ಗ್ಯಾಲರಿಯಲ್ಲಿ ಅಂದಿನ ಮಾನವನ ಚಟುವಟಿಕೆಗಳ ಗುರುತುಗಳನ್ನು ಕಾಣಬಹುದು.

ರಾಜ್ಯದ ಬಳ್ಳಾರಿಯ ಸಂಗನಕಲ್ಲು, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು ಜಿಲ್ಲೆಯ ಪಾವಗಡ ಮೊದಲಾದ ಸ್ಥಳಗಳಲ್ಲಿ ಇತಿಹಾಸಪೂರ್ವ ಕಾಲದಲ್ಲಿ ಮಾನವ ತನ್ನ ಬದುಕಿನುದ್ದಕ್ಕೂ ನಡೆಸಿದ ಹಲವು ಚಟುವಟಿಕೆಗಳು ಶಿಲೆಗಳಲ್ಲಿ ದಾಖಲಾಗಿರುವುದು ಮಾತ್ರವಲ್ಲ, ಕಲೆಯಾಗಿಯೂ ಉಳಿದಿರುವ ಚಿತ್ರಣ ಇಲ್ಲಿ ಕಾಣಬಹುದು. ಆ ಮೂಲಕ ಅಂದಿನ ಮಾನವನ ಶಿಲಾಯುಗ ಸಂಸ್ಕೃತಿ ಇಲ್ಲಿ ಅನಾವರಣಗೊಂಡಿದೆ.

ಕರ್ನಾಟಕದಲ್ಲಿ ಕಂಡುಬರುವ ಶಿಲಾಗೋರಿಗಳು, ಸಂಗೀತ ಕಲ್ಲುಗಳು, ವೃತ್ತ ಶಿಲಾಸಮಾಧಿಗಳು, ಕಲ್ಲಾಸರೆಯ ಛಾಯಾಚಿತ್ರಗಳು ಕಣ್ಮನ ಸೆಳೆಯುವ ಮೂಲಕ ಕೌತುಕದ ಲೋಕಕ್ಕೆ ಕರೆದೊಯ್ಯಲಿದೆ. ಇಲ್ಲಿರುವ ಛಾಯಾಚಿತ್ರಗಳು ದಿನೇಶ್ ಮಾನೀರ್ ಅವರ ಕ್ಯಾಮರದಲ್ಲಿ ಮೂಡಿ ಬಂದಿವೆ. ಇವರು ಹಲವು ವರ್ಷಗಳಿಂದ



ಮೈಸೂರಿನ ಪುರಾತತ್ವ ಇಲಾಖೆ ಕಚೇರಿಯಲ್ಲಿ ಗ್ಯಾಲರಿಯನ್ನು ಶನಿವಾರ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಉದ್ಘಾಟಿಸಿದರು.

ಕರ್ನಾಟಕದ ಸಂಸ್ಕೃತಿ ಮತ್ತು ಭೂದೃಶ್ಯಗಳನ್ನು ಚಿತ್ರಿಸುತ್ತಿರುವ ಛಾಯಾಗ್ರಾಹಕರು. ಇವರ ಚಿತ್ರಗಳು ನ್ಯಾಷನಲ್ ಜಿಯೋಗ್ರಾಫಿಕ್, ಓಪನ್ ಮ್ಯಾಗಜಿನ್ ಮೊದಲಾದ ಮಾಧ್ಯಮಗಳಲ್ಲಿ ಪ್ರಸಾರ–ಪ್ರಕಟಣೆಯಾಗಿವೆ.

ಭಾರತದ ದಖ್ಖನ್ ಪ್ರಸ್ಥಭೂಮಿಯು ನದಿ ಮತ್ತು ಫಲವತ್ತಾದ ಭೂಭಾಗವನ್ನು ಹೊಂದಿದ್ದು, ಮಾನವನ ವಿಕಾಸಕ್ಕೆ ನೆಲೆಯಾಗಿದೆ. ಇದರಲ್ಲಿ ಕರ್ನಾಟಕವೂ ಸೇರಿದ್ದು, ಇಲ್ಲಿಯೂ ಕಂಡುಬಂದಿರುವ ಶಿಲಾಯುಗದ ಅವಶೇಷಗಳು ಅಂದಿನ ಚಿತ್ರಣವನ್ನು ಕಣ್ಣಿಗೆ ಕಟ್ಟುತ್ತಿವೆ. ಅವುಗಳಲ್ಲಿ ಅನೇಕ ಕುರುಹುಗಳು ಇಲ್ಲಿನ ಛಾಯಾಚಿತ್ರ ಪ್ರದರ್ಶನದಲ್ಲಿ ನೋಡಲು ದೊರೆಯಲಿವೆ.


ಸಂಗನಕಲ್ಲಿನ ಸಂಗೀತ ಕಲ್ಲು: ಬಳ್ಳಾರಿಯ ಸಂಗನಕಲ್ಲು ಎಂಬ ಸ್ಥಳದಲ್ಲಿರುವ ಪ್ರಾಗೈತಿಹಾಸಿಕ ಕಾಲದ ಸಂಗೀತ ಹೊಮ್ಮಿಸುವ ಕಲ್ಲುಗಳ ಛಾಯಾಚಿತ್ರಗಳೂ ಇಲ್ಲಿದ್ದು, ಕಲ್ಲಿನ ವಿಶೇಷತೆಯನ್ನು ಇಲ್ಲಿ ವಿವರಿಸಲಾಗಿದೆ. ಅಲ್ಲದೆ, ಛಾಯಾಚಿತ್ರದ ಕೆಳಭಾಗದಲ್ಲಿರುವ ಕ್ಯೂಆರ್ ಕೋಡ್ ಅನ್ನು ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿದರೆ ಯೂಟ್ಯಾಬ್‌ನಲ್ಲಿ ಇಂತಹ ಕಲ್ಲುಗಳ ಮೇಲೆ ಮತ್ತೊಂದು ಕಲ್ಲಿನಲ್ಲಿ ಕುಟ್ಟುವ ಮೂಲಕ ಸಂಗೀತ ವಿವಿಧ ಸದ್ದು ಹೊಮ್ಮಿಸುತ್ತಿರುವ ದೃಶ್ಯಾವಳಿ ನೋಡಬಹುದು.

ಸಂಗೀತ ಕಲ್ಲುಗಳ ತುದಿ ಭಾಗದಲ್ಲಿ ಕಲ್ಲು ಅಥವಾ ಕೋಲುಗಳಿಂದ ಒಂದೇ ಸ್ಥಳದಲ್ಲಿ ಕುಟ್ಟಿ ಕುಟ್ಟಿ ಕುಳಿಯಾಗಿರುವುದು ಕಂಡು ಬರಲಿದ್ದು, ಅಲ್ಲಿ ಕುಟ್ಟಿದರೆ ಸಂಗೀತದ ನಾದಗಳು ಸೂಸುತ್ತವೆ. ನವಶಿಲಾಯುಗದಲ್ಲಿ ಸಂಗೀತ ಚಟುವಟಿಕೆಗಳಿಗಾಗಿ ಮನುಷ್ಯರು ಇದನ್ನು ಉಪಯೋಗಿಸುತ್ತಿದ್ದರು ಎಂದು ಇತಿಹಾಸ ತಜ್ಞರು ದಾಖಲಿಸಿದ್ದಾರೆ.

ಬಳ್ಳಾರಿಯ ಸಂಗನಕಲ್ಲು ಮತ್ತು ಕಪಗಲ್ಲು ಬೆಟ್ಟಗಳು ಮತ್ತು ಬಯಲು ಪ್ರದೇಶಗಳಲ್ಲಿ ಸುಮಾರು ಸಾವಿರ ಎಕರೆ ಪ್ರದೇಶದಲ್ಲಿ ನವ ಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗಿನ ಅವಶೇಷಗಳು ಹರಡಿಕೊಂಡಿವೆ. ಈ ಛಾಯಾಚಿತ್ರವೂ ಇಲ್ಲಿದೆ. ಬಳ್ಳಾರಿಯ ಕುಡತಿನಿಯಲ್ಲಿರುವ ಬೂದಿಗುಡ್ಡದ ಫೋಟೋ ಸಹ ಇಲ್ಲಿದ್ದು, ಬೂದಿಗುಡ್ಡ ಎಂಬುದು ಕ್ರಿ.ಪೂ.3000–1500ರಲ್ಲಿ ಮನುಷ್ಯನ ಯಾವುದೋ ಸಾಂಸ್ಕೃತಿಕ ಚಟುವಟಿಕೆಯಿಂದ ಉಂಟಾಗಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇದೇ ಕಾಲಘಟ್ಟದ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯಲ್ಲಿರುವ ಹೂವಿನಾಕಾರದ ಶಿಲಾಗೋರಿಯ ಫೋಟವೂ ಇಲ್ಲಿದೆ. ಅಂದಿನ ಮಾನವರಿಂದ ನಿರ್ಮಿಸಲಾದ ಶಿಲಾ ಸಮಾಧಿಗಳು ಇವಾಗಿದ್ದು, ಇವುಗಳ ನಿರ್ಮಾಣಕ್ಕೆ ಕಲ್ಲು ಚಪ್ಪಡಿಗಳನ್ನು ಬಳಸಲಾಗಿದೆ.

ಅಂದು ಮಾನವ ಮಳೆ, ಚಳಿ ಮತ್ತು ಬಿಸಿಲಿನಿಂದ ತಪ್ಪಿಸಿಕೊಂಡು ಆಶ್ರಯ ಪಡೆಯುತ್ತಿದ್ದ ಕಲ್ಲಾಸರೆಗಳು (ಬಾಗೇಪಲ್ಲಿ), ಮೆಗಾಲಿಥಿಕ್ ಕಾಲದಲ್ಲಿ ನಿಲ್ಲಿಸಿರುವುದೆಂದು ಅಂದಾಜಿಸಿರುವ ನಿಲುಸುಗಲ್ಲು (ತುಮಕೂರು ಜಿಲ್ಲೆಯ ಪಾವಗಡ), ಬೃಹತ್ ಶಿಲಾಯುಗ ಕಾಲದ ಶಿಲಾಗೋರಿ (ರಾಮನಗರ ಜಿಲ್ಲೆಯ ಹಕ್ಕಿನಾಳು ಗ್ರಾಮ), ಬಂಡೆಯಲ್ಲಿ ಮೂಡಿರುವ ಕಲ್ಲು ಕುಟ್ಟು ಚಿತ್ರಗಳು (ತುಮಕೂರು ಜಿಲ್ಲೆಯ ಪಾವಗಡ), ಸುಮಾರು 10 ಸಾವಿರ ವರ್ಷಗಳಷ್ಟು ಇತಿಹಾಸವನ್ನು ಹೊಂದಿರುವ ಕಲ್ಲಾಸರೆಯ ವರ್ಣಚಿತ್ರಗಳು (ಬಾಗಲಕೋಟೆ ಜಿಲ್ಲೆಯ ಕುಟ್ಟಣಕೇರಿ) ಸೇರಿದಂತೆ ಮೊದಲಾದವು ಇಲ್ಲಿ ಛಾಯಾಚಿತ್ರದ ಮೂಲಕ ಅನಾವರಣಗೊಂಡಿವೆ.

ಚಾಲನೆ: ಈ ಗ್ಯಾಲರಿಯನ್ನು ಶನಿವಾರ ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್ ಉದ್ಘಾಟಿಸಿದರು. ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಸಲ್ಮಾ ಕೆ.ಫಾಹಿಮಾ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು, ಉಪನಿರ್ದೇಶಕಿ ಡಾ.ಸಿ.ಎನ್. ಮಂಜುಳಾ ಮತ್ತಿತರರು ಹಾಜರಿದ್ದರು.



ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿಯಲ್ಲಿರುವ ಶಿಲಾಗೋರಿ

ತಲಕಾಡು ಉತ್ಖನನ ಮ್ಯೂಸಿಯಂ, ರಾಜ್ಯದಲ್ಲಿರುವ 20 ಪಾರಂಪರಿಕ ಪ್ರದೇಶಗಳ ಮಾಹಿತಿ ಕೇಂದ್ರ, ಸ್ಮಾರಕ ಸಂರಕ್ಷಣೆ ಕುರಿತ ಡಿಜಿಟಲ್ ಛಾಯಾಚಿತ್ರ ಪ್ರದರ್ಶನವೂ ನಮ್ಮ ಈ ಕಾರ್ಯಾಲಯದಲ್ಲಿದೆ. ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಅವಶೇಷಗಳ ಛಾಯಾಚಿತ್ರ ಪ್ರದರ್ಶನದ ಗ್ಯಾಲರಿ ಇಂದು ಉದ್ಘಾಟನೆಯಾಗಿದೆ. ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಸಾರ್ವಜನಿಕರು ಭೇಟಿ ನೀಡಬಹುದು. ಪ್ರವೇಶ ಉಚಿತವಿದೆ.

-ಎ.ದೇವರಾಜು, ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.

ಸರ್ಕಾರದ 7 ತಿಂಗಳ ಅವಧಿಯಲ್ಲಿ 7 ರೂ. ಬಿಡುಗಡೆ ಆಗಿಲ್ಲ

● ಕೊಡಗಿಗೆ ಕಿಂಚಿತ್ ಅನುದಾನ ನೀಡದ ಮುಖ್ಯಮಂತ್ರಿ ಸಿದ್ದರಾಮಯ್ಯ ● ಸಂಸದ ಪ್ರತಾಪ ಸಿಂಹ ಆರೋಪ

ಮಡಿಕೇರಿ, ಜ.28– ಕೊಡಗಿನಲ್ಲಿ ಕೊಟ್ಯಾಂತರ ರೂ. ಅಭಿವೃದ್ಧಿಗೆ ಶಂಕು ಸ್ಥಾಪನೆ ನೆರವೇರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ಯೋಜನೆಗಳಿಗೆ ಕಿಂಚಿತ್ ಹಣ ಬಿಡುಗಡೆಗೊಳಿಸಿಲ್ಲ ಎಂದು ಸಂಸದ ಪ್ರತಾಪ ಸಿಂಹ ಆರೋಪಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಬಂದು 7 ತಿಂಗಳಾಗಿದ್ದು, ಈ ಅವಧಿಯಲ್ಲಿ 7 ರೂಗಳನ್ನಾದರೂ ಬಿಡುಗಡೆ ಮಾಡಿದೆಯೇ? ಜಿಲ್ಲೆಗೆ ಬಂದ ಮುಖ್ಯಮಂತ್ರಿಗಳು ಹಲವಾರು ಯೋಜನೆಗಳಿಗೆ ಶಂಕು ಸ್ಥಾಪನೆ ನೆರವೇರಿಸಿದ್ದಾರೆ. ಸೋಜಿಗವೆಂದರೆ ಯಾವುದೇ ಯೋಜನೆಗಳಿಗೆ ಟೆಂಡರ್ ಪ್ರಕ್ರಿಯೆಯಾಗಲಿ ಅಥವಾ ಗುತ್ತಿಗೆದಾರರ ನೇಮಕವಾಗಲಿ ಮಾಡಿಲ್ಲ. ಇದು ಕೇವಲ ಚುನಾವಣೆಯ ಶಂಕುಸ್ಥಾಪನೆ. ಕಾಂಗ್ರೆಸ್ ಸರ್ಕಾರ ಅಗತ್ಯ ಅನುದಾನ ನೀಡಿ, ಆದೇಶ ಹೊರಡಿಸಿರುವ ಒಂದೇ ಒಂದು ಕಾಮಗಾರಿಗೆ ದಾಖಲೆ ನೀಡಲಿ ಎಂದು ಸುದ್ದಿಗೋಷ್ಠಿಯಲ್ಲಿ ಸವಾಲು ಹಾಕಿದರು.

ಕೊಡಗಿನಲ್ಲಿ ಹಿಂದೆಯೇ ಕೇಂದ್ರ ಸರ್ಕಾರದ ಅಮೃತ್ ಯೋಜನೆಯಡಿ 146 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ಮಡಿಕೇರಿ ನಗರಸಭೆಗೆ ಮೊದಲ ಹಂತದಲ್ಲಿ 19.90 ಕೋಟಿ ರೂ., ದ್ವಿತೀಯ ಹಂತದಲ್ಲಿ 27 ಕೋಟಿ ರೂ., ಕುಶಾಲನಗರಕ್ಕೆ 40 ಕೋಟಿ ರೂ., ವಿರಾಜಪೇಟೆಗೆ 58.38 ಕೋಟಿ ರೂ. ಮತ್ತು ಸೋಮವಾರಪೇಟೆಗೆ 15.26 ಕೋಟಿ ರೂ. ಒದಗಿಸಲಾಗಿದೆ. ಈ ಕುಡಿಯುವ ನೀರಿನ ಯೋಜನೆಗಳಿಗೆ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದ್ದಾರೆ ಅಷ್ಟೇ. ಉಳಿದ ಯೋಜನೆಗಳಿಗೆ ಕಿಂಚಿತ್ ಹಣವನ್ನು ಕಾಂಗ್ರೆಸ್ ಸರ್ಕಾರ ನೀಡಿಲ್ಲ. ದೊಡ್ಡ ಮೊತ್ತದ ಯೋಜನೆಗಳಿಗೆ ಶಂಕುಸ್ಥಾಪನೆ ಮಾಡುವ ಸಿದ್ದರಾಮಯ್ಯ ಕೊಡಗಿನ ಜನತೆಗೆ ಟೋಪಿ ಹಾಕುವ ಪ್ರಯತ್ನ ಮಾಡಿದ್ದಾರೆ ಎಂದು ಲೇವಡಿ ಮಾಡಿದರು.

ಬಿಜೆಪಿ ಅಧಿಕಾರದ ಅವಧಿಯಲ್ಲಿ ಇವರೇನು ಮಾಡಿದ್ದಾರೆಂದು ವಿರಾಜಪೇಟೆಯ ಮಾಜಿ ಶಾಸಕ ಕೆ.ಜಿ.ಬೋಪಯ್ಯ ಮತ್ತು ತನ್ನ ಬಗ್ಗೆ ಸಿದ್ದರಾಮಯ್ಯ ಏಕವಚನದಲ್ಲಿ ಪ್ರಶ್ನಿಸಿದ್ದಾರೆ. ಹಿಂದೆ ಶಾಸಕರಾಗಿದ್ದ ಕೆ.ಜಿ.ಬೋಪಯ್ಯ ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಪ್ರಮುಖ ರಸ್ತೆಗಳ ಅಪಘಾತ ವಲಯಗಳನ್ನು ಗುರುತಿಸಿ, ಅದನ್ನು ಅಭಿವೃದ್ಧಿಪಡಿಸಲು 8 ಕೋಟಿ ರೂ. ಅನುದಾನ ಒದಗಿಸಿದ್ದಾರೆ. ಈಗಿನ ಶಾಸಕ ಎ.ಎಸ್.ಪೊನ್ನಣ್ಣ 7 ತಿಂಗಳಲ್ಲಿ ಏಳು ಅಡಿ ರಸ್ತೆ ನಿರ್ಮಿಸಿದ್ದಾರೆಯೇ ಎಂದು ಪ್ರಶ್ನಿಸಿದರು.



ಸುದ್ದಿಗೋಷ್ಠಿಯಲ್ಲಿ ಸಂಸದ ಪ್ರತಾಪ್ ಸಿಂಹ ಮಾತನಾಡಿದರು. ಮಾಜಿ ಶಾಸಕ ಕೆ.ಜಿ.ಬೋಪಯ್ಯ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಲ್ಲಾ ವಕ್ತಾರ ಮಹೇಶ್ ಜೈನಿ, ಮಾಚಿಮಾಡ ರವೀಂದ್ರ, ಸುಬ್ರಮಣ್ಯ ಉಪಾಧ್ಯಾಯ ಇದ್ದರು.

> ಕೊಡಗು ಜಿಲ್ಲೆಗೆ ಕಾಂಗ್ರೆಸ್ ಏನು ಕೊಡುಗೆ ನೀಡಿದೆ? ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಅಧಿಕಾರದ ಹಿಂದಿನ ಮತ್ತು ಈಗಿನ ಅವಧಿಯಲ್ಲಿ ಕೊಡಗು ಜಿಲ್ಲೆಗೆ ನೀಡಿರುವ ನೆರವಿನ ಬಗ್ಗೆ 'ಶ್ವೇತಪತ್ರ' ಹೊರಡಿಸಲಿ. ಕೊಡಗಿಗೆ ವೈದ್ಯಕೀಯ ಕಾಲೇಜು, ಆನೆ ದಾಳಿ ಪ್ರಕರಣಗಳಲ್ಲಿ ಪರಿಹಾರಧನ ಹೆಚ್ಚಳ, ಆನೆ ಹಾವಳಿ ತಡೆಗೆ ಕಂದಕ, ಬೇಲಿ ನಿರ್ಮಾಣಗಳನ್ನು ಬಿಜೆಪಿ ಅವಧಿಯಲ್ಲಿ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದ ಜಿಲ್ಲಾ ಪೊಲೀಸ್ ಭವನವೂ ಬಿಜೆಪಿ ಅವಧಿಯ ಕೊಡುಗೆ.
> –ಕೆ.ಜಿ.ಬೋಪಯ್ಯ, ಮಾಜಿ ಶಾಸಕ

ಸಮಾಜಗಳ ಅಭಿವೃದ್ಧಿಗೆ 10 ಕೋಟಿ ರೂ.: ಕೊಡಗಿನ 30 ಕೊಡವ ಸಮಾಜಗಳ ಅಭಿವೃದ್ಧಿಗೆ ಹಿಂದೆಯೇ 10 ಕೋಟಿ ರೂ. ನೀಡಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಕೊಡವ ಸಮಾಜಗಳು ನೀಡಿರುವ ಕ್ರಿಯಾ ಯೋಜನೆಗಳಿಗೆ ಆಡಳಿತಾತ್ಮಕ ಒಪ್ಪಿಗೆ ಮಾತ್ರ ಬಾಕಿ ಇದೆ. ಆದರೆ, ಕಾಂಗ್ರೆಸ್ಸಿಗರು ಜನರ ದಾರಿ ತಪ್ಪಿಸುವ ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಹಾಕಿ ನಮ್ಮೆಗೆ ನಿಮ್ಮ ಕೊಡುಗೆ ಏನು?: ಕೊಡಗಿನಲ್ಲಿ ನಡೆಯುವ ಕೊಡವ ಹಾಕಿ ನಮ್ಮೆಗೆ ಬಿಜೆಪಿ ಸರ್ಕಾರದ ಅವಧಿ ಮತ್ತು ಸಂಸದರ ನಿಧಿಯಿಂದ ಅಗತ್ಯ ಹಣ ನೀಡಿದ್ದೇವೆ. ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ ಅಧಿಕಾರದಲ್ಲಿದ್ದಾಗ ನಡೆದ ಶಾಂತೆಯಂಡ ಕಪ್ ಹಾಕಿ ಉತ್ಸವಕ್ಕೆ ಕಾಂಗ್ರೆಸ್ ಸರ್ಕಾರ ಎಷ್ಟು ಹಣ ಒದಗಿಸಿದೆ? ಎಂದು ಪ್ರಶ್ನಿಸಿದರು.

ಕೇಂದ್ರ ಸರ್ಕಾರ ಎನ್‌ಡಿಆರ್‌ಎಫ್‌ನಿಂದ ಅಗತ್ಯ ನೆರವು ನೀಡುತ್ತಿಲ್ಲ ಎಂದು ಸಿದ್ದರಾಮಯ್ಯ ಆರೋಪಿಸುತ್ತಾರೆ. ಆದರೆ, 2004 ರಿಂದ 2014ರ ವರೆಗೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಮನಮೋಹನ್ ಸಿಂಗ್ ಆಡಳಿತದಲ್ಲಿ ರಾಜ್ಯಕ್ಕೆ ಎನ್‌ಡಿಆರ್‌ಎಫ್‌ನಿಂದ ಬಂದಿದ್ದು 3300 ಕೋಟಿ ರೂ. ಮಾತ್ರ. ನರೇಂದ್ರ ಮೋದಿ ಅಧಿಕಾರಾವಧಿಯಲ್ಲಿ ರಾಜ್ಯಕ್ಕೆ 11,600 ಕೋಟಿ ರೂ. ನೆರವು ನೀಡಲಾಗಿದೆ ಎಂದು ತಿಳಿಸಿದರು.

4130 ಕೋಟಿ ರೂ. ವೆಚ್ಚದ ಚತುಷ್ಪಥ ರಸ್ತೆ: ನನ್ನ ಅಧಿಕಾರಾವಧಿಯಲ್ಲಿ ಶ್ರೀರಂಗಪಟ್ಟಣದಿಂದ ಕುಶಾಲನಗರದವರೆಗೆ 4130 ಕೋಟಿ ರೂ. ವೆಚ್ಚದಲ್ಲಿ ಚತುಷ್ಪಥ ರಸ್ತೆ ನಿರ್ಮಾಣಕ್ಕೆ ಕ್ರಮಕೈಗೊಳ್ಳಲಾಗಿದೆ. ಈ ಹೆದ್ದಾರಿಯನ್ನು ಮುಂದಿನ 15 ತಿಂಗಳ ಅವಧಿಯ ಒಳಗಾಗಿ ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸಲಾಗುವುದು. ಪ್ರಾಕೃತಿಕ ವಿಕೋಪದಿಂದ ರಸ್ತೆಗಳ ಕುಸಿತದಿಂದ ಮಡಿಕೇರಿ–ಮಂಗಳೂರು ಮಾರ್ಗದ ವಿವಿಧೆಡೆ ತಡೆಗೋಡೆ ನಿರ್ಮಾಣಕ್ಕೆ 58 ಕೋಟಿ ರೂ. ನೀಡಿದ್ದೇನೆ. ಇನ್ನೂ 8 ತಡೆಗೋಡೆ ನಿರ್ಮಾಣಕ್ಕೆ 100 ಕೋಟಿ ರೂ. ಒದಗಿಸಿರುವುದಾಗಿ ಪ್ರತಾಪ್ ಸಿಂಹ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಡಿಕೇರಿ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಲ್ಲಾ ವಕ್ತಾರ ಮಹೇಶ್ ಜೈನಿ, ಬಿಜೆಪಿ ಮುಖಂಡರಾದ ಮಾಚಿಮಾಡ ರವೀಂದ್ರ, ಸುಬ್ರಮಣ್ಯ ಉಪಾಧ್ಯಾಯ ಉಪಸ್ಥಿತರಿದ್ದರು.

ಕೊಡಗಿಗೆ ಪ್ರತ್ಯೇಕ ಎಂಪಿ ಸ್ಥಾನ

ಕೊಡಗು ತನ್ನದೇ ಆದ ವಿಭಿನ್ನ ಹಿನ್ನೆಲೆ, ಭೌಗೋಳಿಕ ಸ್ಥಿತಿ ಹಾಗೂ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಗೆ ಪ್ರತ್ಯೇಕ ಲೋಕಸಭಾ ಸ್ಥಾನ ನೀಡಬೇಕೆನ್ನುವ ಬೇಡಿಕೆ ಇದೆ. ಡಾರ್ಜಿಲಿಂಗ್, ಲಕ್ಷದ್ವೀಪಗಳಿಗೆ ನೀಡಿರುವಂತೆ ಕೊಡಗಿಗೂ ಪ್ರತ್ಯೇಕ ಲೋಕಸಭಾ ಸ್ಥಾನಕ್ಕೆ ತನ್ನ ಪೂರ್ಣ ಬೆಂಬಲವಿದೆ. 2026ರಲ್ಲಿ ಲೋಕಸಭಾ ಸ್ಥಾನಗಳ ಮರು ವಿಂಗಡಣೆ ನಡೆಯಲಿದ್ದು, ಆ ಸಂದರ್ಭ ತಾನು ಈ ಬಗ್ಗೆ ಕೇಂದ್ರದಲ್ಲಿ ಕೊಡಗಿನ ಪರವಾಗಿ ಧ್ವನಿ ಎತ್ತುವುದಾಗಿ ಸ್ಪಷ್ಟಪಡಿಸಿದ ಸಂಸದ ಪ್ರತಾಪ್ ಸಿಂಹ, ಜಿಲ್ಲೆಗೆ ಪ್ರತ್ಯೇಕ ಲೋಕಸಭಾ ಸ್ಥಾನ ದೊರಕುವ ಆಶಯ ವ್ಯಕ್ತಪಡಿಸಿದರು.

ಮಡಿಕೇರಿಯಲ್ಲಿ ಅಂತಾರಾಷ್ಟ್ರೀಯ ಹತ್ಯಾಕಾಂಡ ದಿನಾಚರಣೆ



ಮಡಿಕೇರಿಯಲ್ಲಿ ಹತ್ಯೆಗೀಡಾದ ಹಿರಿಯರಿಗೆ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ನಮನ ಸಲ್ಲಿಸಲಾಯಿತು.

ಮಡಿಕೇರಿ, ಜ.28– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ನಗರದ ಕೋಟೆ ಆವರಣ, ಪಾಡಿನಾಡಿನ ಯವಕಪಾಡಿಯ ನಾಲ್‌ನಾಡ್ ಅರಮನೆ ಮತ್ತು ದೇವಟ್‌ಪರಂಬ್ ನರಮೇಧದ ಸ್ಮಾರಕ ಸ್ಥಳದಲ್ಲಿ ಅಂತಾರಾಷ್ಟ್ರೀಯ ಹತ್ಯಾಕಾಂಡದ ದಿನ ಆಚರಿಸಲಾಯಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ, ಕೆಳದಿ ಅರಸರಿಂದ ಮಡಿಕೇರಿ ಕೋಟೆಯಲ್ಲಿ ನಡೆದ ರಾಜಕೀಯ ಹತ್ಯೆ, ನಾಲ್ನಾಡ್ ಅರಮನೆಯಲ್ಲಿ ಕೆಳದಿ–ಪಾಲೇರಿ ಆಡಳಿತಗಾರರಿಂದ ಕೊಡವ ಬುಡಕಟ್ಟು ಜನಾಂಗದವರಿಗೆ ಅವಮಾನವೀಯ ಮರಣದಂಡನೆ ಮತ್ತು ದೇವಟ್ ಪರಂಬು ನರ ಮೇಧ ಈ ಮೂರು ದುರಂತ ಕೃತ್ಯಗಳನ್ನು ಅಂತಾ ರಾಷ್ಟ್ರೀಯ ಹತ್ಯಾಕಾಂಡದ ನೆನಪಿನ ಪಟ್ಟಿಯಲ್ಲಿ ಸೇರಿಸಬೇಕು. ಕೊಡವರು ಹತ್ಯೆಗೀಡಾದ ಮೂರೂ ಪ್ರದೇಶದಲ್ಲಿ ಸ್ಮಾರಕ ಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ಅರಮನೆಗಳು ಮತ್ತು ದೇವಟ್‌ಪರಂಬ್‌ನಲ್ಲಿ ನಡೆದ ಮೂರು ದುರಂತ ನರಮೇಧಗಳನ್ನು ಕೊಡವ ಬುಡಕಟ್ಟು ಜನಾಂಗ ಮರೆಯಲು ಸಾಧ್ಯವಿಲ್ಲ. ಕೊಡವ ಜನಾಂಗೀಯ ಇತಿಹಾಸದಲ್ಲಿ ಈ ಆಘಾತಕಾರಿ ಅಧ್ಯಾಯವನ್ನು ನೆನಪಿಸಿ, ಮುಂದಿನ ಪೀಳಿಗೆಗೆ ರವಾನಿಸಲಾಗುತ್ತದೆ. ಮಡಿಕೇರಿ ಕೋಟೆ ಮತ್ತು ನಾಲ್ನಾಡ್ ಅರಮನೆ ಕೊಡವರ ರಾಜಕೀಯ ಹತ್ಯೆಗಳಿಗೆ ನೇರ ಸಾಕ್ಷಿಯಾಗಿದೆ. ಮೂಲನಿವಾಸಿ ಕೊಡವ ಜನಾಂಗದವರು ಅಮಾನವೀಯ ಪಿತೂರಿಯಲ್ಲಿ ಕೊನೆಯುಸಿರೆಳೆದಿದ್ದಾರೆ. ಇದನ್ನು ಹಿರಿಯ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಜ್ಞಾನಪೀಠ ಪುರಸ್ಕೃತ ಕಾದಂಬರಿ "ಚಿಕ್ಕ ವೀರರಾಜೇಂದ್ರ"ದಲ್ಲಿ ಎಳೆ ಎಳೆಯಾಗಿ ಚಿತ್ರಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭ ಚೋಳಪಂಡ ಜ್ಯೋತಿ ನಾಣಯ್ಯ, ಕಾಂಡೇರ ಸುರೇಶ್, ಪಟ್ಟಮಾಡ ಕುಶ, ಅಲುಮಂಡ ಜೈ, ಚೋಳಪಂಡ ನಾಣಯ್ಯ, ಪುಟ್ಟಿಚಂಡ ಡಾನ್ ದೇವಯ್ಯ, ಅಜ್ಜಿಕುಟ್ಟೀರ ಲೋಕೇಶ್, ಪುಲ್ಲೇರ ಕಾಳಪ್ಪ, ಮಣವಟ್ಟೀರ ಚಿಣ್ಣಪ್ಪ, ಪಾರ್ವಂಗಡ ನವೀನ್, ಕಿರಿಯಮಾಡ ಶೆರಿನ್, ಕಾಟುಮಣಿಯಂಡ ಉಮೇಶ್, ಮೇದುರ ಕಂಠಿ, ಬಡವಂಡ ವಿಜಯ, ಕೂಪದಿರ ಸಾಬು, ಮದಿಯೊಳ್ಳಿಡ ಕಾಶಿ, ಮಂದ ಪಂಡ ಸೂರಜ್, ಮಂದಪಂಡ ನಾಚಪ್ಪ ಅರೆಯಡ ಗಿರೀಶ್, ಅಪ್ಪಾರಂಡ ಪ್ರಸಾದ್, ಮೇಕೇರಿರ ಬಬ್ಬು ಪಾಲೆಕಂಡ ಪ್ರತಾಪ್, ಅಪ್ಪಾರಂಡ ವಿವೇಕ್, ಅಪ್ಪಾರಂಡ ಪ್ರಕಾಶ್, ಬೊಳ್ಳಾರ್ಪಂಡ ಮಾಚಯ್ಯ ಅವರು ಹತ್ಯೆಗೀಡಾದ ಹಿರಿಯರಿಗೆ ಪುಷ್ಪ ನಮನ ಸಲ್ಲಿಸಿದರು.

ನಾಪತ್ತೆಯಾಗಿದ್ದ ವ್ಯಕ್ತಿ ಶವವಾಗಿ ಪತ್ತೆ

ನಾಪೋಕ್ಲು, ಜ.28–ಸಮೀಪದ ಮೂರ್ನಾಡಿನಲ್ಲಿ ನಾಪತ್ತೆಯಾದ ವ್ಯಕ್ತಿಯ ಶವ ಕೊಡಂಬೂರಿನ ಕೆರೆಯಲ್ಲಿ ಭಾನುವಾರ ಪತ್ತೆಯಾಗಿದೆ.



ಮೂರ್ನಾಡು ಕೃಷಿ ಪತ್ತಿನ ಸಹಕಾರ ಸಂಘದ ಉದ್ಯೋಗಿ ಪೌತಿ ಮುತ್ತಣ್ಣ ಅವರ ಮಗ ಪೂಣಚ್ಚ (37) ಶವ ಪತ್ತೆಯಾಗಿದ್ದು, ಈತ ಜ.23ರಿಂದ ಕಾಣೆಯಾಗಿದ್ದರು. ಈ ಬಗ್ಗೆ ಅಣ್ಣ ಕಿಶೋರ್ ಮೂರ್ನಾಡು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ನಾಲ್ಕು ದಿನಗಳಿಂದ ಎಲ್ಲೆಡೆ ಹುಡುಕಾಟ ನಡೆಸಿದರೂ ಪತ್ತೆಯಾಗಿರಲಿಲ್ಲ. ಆದರೆ, ಭಾನುವಾರ ಕೊಡಂಬೂರಿನ ಚೆಕ್ಕೆರ ಮುತ್ತಣ್ಣ ಮಾಸ್ಟರ್ ಕಾಫಿ ತೋಟದ ಕೆರೆಯಲ್ಲಿ ಈತನ ಶವ ಪತ್ತೆಯಾಗಿದೆ.


ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರು ಮಧ್ಯಾಹ್ನ ಶವವನ್ನು ಕಂಡು ಮುತ್ತಣ್ಣ ಮಾಸ್ಟರ್ ಅವರಿಗೆ ತಿಳಿಸಿದ್ದು, ಮುತ್ತಣ್ಣ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ನಂತರ ಮೂರ್ನಾಡು ಪೊಲೀಸ್ ಠಾಣಾಧಿಕಾರಿ ಶ್ರೀನಿವಾಸ್, ಸಿಬ್ಬಂದಿ ರಾಜಾರಾಂ ಖಾಲಿದ್ ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡರು. ಇತ್ತೀಚೆಗೆ ಪೂಣಚ್ಚ ವಾಗು ವ್ಯಾಪಾರದಲ್ಲಿ ನಷ್ಟ ಹಿನ್ನೆಲೆಯಲ್ಲಿ ಅವರು ಮಾನಸಿಕವಾಗಿ ಕುಗ್ಗಿದ್ದರು ಎನ್ನಲಾಗಿದೆ.

ಸುಂಟಿಕೊಪ್ಪದಲ್ಲಿ ತಡರಾತ್ರಿ ಸರಣಿ ಕಳ್ಳತನ

ಸುಂಟಿಕೊಪ್ಪ, ಜ.28–ಸುಂಟಿಕೊಪ್ಪದಲ್ಲಿ ಶನಿವಾರ ತಡರಾತ್ರಿ ಸರಣಿ ಕಳ್ಳತನ ನಡೆದಿದ್ದು, 1 ಲಕ್ಷಕ್ಕೂ ಅಧಿಕ ನಗದನ್ನು ಕಳ್ಳರು ಕದ್ದೊಯ್ದಿದ್ದಾರೆ. ಈ ಘಟನೆಯಿಂದ ಇಲ್ಲಿನ ವರ್ತಕರು ಹಾಗೂ ನಿವಾಸಿಗಳು ಆತಂಕಗೊಂಡಿದ್ದಾರೆ.

ಪಟ್ಟಣದ ಹೃದಯ ಭಾಗದ ರಾಷ್ಟ್ರೀಯ ಹೆದ್ದಾರಿಯ ಬಟ್ಟೆ ಅಂಗಡಿಯ ಬಾಗಿಲು ಮುರಿದು ಒಳ ನುಗ್ಗಿರುವ ಕಳ್ಳರು 1 ಲಕ್ಷ ರೂ. ನಗದು, ಕೆಲ ಬಟ್ಟೆ ಮತ್ತು ಕನ್ನಡಕಗಳನ್ನು ಕಳವು ಮಾಡಿದ್ದಾರೆ.

ಇದಕ್ಕೂ ಮೊದಲು ಸುರೇಶ್ ಕುಶಾಲಪ್ಪ ಅವರಿಗೆ ಸೇರಿದ ಹೋಂ ನಿಯಂತ್ರಣ ಕೇಂದ್ರದಲ್ಲಿ ನಿಲ್ಲಿಸಿದ್ದ ಬೈಕ್ ಅನ್ನು ಚೋರರು ಕದ್ದೊಯ್ದಿದ್ದಾರೆ. ನಂತರ ಬಸ್ ನಿಲ್ದಾಣದ ಪೆಟ್ರೋಲ್ ಬಂಕ್‌ಗೆ ನುಗ್ಗಿ ಹಣ ಸಿಗದಿದ್ದಾಗ 2 ಪಾಕೆಟ್ ಆಯಿಲ್ ಅನ್ನು ತೆಗೆದುಕೊಂಡು ಹೋಗಿದ್ದಾರೆ. ಇಲ್ಲಿನ ಸಿಸಿ ಕ್ಯಾಮರಾದಲ್ಲಿ ಕಳ್ಳತನದ ದೃಶ್ಯ ಸೆರೆ ಯಾಗಿದ್ದು, ಇಬ್ಬರು ಮುಸುಕುಧಾರಿಗಳು ಕಂಡು ಬಂದಿದ್ದಾರೆ. ನಂತರ ಪಕ್ಕದ ಹಾಲಿನ ಡೇರಿಯ ಬೀಗ ಮುರಿದು ಒಳನುಗ್ಗಿದ ಕಳ್ಳರು 2 ಸಾವಿರ ರೂ. ನಗದನ್ನು ಕದ್ದೊಯ್ದಿದ್ದಾರೆ.



ಸುಂಟಿಕೊಪ್ಪ ಬಸ್ ನಿಲ್ದಾಣದ ಪೆಟ್ರೋಲ್ ಬಂಕ್‌ನ ಸಿಸಿ ಕ್ಯಾಮರಾದಲ್ಲಿ ಸೆರೆಯಾದ ಮುಸುಕುಧಾರಿಗಳು.

ರಾಮು ಮಡಿಕೇರಿನ ಮಾಲೀಕ ಕೆ.ಪಿ.ಜಗನ್ನಾಥ್ ಅವರ ಹಳೆಯ ಮನೆಯ ಬೀಗ ಮುರಿದು ಒಳ ನುಗ್ಗಿದ ಕಳ್ಳರು ಏನೂ ಸಿಗದೆ ಕಾಲ್ಕಿತ್ತಿದ್ದಾರೆ. ಈ ಎಲ್ಲಾ ಕಳ್ಳತನ ಪ್ರಕರಣ ತಡರಾತ್ರಿ 2.15 ರಿಂದ 3.15ರ ಅವಧಿಯಲ್ಲಿ ನಡೆದಿದೆ ಎಂದು ಅಂದಾಜಿಸಲಾಗಿದೆ. ಕಳ್ಳತನ ನಡೆದ ಸ್ಥಳಕ್ಕೆ ಅಪರಾಧ ಪತ್ತೆ ದಳದ ಪೊಲೀಸ್ ಅಧಿಕಾರಿ ಸ್ವಾಮಿ ಹಾಗೂ ಸಿಬ್ಬಂದಿ, ಶ್ವಾನದಳ, ಬೆರಳಚ್ಚು ತಜ್ಞರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಮುಸುಕುಧಾರಿಗಳ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ಹೊಂಗನೂರು ಹಿರೀಕೆರೆ ಅಭಿವೃದ್ಧಿಗೆ ಕ್ರಮ

● ಸಣ್ಣ ನೀರಾವರಿ ಸಚಿವ ಬೋಸರಾಜು ಭರವಸೆ ● ಸ್ಥಳೀಯರಿಂದ ಮಾಹಿತಿ

ಯಳಂದೂರು, ಜ.28– ಹೊಂಗನೂರು ಹಿರೀಕೆರೆ ಅಭಿವೃದ್ಧಿಗೆ ಕ್ರಮ ವಹಿಸಿ, ಇಲ್ಲಿನ ರೈತರಿಗೆ ಅನುಕೂಲ ಕಲ್ಪಿಸಲಾಗುವುದು ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ತಿಳಿಸಿದರು.

ಸಮೀಪದ ಹೊಂಗನೂರು ಹಿರೀಕೆರೆಗೆ ಶಾಸಕ ಎ.ಆರ್.ಕೃಷ್ಣಮೂರ್ತಿ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಭೇಟಿ ನೀಡಿ ವೀಕ್ಷಿಸಿ, ನಂತರ ಮಾತನಾಡಿದ ಅವರು, ಶಾಸಕ ಎ.ಆರ್.ಕೃಷ್ಣಮೂರ್ತಿ ಈ ಕೆರೆ ಅಭಿವೃದ್ಧಿ ಬಗ್ಗೆ ವಿಧಾನಸಭೆಯಲ್ಲಿ ಪ್ರಶ್ನಿಸಿದ್ದರು. ಆ ವೇಳೆ ನಾನೇ ಸ್ಥಳಕ್ಕೆ ಭೇಟಿ ಪರಿಶೀಲಿಸುತ್ತೇನೆ ಎಂದು ಭರವಸೆ ನೀಡಿದ್ದೆ. ಅದ್ದರಿಂದ ಇಲ್ಲಿಗೆ ಭೇಟಿ ನೀಡಿದ್ದೇನೆ ಎಂದರು.

ಇದೇ ವೇಳೆ ಸ್ಥಳೀಯರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು, 350 ಎಕರೆ ಪ್ರದೇಶ ವ್ಯಾಪ್ತಿಯಲ್ಲಿರುವ ಈ ಕೆರೆಯಿಂದ 3 ಗ್ರಾಮ ಪಂಚಾಯಿತಿ ವ್ಯಾಪ್ತಿಯ 12 ಗ್ರಾಮಗಳ ರೈತರಿಗೆ ಅನುಕೂಲವಾಗುತ್ತದೆ. ಒಟ್ಟು 1800ಕ್ಕೂ ಹೆಚ್ಚು ಎಕರೆಗೆ ಇದು ನೀರುಣಿಸುತ್ತದೆ. ಇದರ ವ್ಯಾಪ್ತಿಗೆ ಒಳಪಡುವ ಮುಖ್ಯ ಕಾಲುವೆ 6 ಕಿ.ಮೀ. ಇದ್ದು, ಇದರ ಉಪಕಾಲುವೆ 30 ಕಿ.ಮೀ. ಇದೆ. ಆದರೆ, ಕೆಲವ 40 ವರ್ಷಗಳ ಹಿಂದೆ ಈ ಕಾಲುವೆ ನಿರ್ಮಾಣವಾಗಿದೆ. ಇಲ್ಲಿ ನೀರು ಹರಿಯುವುದಿಲ್ಲ. ಹೂಳು ತುಂಬಿದೆ. ಕೆಲವೆಡೆ ಕಾಲುವೆ ಕಿತ್ತು ಹೋಗಿದೆ. ಇದನ್ನು ದುರಸ್ತಿಗೊಳಿಸಬೇಕು. ಮಳೆಯಾದರೆ ಮಾತ್ರ ಈ ಕೆರೆ ತುಂಬುತ್ತದೆ. ಇದಕ್ಕೆ ಶಾಶ್ವತವಾಗಿ ನೀರು ತುಂಬಿಸುವ ಯೋಜನೆಯನ್ನು ರೂಪಿಸಬೇಕು. ಈ ಕೆರೆ ತುಂಬಿದರೆ ನೀರು ಹೆಚ್ಚುವುದರಿಂದ ಬಿಆರ್‌ಟಿ ಕಾಡಂಚಿನ ಜಮೀನಿಗೆ ತೆರಳಲು ತೊಂದರೆಯಾಗುತ್ತದೆ. ಹಾಗಾಗಿ ಇಲ್ಲಿಗೆ ಸೇತುವೆ ನಿರ್ಮಿಸಬೇಕು ಎಂದು ಮನವಿ ಮಾಡಿದರು.



ಯಳಂದೂರು ಸಮೀಪದ ಹೊಂಗನೂರು ಹಿರೀಕೆರೆಗೆ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಭೇಟಿ ನೀಡಿ, ಕೆರೆಯ ಬಗ್ಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಹಾಗೂ ಅಧಿಕಾರಿಗಳಿಂದ ಮಾಹಿತಿ ಪಡೆದರು.

ನಂತರ ಸಚಿವರು ಮಾತನಾಡಿ, ಜಿ.ರಾಚಯ್ಯನವರ ತಂದೆ ಅವರ ಕಾಲದಲ್ಲಿ ನೀರಾವರಿ ಯೋಜನೆಗಳಿಗೆ ಅಪಾರ ಕೊಡುಗೆ ನೀಡಿ ಈ ಕೆರೆಯ ಅಭಿವೃದ್ಧಿಗೂ ಕಾರಣರಾಗಿದ್ದಾರೆ. ಹಾಗಾಗಿ ನಾನು ವೈಯಕ್ತಿಕ ಆಸಕ್ತಿ ವಹಿಸಿ ಇಲ್ಲಿಗೆ ಬಂದಿದ್ದೇನೆ. ಕೆರೆಗೆ ಸಂಬಂಧಿ ಸಿದ ಎಲ್ಲಾ ದಾಖಲೆಗಳನ್ನು ನಾನು ಪರಿಶೀಲಿಸುತ್ತೇನೆ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ಮಾಹಿತಿ ಪಡೆದು ಕೊಳ್ಳುತ್ತೇನೆ. ಇದಕ್ಕೆ ಉತ್ತಮ ಯೋಜನೆಯನ್ನು ರೂಪಿಸಿ, ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮುಂದಿನ ಬಜೆಟ್‌ನಲ್ಲಿ ಇದನ್ನು ಸೇರಿಸಿ ಕೆರೆ ಹಾಗೂ ಇದರ ಅಚ್ಚುಕಟ್ಟು ಪ್ರದೇಶಗಳಿಗೆ ಕಾಯಕಲ್ಪ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮದ ಅಧ್ಯಕ್ಷರಾದ ವಿಶಾಲಾಕ್ಷಿ, ರೇವಣ್ಣ, ಉಪಾಧ್ಯಕ್ಷ ನವೀನ್‌ಕುಮಾರ್, ಸದಸ್ಯ ಮಣಿಕಂಠ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೊಂಗನೂರು ಎಚ್.ವಿ.ಚಂದ್ರು, ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಕಂದಹಳ್ಳಿ ನಂಜುಂಡ ಸ್ವಾಮಿ, ಸುಗಂಧ ರಾಜನ್, ಹೊಂಗ ನೂರು ಪುಟ್ಟಸ್ವಾಮಿ, ಎಸ್.ಇ.ವಿನಾಯಕ್, ಎಇಇ ನಿರಂಜನ್, ಜೆಇ ಅಭಿಲಾಶ್ ಉಪಸ್ಥಿತರಿದ್ದರು.

ವರ್ಷವಿಡೀ ನಾಡು ನುಡಿ ಆಚರಣೆ

ಚಾಮರಾಜನಗರ, ಜ.28–ರಾಜ್ಯ ಸರ್ಕಾರ ಕರ್ನಾಟಕ ಸುವರ್ಣ ಸಂಭ್ರಮದ ಅಂಗವಾಗಿ ವರ್ಷವಿಡೀ ನಾಡು ನುಡಿ ಕುರಿತು ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ನಗರದ ಚಾಮರಾಜೇಶ್ವರ ದೇವಾಲಯ ಮುಂಭಾಗದ ಭಾನುವಾರ ಜಿಲ್ಲಾಡಳಿತ ವತಿಯಿಂದ ಆಯೋಜಿಸಿದ್ದ ಕರ್ನಾಟಕ ಸುವರ್ಣ ಸಂಭ್ರಮದ ಅಂಗವಾಗಿ ಖ್ಯಾತ ಕನ್ನಡ ಚಲನಚಿತ್ರ ಗಾಯಕರು, ಸಂಗೀತ ನಿರ್ದೇಶಕರ ಸಂಗೀತೋತ್ಸವ ಹಾಗೂ ಹಾಸ್ಯೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕರ್ನಾಟಕ ಎಂದು ನಾಮಕರಣವಾಗಿ 50 ವರ್ಷ ಪೂರೈಸಿದ್ದು ಇದರ ಸಂಭ್ರಮವನ್ನು ರಾಜ್ಯ ಸರ್ಕಾರ ವರ್ಷವಿಡೀ ಅನೇಕ ಕನ್ನಡ ಕಾರ್ಯಕ್ರಮಗಳ ಮೂಲಕ ಆಚರಿಸುತ್ತಿದೆ. ಮುಖ್ಯಮಂತ್ರಿಗಳು ಸುವರ್ಣ ಕರ್ನಾಟಕ ಸಂಭ್ರಮ ಕಾರ್ಯಕ್ರಮ ಅದ್ದೂರಿ ಆಚರಣೆಗೆ ಘೋಷಣೆ ಮಾಡಿದ್ದು, ಇದರ ಅಂಗವಾಗಿ ರಾಜ್ಯದ ಎಲ್ಲೆಡೆ ವಿವಿಧ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು. ಜನವರಿ 8ರಂದು ಜಿಲ್ಲೆಗೆ ಕನ್ನಡ ರಥ ಆಗಮಿಸಿದ್ದು, ಎಲ್ಲಾ ತಾಲೂಕು ಗಳಲ್ಲಿ ಸಂಚರಿಸಲಿದೆ. ಕನ್ನಡದ ಬಗೆಗಿನ ಪ್ರೇಮ, ನಾಡು, ನುಡಿ ಜಾಗೃತಿ ಮೂಡಿಸಲಿದೆ. ಕನ್ನಡ ಭಾಷೆಗೆ ಉತ್ತೇಜನ ನೀಡುವಲ್ಲಿ ಆದ್ಯತೆ ನೀಡಿದ್ದು ನಾಡಿನ ಸಂಸ್ಕೃತಿ, ಪರಂಪರೆ ಪೋಷಿಸಿ ಉತ್ತೇಜಿಸುವ ಕಾರ್ಯವನ್ನು ಸರ್ಕಾರ ಮಾಡುತ್ತಿದೆ ಎಂದು ತಿಳಿಸಿದರು.

ಕನ್ನಡ ಕುರಿತು ಅಭಿಮಾನ, ಪ್ರೀತಿ ಎಲ್ಲರಲ್ಲಿಯೂ ಮತ್ತಷ್ಟು ಹೆಚ್ಚಾಗಲಿ, ಸರ್ಕಾರ ಕನ್ನಡ ಬಗೆಗಿನ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚು ಹಮ್ಮಿಕೊಳ್ಳಲಿದೆ. ಕರ್ನಾಟಕ 50ರ ಸಂಭ್ರಮ ಅರ್ಥಪೂರ್ಣವಾಗಿ ನಡೆಯಲಿದೆ ಎಂದು ಹೇಳಿದರು.

ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಚ್.ಎಂ.ಗಣೇಶ್ ಪ್ರಸಾದ್, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಅಬಕಾರಿ ಉಪ ಆಯುಕ್ತ ನಾಗಶಯನ ಇನ್ನಿತರ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಂತರ ನಡೆದ ಕಾರ್ಯಕ್ರಮದಲ್ಲಿ ಗಾಯಕರಾದ ಅರ್ಜುನ್ ಜನ್ಯ, ಹೇಮಂತ್, ಶರಣ್, ಕಂಬದ ರಂಗಯ್ಯ, ರೇಖಾ ಮೋಹನ್ (ರೆಮೋ) ಗಾಯನಕ್ಕೆ ಜನತೆ ಮನಸೋತು ಹುಚ್ಚೆದ್ದು ಕುಣಿದರು.

ಸುವರ್ಣ ಕರ್ನಾಟಕ ಸಂಭ್ರಮದಲ್ಲಿ ಸಚಿವ ಕೆ.ವೆಂಕಟೇಶ್



ಚಾಮರಾಜನಗರದ ಚಾಮರಾಜೇಶ್ವರ ದೇವಾಲಯ ಮುಂಭಾಗದ ಆಯೋಜಿಸಿದ್ದ ಸಂಗೀತೋತ್ಸವದಲ್ಲಿ ಗಾಯಕ ಅರ್ಜುನ್ ಜನ್ಯ ಹಾಡಿದರು.

ಇಂದು ಬಿಳಿಗಿರಿರಂಗನಬೆಟ್ಟದಲ್ಲಿ ಗಿರಿಜನ ಉತ್ಸವ

ಚಾಮರಾಜನಗರ, ಜ.28–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಗಿರಿಜನ ಉತ್ಸವವನ್ನು ಜ.29ರಂದು ಮಧ್ಯಾಹ್ನ 2 ಗಂಟೆಗೆ ಬಿಳಿಗಿರಿರಂಗನಬೆಟ್ಟದ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದಲ್ಲಿ ಆಯೋಜಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಎ.ಆರ್.ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್.ತಂಗಡಗಿ, ಸಂಸದ ವಿ.ಶ್ರೀನಿವಾಸ ಪ್ರಸಾದ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಹೆಚ್.ಎಂ.ಗಣೇಶ್‌ಪ್ರಸಾದ್, ಎಂ.ಆರ್.ಮಂಜುನಾಥ್, ಬಿಳಿಗಿರಿರಂಗನಬೆಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರದೀಪ್‌ಕುಮಾರ್ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಡಾ.ಕೆ.ಧರಣೀದೇವಿ, ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು, ನಾಳೆ ಕೇಂದ್ರ ತಂಡ ಭೇಟಿ

ಚಾಮರಾಜನಗರ, ಜ.28–ರಾಷ್ಟ್ರೀಯ ಜಲಜೀವನ್ ಮಿಷನ್ ಯೋಜನೆಯಡಿ ಜೆಜೆಎಂ ಮತ್ತು ಎಸ್‌ಬಿಎಂ ಯೋಜನೆಗಳ ಪರಿವೀಕ್ಷಣೆಗೆ ಕೇಂದ್ರದ ವಾಷ್ ತಜ್ಞರ ತಂಡ ಜ.29ರಂದು ಕೊಳ್ಳೇಗಾಲ ತಾಲೂಕು ಹಾಗೂ 30 ರಂದು ಚಾಮರಾಜನಗರ ತಾಲೂಕಿಗೆ ಭೇಟಿ ನೀಡಲಿದೆ.

ತಂಡದ ಜಾಗಿತ್ ಸಿಂಗ್ ಸೋಧಿ ಮತ್ತು ಶಿಶಿರ್ ಬಾಸಿರ್ ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಜಲಜೀವನ್ ಮಿಷನ್ ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಅನುಷ್ಠಾನಗೊಂಡಿರುವ ಆಯ್ದ 16 ಗ್ರಾಮಗಳಲ್ಲಿ ಪರಿವೀಕ್ಷಣೆ ನಡೆಸಲಿದ್ದಾರೆ.

ಕೊಳ್ಳೇಗಾಲ ತಾಲೂಕಿನ ಕುಂತೂರು ಮೋಳೆ, ಸರಗೂರು, ಮೇಗಲಾದೊಡ್ಡಿ, ಚಿಕ್ಕಲ್ಲೂರು ಹಾಗೂ ಚಾಮರಾಜನಗರ ತಾಲೂಕಿನ ಬೊಮ್ಮನಹಳ್ಳಿ, ಅರಕಲವಾಡಿ, ಆಲೂರು, ದೇವಹಳ್ಳಿ ಗ್ರಾಮಗಳಿಗೆ ಭೇಟಿ ನೀಡಲಿದ್ದಾರೆ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಎ.ಎನ್.ಮಧುಸೂದನ್ ತಿಳಿಸಿದ್ದಾರೆ.

ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘದ ಅಧ್ಯಕ್ಷರಾಗಿ ಜನಾರ್ಧನ್ ಆಯ್ಕೆ



ಶ್ರೀಕ್ಷೇತ್ರ ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘಕ್ಕೆ ಆಯ್ಕೆಯಾದ ಪದಾಧಿಕಾರಿಗಳು.

ಹನೂರು, ಜ.28– ಶ್ರೀಕ್ಷೇತ್ರ ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘದ ಅಧ್ಯಕ್ಷರಾಗಿ ಜನಾರ್ಧನ್ ಹಾಗೂ ಕಾರ್ಯದರ್ಶಿಯಾಗಿ ಸ್ವಾಮಿ ಅವರನ್ನು ಅವಿರೋಧ ಆಯ್ಕೆ ಮಾಡಲಾಯಿತು.

ಗೌರವಾಧ್ಯಕ್ಷರಾಗಿ ಗೋಪಾಲ್, ಉಪಾಧ್ಯಕ್ಷರಾಗಿ ಸರಗೂರು ಮಹದೇವಸ್ವಾಮಿ, ಸುಮಿತ್ರ ಬಾಯಿ, ಸಹಕಾರ್ಯದರ್ಶಿಯಾಗಿ ರಾಜು, ಸಂಘಟನಾ ಕಾರ್ಯದರ್ಶಿಯಾಗಿ ಉಮೇಶ್, ಮಹೇಶ್, ಖಜಾಂಚಿಯಾಗಿ ರವಿ, ಜಂಟಿಕಾರ್ಯದರ್ಶಿ ಯಾಗಿ ಮಾದೇಶ್ ಅವರನ್ನು ಆಯ್ಕೆ ಮಾಡಲಾಯಿತು.

ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್ ಮಾತನಾಡಿ, ಫೆಬ್ರವರಿಯಲ್ಲಿ ಹಮ್ಮಿಕೊಂಡಿರುವ ಗಡಿನಾಡ ಉತ್ಸವ ಸಂಬಂಧ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ಅವರನ್ನು ಭೇಟಿ ಆಗಮಿಸಲಾಗಿತ್ತು. ಆದರೆ, ಕಾರಣಾಂತರಗಳಿಂದ ಸಾಧ್ಯವಾಗಿಲ್ಲ. ಕಾರ್ಯಕರ್ತರ ಕಾಳಜಿಯ ಎಂಬಂತೆ ಶ್ರೀಕ್ಷೇತ್ರ ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘದ ನೂತನ ಪದಾಧಿಕಾರಿಗಳನ್ನು ಸದಸ್ಯರ ಸರ್ವಾನುಮತದಿಂದ ಆಯ್ಕೆ ಮಾಡಲಾಗುವುದು ಸಂತಸ ತಂದಿದೆ ಎಂದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಕ್ರೀಡಾ ಕಾರ್ಯದರ್ಶಿ ರಕ್ಷಿತ್ ಕುಮಾರ್, ಉಪಾಧ್ಯಕ್ಷ ಮಲ್ಲಿಕಾರ್ಜುನ, ಹನೂರು ತಾಲೂಕು ಅಧ್ಯಕ್ಷ ಗುರುಸ್ವಾಮಿ, ಪ್ರಭಾರ ಕಾರ್ಯದರ್ಶಿಗಳಾದ ಚಂದ್ರಶೇಖರ್, ಜಿಲ್ಲಾ ಸರ್ಕಾರಿ ನೌಕರರ ಸಂಘಟನಾ ಕಾರ್ಯದರ್ಶಿ ವೆಂಕಟೇಶ್, ತಾಲೂಕು ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷರಾದ ಅಶೋಕ್, ಪ್ರಾಧಿಕಾರಿಗಳಾದ ಶ್ರೀನಿವಾಸ ನಾಯ್ಡು, ಪ್ರೀತಮ್ ಇನ್ನಿತರರು ಹಾಜರಿದ್ದರು.

ಬದನಗುಪ್ಪೆಯಲ್ಲಿ ಸರಣಿ ಕಳ್ಳತನ

ಕೃಷಿ ಪಂಪ್‌ಸೆಟ್‌ಗಳ ಕೇಬಲ್ ಕದ್ದೊಯ್ದ ದುಷ್ಕರ್ಮಿಗಳು

ಚಾಮರಾಜನಗರ, ಜ.28–ತಾಲೂಕಿನ ಬದನಗುಪ್ಪೆ ಗ್ರಾಮದ ಹೊರವಲಯದ ದೇವಸ್ಥಾನ ಮತ್ತು ರೈತರ ಜಮೀನುಗಳ ನಾಲ್ಕು ಕೃಷಿ ಪಂಪ್‌ಸೆಟ್‌ಗಳಲ್ಲಿ ಶುಕ್ರವಾರ ರಾತ್ರಿ ಕಳ್ಳರು ಕಳವು ಮಾಡಿದ್ದಾರೆ.

ಗ್ರಾಮದ ಹೊರವಲಯದ ಪುರಾತನ ಶ್ರೀ ಬಸವೇಶ್ವರ ದೇವಾಲಯದ ಮುಖ್ಯಬಾಗಿಲು ಒಡೆದು ಒಳನುಗ್ಗಿರುವ ಕಳ್ಳರು ಬಸವೇಶ್ವರ (ನಂದಿ) ದೇವರಿಗೆ ಧರಿಸಿದ್ದ ನಾಲ್ಕು ಬೆಳ್ಳಿಯ ಕರಡಿಗೆ, ಮೂರು ತಾಮ್ರದ ಬಿಂದಿಗೆ, ಎರಡು ಬೆಳ್ಳಿ ಗಂಟೆ ಹಾಗೂ ಗೋಲಕವನ್ನು ಕದ್ದೊಯ್ದಿದ್ದಾರೆ. ನಂತರ ದೇವಸ್ಥಾನದ ಅಕ್ಕಪಕ್ಕದ ಶಿವಕುಮಾರ್, ಚನ್ನಬಸಪ್ಪ, ನಾಗಣ್ಣ ಮತ್ತು ಸಿದ್ದಲಿಂಗಸ್ವಾಮಿ ಎಂಬ ರೈತರಿಗೆ ಸೇರಿದ ಕೃಷಿ ಪಂಪ್‌ಸೆಟ್‌ಗಳಿಗೆ ಅಳವಡಿಸಿದ್ದ ಕೇಬಲ್‌ಗಳನ್ನು ಕಳವು ಮಾಡಿದ್ದಾರೆ.

ಈ ಸಂಬಂಧ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದೆ. ಇತ್ತೀಚೆಗಷ್ಟೇ ಗ್ರಾಮದ ಹೊರವಲಯದ ಉತ್ತರ ಭಾಗದಲ್ಲಿರುವ ಶ್ರೀ ಮಹದೇಶ್ವರ ದೇವಸ್ಥಾನದ ಹುಂಡಿಯನ್ನು ದುಷ್ಕರ್ಮಿಗಳು ಕದ್ದೊಯ್ದಿದ್ದರು. ಇದಕ್ಕೂ ಮುನ್ನ ಗ್ರಾಮದ ಶ್ರೀ ಕಾಳೇಶ್ವರ ದೇವಸ್ಥಾನದ ಹುಂಡಿಯನ್ನು ಒಡೆದು ಹಣವನ್ನು ಕಳ್ಳತನ ಮಾಡಲಾಗಿತ್ತು. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೂ ಈವರೆಗೂ ಈ ಕಳ್ಳರ ಪತ್ತೆಯಾಗಿಲ್ಲ.

ಶುಕ್ರವಾರ ರಾತ್ರಿ ನಡೆದಿರುವ ಸರಣಿ ಕಳವು ರೈತರ ನಿದ್ದೆಗೆಡಿಸಿದೆ. ಹಾಗಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಈ ಬಗ್ಗೆ ಕಾಳಜಿವಹಿಸಿ, ಸೂಕ್ತ ತನಿಖೆ ನಡೆಸಿ ಕಳ್ಳರನ್ನು ಬಂಧಿಸುವಂತೆ ಪೊಲೀಸರಿಗೆ ಸೂಚಿಸಬೇಕೆಂದು ಗ್ರಾಮಸ್ಥರು ಹಾಗೂ ರೈತರು ಒತ್ತಾಯಿಸಿದ್ದಾರೆ.

ಪುಟ್ಟಸಿದ್ದಮ್ಮ ನಿಧನ

ಕೊಳ್ಳೇಗಾಲ, ಜ.28–ತಾಲೂಕಿನ ಸಿದ್ದಯ್ಯನಪುರ ಗ್ರಾಮದ ದಿ.ಲಿಂಗಯ್ಯ ಅವರ ಪತ್ನಿ ಪುಟ್ಟ ಸಿದ್ದಮ್ಮ (85) ಭಾನುವಾರ ನಿಧನರಾದರು. ಮೃತರು ಮೂವರು ಪುತ್ರರು, ಒಬ್ಬ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಸೋಮವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಸಿದ್ದಯ್ಯನಪುರ ದಲ್ಲಿರುವ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ನಟರಾಜು



ಯಳಂದೂರು, ಜ.28–ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ಅಧ್ಯಕ್ಷ ನಟರಾಜು (42) ಭಾನುವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಪುತ್ರ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ.

ಸೋಮವಾರ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೆಹಲಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಂಡು ಪ್ರಧಾನಿ ಮೋದಿ ಪ್ರಶಂಸೆಗೆ ಪಾತ್ರರಾದ ಮೈಸೂರಿನ ತನ್ಮಯಿ



ಮೈಸೂರು, ಜ.28(ಎಸ್‌ಬಿಡಿ)– ದೆಹಲಿಯ ಕರ್ತವ್ಯ ಪಥದಲ್ಲಿ ಶುಕ್ರವಾರ ನಡೆದ 75ನೇ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ತಾಂಡವಪುರದ ಮಹಾರಾಜ ಇಂಜಿನಿಯರಿಂಗ್ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿನಿ ತನ್ಮಯಿ.ಎಸ್ 13ನೇ ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ತಂಡವನ್ನು ಪ್ರತಿನಿಧಿಸಿ, ಪ್ರಧಾನಿ ನರೇಂದ್ರ ಮೋದಿ ಅವರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ದೇಶದ ಒಟ್ಟು 17 ಎನ್‌ಸಿಸಿ ತುಕಡಿಗಳು ಭಾಗವಹಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ಕರ್ನಾಟಕ ತಂಡವು, ಮಹಾರಾಷ್ಟ್ರ ನಂತರ 2ನೇ ಅತ್ಯುತ್ತಮ ತಂಡವಾಗಿ ಹೊರಹೊಮ್ಮಿತು. ತಂಡದ ಸದಸ್ಯೆ ಮೈಸೂರಿನ ತನ್ಮಯಿ.ಎಸ್ ಪ್ರಧಾನಿ ಮೋದಿ ಅವರಿಂದ ಟ್ರೋಫಿ ಸ್ವೀಕರಿಸಿದರು. ತನ್ಮಯಿ ಮೈಸೂರಿನ ಶ್ರೀರಾಂಪುರ 2ನೇ ಹಂತ, ಬೆಮಲ್ ಬಡಾವಣೆಯ ಶ್ರೀಮತಿ ರಾಜರಾಜೇಶ್ವರಿ ಹಾಗೂ ಎ.ಜೆ.ಶ್ರೀನಿವಾಸ್ ದಂಪತಿಯ ಪುತ್ರಿ.

ಗಣರಾಜ್ಯೋತ್ಸವದ ಪಥಸಂಚಲದಲ್ಲಿ ಇದೇ ಮೊದಲ ಬಾರಿ ಮಹಿಳೆಯರ ಸಂಖ್ಯೆ ಅಧಿಕವಾಗಿತ್ತು. ಇದರಲ್ಲಿ ನಮ್ಮ ವಿದ್ಯಾರ್ಥಿನಿ ಭಾಗಿಯಾಗಿದ್ದು ಹೆಮ್ಮೆ ತಂದಿದೆ ಎಂದು ಕಾಲೇಜಿನ ಪ್ರಾಧ್ಯಾಪಕ ಡಾ.ರಕ್ಷಿತ್ ಕೃಷ್ಣೆಗೌಡ ಸಂತಸ ವ್ಯಕ್ತಪಡಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

Aquaguard & Kent Sales and Service
Service Charge: 300/-
9901200444

ಮನೆ ಮಾರಾಟಕ್ಕಿದೆ
15x30 EWS
ವಿಜಯನಗರ 2ನೇ ಹಂತ
9945895728

SITE FOR SALE
60x40 North face, Site for sale Srirampura, SP Enclave, near ring road, fully constructed layout, ready for construction. Rs. 1 Cr. *Direct owner.*
Mob: 9964205255

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷಿನ್, ಮೈಕ್ರೋ ಓವನ್, LED, LCD, AC Sales & Service
Contact: Srinivas
9379699229

V-GUARD
10 ವರ್ಷಗಳ ಗ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

2.5 BHK HOME INTERIORS @ ₹ 2.5 Lacs*
Home Space Mart
TALK TO OUR DESIGN TEAM
8197310113

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಪಾರ್ಸಲ್ ಸರ್ವಿಸ್ ಹೋಟೆಲ್‌ಗೆ ಕಿಚನ್ ಹೆಲ್ಪರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. 9 ರಿಂದ 12 ಸಾವಿರ ಸಂಬಳದೊಂದಿಗೆ ಊಟ ವಸತಿ ಉಚಿತ.
7204404170

SITE FOR SALE
36x48
Byrapur New Extension (Thriveninagar) T.Narasipura.
Rs. 2500 per sq.ft. Nego.
No Brokers. Contact:
Mob: 9449067640

Commercial Site for Sale
50x80, East facing site on Gaddige main road, near St. Francis School.
Price: ₹3,300/sft
Call: 9738404534

ಬೇಕಾಗಿದ್ದಾರೆ
P.G ಯಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಊಟ ವಸತಿ ಇರುತ್ತದೆ. ಕಡ್ಡಾಯವಾಗಿ P.G ಯಲ್ಲೇ ಉಳಿಯಬೇಕು.
9535744143
9986622769

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡ್
ವಯಸ್ಸು: 18 ರಿಂದ 45
ವಿದ್ಯಾರ್ಹತೆ: SSLC, PUC
ನಂಜನಗೂಡು, ಕಡಕೊಳ ಇಂಡಸ್ಟ್ರಿಯಲ್ ಏರಿಯ
9611232188
9606959660

SITE FOR SALE
30x40
MUDA Approved, Nirman promoters, nirmaan nagar.mosambayanahalli road, Near Kalpavruksha Raghavendra swamy temple chikkalli, T.Narasipura Road, Mysore.
Rs.1850 per sqft
Call: 9916939424

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಕೊಳ್ಳೇಗಾಲದ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ|| ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ|| ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು.

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ /ಯುವತಿಯರು, ಮಹಿಳೆಯರು, ವಿಧವೆ /ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದು ಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ ಉಚಿತ ಊಟ ವಸತಿಯೊಂದಿಗೆ 16000 ರಿಂದ 20000ವರೆಗೆ
7411304176, 7411304177

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು/ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 12000
8892258814

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

WANTED
Pharmacist (Fresher & only male) for Jayadeva Hospital, K.R.S. Road, Kumbarakoppal, Mysore.
Qualificaton: D.Pharma or B.Pharma. Contact personally with resume. Contact:
Mob: 63642 16261

ಬೋಳು ತಲೆಯ ಸಮಸ್ಯೆಯೇ?
ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethara Road, kuvempunagar, Mysuru
MYSURU 9611028523 MANGALORE 9343142258

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9591815191

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಅಕೌಂಟೆಂಟ್ ಕೆಲಸಕ್ಕಾಗಿ ಬಿ.ಕಾಂ ಎಂ.ಕಾಂ ಓದಿರುವ ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 20000/-
9902754149

SNS ENTERPRISES
- COMPUTER WORK (F) - 3 POST
- COMPUTER TEACHER (F / M) - 3 POST
- OFF BOY (M) -1 POST

PLACE T K LAYOUT MYSORE
Call: 9880604416, 9740301234
Interview date : 29 and 30

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
7619318801, 9035836473

CATERING
SWAADHA SAMPADA
Catering Services
VEG
6363436728

Alpha School of Fashion Design Mysore
Become a Fashion Designer
NCVTE New Delhi approved courses
- 3 MONTHS CERTIFICATION COURSE
- 6 MONTHS DIPLOMA COURSE
- 1 YEAR ADVANCE DIPLOMA COURSE

ADMISSION OPEN
*HOSTEL AND PG AVAILABLE
Alpha School of Fashion Design No.66/2, Manandavad Road, Near Ring Road Signal Junction, Srirampura, Mysore
782 993 7469

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು. ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50–50. ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಕೂಡಲೇ ಸಂಪರ್ಕಿಸಿ
9901080314

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
DATA ENTRY OPERATOR
ಸಂಬಳ 10,000 + 5000 Incentive
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

ಕಾರು ಮಾರಾಟಕ್ಕಿದೆ
* Benz, 2009 model, grey colour / Mysuru Registration / 2nd owner.
* Innova (Red colour), 2006 model, 2nd owner, Mysuru Registration.
* Indigo ECS (Yellow board 2015 model), white colour.

Call: 9972837203

Star Solar Easy EMI
ಕೇವಲ 19,499/- 200 Ltr
7/15 Years Guaranty
Limited Period Offer
Old system Exchange offer available
Manufacturing : Belawadi Industrial Sub,Mysore
9945616293 / 9449966293

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194,9606783264

---

neem BOND PLATINUM®
PLYWOOD & DOORS
@ FACTORY DEPOT RATES
10 YEARS WARRANTY*
9845426862, 9901291267

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

REQUIRED
Experienced TECHNICIAN required for a multi brand franchise to work in the field having knowledge of Washing Machines, Refrigerators, TV, AC & others.
Mob: 98801-51303

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
21–3–2024: ನೇಪಾಳ್ ಮುಕ್ತಿನಾಥ್, ಪಶುಪತಿನಾಥ್, ಕಠ್ಮಂಡು 14–3–2024: ಕಾಶಿ, ಗಯಾ, ಬುದ್ಧ ಗಯಾ, ಪ್ರಯಾಗ್ ರಾಜ್, ಅಯೋಧ್ಯೆ 21–5–24: ಚಾರ್‌ಧಾಮ್ ಯಾತ್ರ, ಕೇದಾರ್‌ನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ 11–7–2024: ಅಮರ್‌ನಾಥ್ ಯಾತ್ರ, 12–2–2024: ಪುರಿ ಜಗನ್ನಾಥ್, ಭುವನೇಶ್ವರ್, ಕೋಣಾರ್ಕ್, ಚಂದ್ರಭಾಗ್ ಬೀಚ್. 21–2–2024: ರಾಜಸ್ಥಾನ 11 ದಿನಗಳ ಪ್ಯಾಕೇಜ್. 15–2–2024: ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ.
9591017782, 9964527782

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಕನ್ನಡ ಮಾತನಾಡಬಲ್ಲವರು)
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ
ಸಂಬಳ: 10000/–
8150005111

ಸೈಟುಗಳು ಮಾರಾಟಕ್ಕಿದೆ ಜೆಪಿನಗರ್ ರಿಂಗ್ ರಸ್ತೆ ಹತ್ತಿರ
20x30 - 17 Lakhs
30x40 - 33 Laksh
ಗೊರೂರು ಬಸ್ ನಿಲ್ದಾಣದ ಹತ್ತಿರ ರಮಾಬಾಯಿನಗರ, ಮೈಸೂರು
DTCP ಅನುಮೋದಿತ (ಕಾರ್ಪೋರೇಶನ್ ಮಿತಿ)
1.5 KMS from JP Nagar Ring Road
8660105902

ಷೇರ್ ಮಾರ್ಕೆಟ್ ಟ್ರೇಡಿಂಗ್
ಮನೆಯಲ್ಲೇ ಕುಳಿತು ಟ್ರೇಡಿಂಗ್ ಮಾಡುವ ಮೂಲಕ ದಿನಕ್ಕೆ 1500 ರಿಂದ 3000 ಸಂಪಾದಿಸಿ Self ಟ್ರೇಡಿಂಗ್ ಮಾಡುವುದನ್ನು ಹೇಳಿಕೊಡುತ್ತೇವೆ.
(Trading Tips Available)
Do Not Depends on One Source of Income
9945667806

ಬೇಕಾಗಿದ್ದಾರೆ
ಸಸ್ಯಾಹಾರಿ ಹೋಟೆಲ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಭಟ್ಟರು–3 ಹುಡುಗಿಯರು ವೈಟರ್–2, ಹೆಲ್ಪರ್‌ಗಳು–3 ಜನ, ಕ್ಲೀನಿಂಗ್‌ಗೆ–3 ಜನ ಬೇಕಾಗಿದ್ದಾರೆ. ಹೆಬ್ಬಾಳು ಸುತ್ತಮುತ್ತ ಇರುವವರಿಗೆ ಮೊದಲು ಆದ್ಯತೆ.
8892088999
9008439555

ಈ ತಕ್ಷಣವೇ ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು, ಟೈಲರುಗಳು ಮತ್ತು ಹೆಲ್ಪರ್‌ಗಳು, ಸೆಕ್ಯೂರಿಟಿ ಗಾರ್ಡುಗಳು ಡ್ರೈವರುಗಳು, ಐಟಿ (ITI) ಆದವರು ಬೇಕಾಗಿದ್ದಾರೆ
ESI & PF, ವಾರದ ರಜೆ ಇರುತ್ತದೆ.
7795285485
8105249880

ಸೈಟುಗಳು ಮಾರಾಟಕ್ಕಿದೆ
ಭೈರವೇಶ್ವರ ನಗರದಲ್ಲಿ ಕಾರ್ನರ್ ನಿವೇಶನ
1) 20x40 ಅಳತೆಯ ನಿವೇಶನ
2) 40x50 ಅಳತೆಯ ನಿವೇಶನ
ಮಾರಾಟಕ್ಕಿದೆ ಮತ್ತು ಮನೆ ಭೋಗ್ಯಕ್ಕೆ ಮತ್ತು ಬಾಡಿಗೆಗೆ ಇದೆ.
ಕೂಡಲೇ ಸಂಪರ್ಕಿಸಿ: ಅಂಕಯ್ಯ:
9611135796

ಬೇಕಾಗಿದ್ದಾರೆ
ಮೈಸೂರಿನ ಬಾಲಕಿಯರ ಹಾಸ್ಟೆಲ್‌ಗೆ ಲೇಡಿ ವಾರ್ಡನ್ ಬೇಕಾಗಿದ್ದಾರೆ. ವಯಸ್ಸು 25 ವರ್ಷ ಮೇಲ್ಪಟ್ಟು ಊಟ ಮತ್ತು ವಸತಿ ಉಚಿತ
ಸಂಬಳ: 12,000/–
ಸ್ಥಳ: ಮೈಸೂರು
ಆಸಕ್ತರು ಸಂಪರ್ಕಿಸಿ
7829244942

SITE FOR SALE
40X60 East Face Paramananda Sagara Layout
40x60 West Face, Sukananda Sagara Layout
8217042841

WANTED
Drivers for Ola, Uber and Company Duty's in Hinkal Mysore
9448550972

ಬೇಕಾಗಿದ್ದಾರೆ
ಗೂಡ್ಸ್ ವೆಹಿಕಲ್‌ಗೆ ಡ್ರೈವರ್ CUM ಹೆಲ್ಪರ್ ಬೇಕಾಗಿದ್ದಾರೆ.
ಸಂಬಳ: 12000 ರಿಂದ 15000 ವಸತಿ ಉಚಿತ.
8884179981

ಬೇಕಾಗಿದ್ದಾರೆ
ಮೈಸೂರಿನ ಬಾಲಕಿಯರ ಹಾಸ್ಟೆಲ್‌ಗೆ ಸೌತ್ ಇಂಡಿಯನ್ ಅಡುಗೆ ಭಟ್ಟರು (ಗಂಡಸರು) ಬೇಕಾಗಿದ್ದಾರೆ.
ಊಟ ಮತ್ತು ವಸತಿ ಉಚಿತ
ಸಂಬಳ: 25,000/–
ಸ್ಥಳ: ಮೈಸೂರು
ಆಸಕ್ತರು ಸಂಪರ್ಕಿಸಿ
9964242430

ಸೈಟುಗಳು ಮಾರಾಟಕ್ಕಿದೆ
30x50, MUDA Approved
ಕುಮಾರಸ್ವಾಮಿ ಲೇಔಟ್ ಚಾಮುಂಡೇಶ್ವರಿ ರೈಲ್ವೆ ಬಡಾವಣೆ & ನಾಗಾರ್ಜುನ ಬಡಾವಣೆ ಪಕ್ಕ ಕೆ.ಆರ್.ಎಸ್. ರೋಡ್ ಮೈಸೂರು
9448752880
9880258383

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಮತ್ತು ಮೈಸೂರಿನಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ ಕಂಪನಿ ಕೆಲಸಕ್ಕೆ ಆಫೀಸ್ ಕೆಲಸಕ್ಕೆ ಮತ್ತು ವರ್ಕ್ ಫ್ರಂ ಹೋಂ ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. ಯಾವುದೇ ಎಜ್ಯುಕೇಷನ್ ಯಾವುದೇ Age ಲಿಮಿಟ್ ಇಲ್ಲ.
Salary (18000 to 38000rs) ಇರುತ್ತದೆ.
ಹೆಚ್ಚಿನ ಮಾಹಿತಿಗೆ ಇಂದೇ ಸಂಪರ್ಕಿಸಿ. H.R. Madam
9886365585
8296278130

ಬೇಕಾಗಿದ್ದಾರೆ
ಅಟೋಮೆಟಿಕ್ ಪ್ರೋಗ್ರಾಂಕಟಿಂಗ್ ಮಿಷಿನ್ ಆಪರೇಟರ್
ಕೂಡಲೇ ಸಂಪರ್ಕಿಸಿ:
ಶ್ರೀ ರಾಜೇಂದ್ರ ಪ್ರಿಂಟರ್ಸ್ & ಪಬ್ಲಿಷರ್ಸ್
12/1, ಈವ್ನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು–570001
9902639593

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. Any Qualification 7th, 10th, PUC, ITI Any Degree (Pass/Fail ಆದವರಿಗೆ ಅರ್ಹತೆಯ ತಕ್ಕಂತೆ ಕೆಲಸ ಸಂಬಳ: 15000/- 45000 (ESI+PF+OT)
9164052361
9740468212

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ
6361740552

WANTED
Electricion and Plumber for Petrol bunk Project works in Mysore and Tumkur
Contact
9448550972

SITES FOR SALE
MUDA APPROVED
30x40 East Face-26 Lakh Near Yadahalli
30x40 West Face -40 Lakh Near Dwaraka Nagara, Srirampura
8296832513

34x50 Site For SALE
Ramabai Nagar Railway Layout Near J.P.Nagar Ring Road
8884133677

FOR RENT
Semi Furnished Room at Lakshmipuram Mysore.
Contact:
9448710689

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್
ಸಂಬಳ: 10000 ರಿಂದ 12000 (12 ಗಂಟೆಗೆ)
ಸ್ಥಳ: ಆಲನಹಳ್ಳಿ, ನಜರ್‌ಬಾದ್, ಹಳೆ ಆರ್‌ಎಂಸಿ, ಬಂಬೂ ಬಜಾರ್, ಬನ್ನಿಮಂಟಪ & ಮೈಸೂರು ಸಿಟಿ,
9741616826
6361740914

Wanted Female graduates and NST or NTTtrained teachers for preschool in bogadi call
6364227636

ಫ್ರಿಡ್ಜ್, ವಾಷಿಂಗ್ ಮಷಿನ್, ಮೈಕ್ರೋ ಓವನ್, LCD, LED Tvs
Doorstep Service
Mob: 9886226672

JOB ALERT
Beautician (F)
Hair Dresser (F/M)
SPA THERAPIST(F)
Area : Water Tank Vijayanagar
6366611103

40x60 Site For SALE
Vijayanagar 4th Stage Near Ring Road
7899214181

OPPERTUNITY
TELECALLERS (FEMALE) & SALES & MARKETING EXECTIVES (1 YEAR EXPERIENCE)
CONTACT:
8884888720
9880505651

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಗೌರಿಶಂಕರನಗರ ಸುತ್ತಮುತ್ತ ಗಣಪತಿಸಚ್ಚಿದಾನಂದ ಆಶ್ರಮದ ಏರಿಯಾದಲ್ಲಿ ಸುತ್ತಮುತ್ತಲಿನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ESI & PF ಸೌಲಭ್ಯವಿರುತ್ತದೆ.
ವಯೋಮಿತಿ : 50 ವರ್ಷ ಮೇಲ್ಪಟ್ಟು
9620667819
9620777819

ಪರ್ಮನೆಂಟ್ ಉದ್ಯೋಗ
ಮೈಸೂರಿನ A.W. Group of ಕಂಪನಿಯಲ್ಲಿ ಖಾಲಿಯಿರುವ ವಿವಿಧ ಪರ್ಮನೆಂಟ್ ಹುದ್ದೆಗಳಿಗೆ 228 ಅಭ್ಯರ್ಥಿಗಳನ್ನು ನೇರ ಸಂದರ್ಶನದೊಂದಿಗೆ ನೇರ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ.
ವಿದ್ಯಾರ್ಹತೆ SSLC, PUC, ITI, Dip., Any Degree
ವಯೋಮಿತಿ: 18 to 31 years
ತಿಂಗಳಿಗೆ: 25000–30500/–
(ಉಚಿತ ಊಟ+ವಸತಿ ಸೌಲಭ್ಯ)
ಸ್ವಾತಿಗೌಡ: 7349699460, 9900163228

MUDA App Sites
JP Nagar Ring Road
30x40 sites
Price - 65 Lakhs
Bank loan upto 75%
Ready for Registration
300 mtrs from JP Nagar Ring Road
8660105902

100% ಕೆಲಸ
ಮೈಸೂರಿನ ಕೈಗಾರಿಕ ಪ್ರದೇಶಗಳಾದ ಹೂಟಗಳ್ಳಿ, ಮೇಟಗಳ್ಳಿ, ನಂಜನಗೂಡು, ಹೆಬ್ಬಾಳ ಮುಂತಾದ ಏರಿಯಾಗಳಲ್ಲಿರುವ ಕಂಪನಿಗಳಿಗೆ Production, Line incharge, Store Dept., Helpers, Packers ಮುಂತಾದ ಹುದ್ದೆಗಳಿಗೆ. 7th, 10th, PUC, ITI Diploma (Pass/Fail ಆದವರು ಬೇಕಾಗಿದ್ದಾರೆ. ಸಂಬಳ: 14000/- 45000 (ESI+PF+OT) ಒಂದಿಗೆ
9513829246
6364103418

Used Commercial Kitchen items available. Freezer, stove and worktable
6363436728

ಬೇಕಾಗಿದ್ದಾರೆ /Wanted
ಕಾಳಿದಾಸ ರಸ್ತೆ, ಮೈಸೂರಿನಲ್ಲಿ ಇರುವ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ಅನುಭವ ಇರುವ (1) ಸೌತ್ ಕುಕ್, (2) ಅಸಿಸ್ಟೆಂಟ್ ಕುಕ್ (ಸಹಾಯಕ್ /ಹೆಲ್ಪರ್) (3) ಕೌಂಟರ್ ಪಾರ್ಸಲ್ 4) ದೋಸಾ ಭಟ್ರು 5) indian all rounder ಡಿಶ್‌ವಾಷ್/ (ಪಾತ್ರೆ ತೊಳೆಯುವ) ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ, ಉತ್ತಮ ಸೌಲಭ್ಯಗಳನ್ನು ಕೊಡಲಾಗುವುದು. ಸಂಪರ್ಕಿಸಿ:
9019916266

FOR SALE
1) 30x50 21 lakhs Kote Road
2) 20x30 30x40 Bogadi Road
3) 2,3 BHK flats in Ramakrishna Nagar
4) 10,20 Guntas Farm land KRS back water attch 19 lakhs starts
5) 20x30 30x40 site Srirampura
6) 40x70 House Vidyaranya Puram
7) 20x30 site Kuvempu Nagar.

PRAKRUTHI PROPERTIES
9538690359, 9035990359

ಕೆಲಸಕ್ಕೆ ಬೇಕಾಗಿದ್ದಾರೆ
ಸ್ಟಾಲ್ ಬಾಯ್ಸ್ ಹಾಗೂ ಸಪ್ಲೈಯರ್‌ಗಳು ನಾನ್‌ವೆಜ್ ಹೋಟೆಲ್‌ಗೆ ಬೇಕಾಗಿದ್ದಾರೆ.
ಕೆ.ಆರ್.ಆಸ್ಪತ್ರೆ ರಸ್ತೆ, ಕೆ.ಟಿ.ಸ್ಟ್ರೀಟ್, ಮೈಸೂರು
8861673397
8970856325

ಫೆ.22ರಂದು ಅಸ್ಪೃಶ್ಯತೆ ನಿವಾರಣೆ ಸಂಬಂಧ ವಿಚಾರ ಸಂಕಿರಣ



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಭಾನುವಾರ ನಡೆದ ದಸಂಸ ಜಿಲ್ಲಾ ಸಮಿತಿ ಸಭೆಯಲ್ಲಿ ದಸಂಸ ಮುಖಂಡ ದೇವಗಳ್ಳಿ ಸೋಮಶೇಖರ್ ಮಾತನಾಡಿದರು.

ಮೈಸೂರು, ಜ.28(ಎಂಟಿವೈ)– ಮೈಸೂರು ಸುತ್ತಮುತ್ತಲೂ ಅಸ್ಪೃಶ್ಯತೆ, ಅಸಮಾನತೆ ಹೆಚ್ಚಾಗುತ್ತಿದ್ದು, ಈ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಫೆ. 22ರಂದು 'ಅಸ್ಪೃಶ್ಯತೆ ಅಳಿಯಲಿ ಮನುಷ್ಯತ್ವ ಉಳಿಯಲಿ' ಆಶಯದಲ್ಲಿ ವಿಚಾರ ಸಂಕಿರಣ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ದಸಂಸ ಮುಖಂಡ ದೇವಗಳ್ಳಿ ಸೋಮಶೇಖರ್ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಭಾನುವಾರ ನಡೆದ ದಸಂಸ ಜಿಲ್ಲಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನ ಸುತ್ತಮುತ್ತಲ ಗ್ರಾಮಗಳಲ್ಲಿ ದಲಿತರಿಗೆ ದೇವಾಲಯಗಳಿಗೆ ಪ್ರವೇಶ ನಿರ್ಬಂಧಿಸಲಾಗುತ್ತಿದೆ. ಕಟಿಂಗ್ ಶಾಪ್, ಹೋಟೆಲ್‌ಗಳಿಗೆ ಪ್ರವೇಶವಿಲ್ಲ. ಬಾಡಿಗೆಗೆ ಮನೆ ನೀಡುತ್ತಿಲ್ಲ. ಅಸ್ಪೃಶ್ಯತಾ ಆಚರಣೆಯೂ ನಾಗರಿಕರು ನಾಚಿಕೆಪಡುವ ಸಂಗತಿಯಾಗಿದೆ. ಎಸ್‌ಸಿ, ಎಸ್‌ಟಿ ಜನರ ಮಧ್ಯೆಯೇ ಅಸ್ಪೃಶ್ಯತೆ ಆಚರಣೆ ಇದೆ. ಉದ್ಬೂರು ಹಾಗೂ ಕೆಂಚಲಗೂಡು ಗ್ರಾಮಗಳಲ್ಲಿ ಎಸ್‌ಸಿ, ಎಸ್‌ಟಿ ಜನರೇ ವಾಸಿಸುತ್ತಿದ್ದು, ಇವರ ನಡುವೆಯೇ ಸಮಾನತೆ ಇಲ್ಲದಿರುವುದು ದುರಾದೃಷ್ಟಕರ ಎಂದು ವಿಷಾದಿಸಿದರು.

ದಸಂಸ ಜಿಲ್ಲಾ ಸಂಚಾಲಕ ಕಾರ್ಯ ಬಸವಣ್ಣ ಮಾತನಾಡಿ, ದಸಂಸ ಮೂಲ ಆಶಯಗಳ ಪುನರ್ ಸ್ಥಾಪಿಸುವ ಮೂಲಕ ಸಮಗ್ರ ಬದಲಾವಣೆ ತರಲು ಸಂಘಟನೆ ಗಟ್ಟಿಗೊಳಿಸಲು ಕಾರ್ಯಕ್ರಮ ರೂಪಿಸುವಂತೆ ಸಲಹೆ ನೀಡಿದರು.

ಇದೇ ವೇಳೆ ಹಿರಿಯ ಮುಖಂಡ ಬೆಲವತ್ತ ರಾಮಚಂದ್ರ ಹಿನಕಲ್ ಸೋಮು, ಉದ್ಬೂರಿನ ರಂಗಸ್ವಾಮಿ, ಗಿರೀಶ್, ನಾಗನಹಳ್ಳಿ ಸ್ವಾಮಿ, ಬಸವಣ್ಣ, ಕಳಸ್ತವಾಡಿ ಸ್ವಾಮಿ ಅವರು ಅಸ್ಪೃಶ್ಯತಾ ಆಚರಣೆ ಬಗ್ಗೆ ಪ್ರಸ್ತಾಪ ಮಾಡಿದರು. ಜಿಲ್ಲಾ ಮುಖಂಡ ತಳೂರು ಪ್ರಸನ್ನ, ಮುರಡಗಳ್ಳಿ ಮಂಜುನಾಥ್, ಸ್ವಾಮಿ, ದಾಸನಕೊಪ್ಪಲು ಬಸವರಾಜು, ಶೆಟ್ಟನಾಯ್ಕನಹಳ್ಳಿ ಜಯರಾಮು, ಅನಗಳ್ಳಿ ವೆಂಕಟೇಶ್, ನಿರಂಜನ್, ನಾಗೇಂದ್ರ ಪುಟ್ಟಸ್ವಾಮಿ ಚಿಕ್ಕಕಾನ್ಯ, ಸೋಮೇಶ್ವರಪುರದ ಮಹದೇವಸ್ವಾಮಿ ಇತರರು ಭಾಗವಹಿಸಿದ್ದರು.

ನಿಗಮ–ಮಂಡಳಿ ಅಧ್ಯಕ್ಷರ ಅಧಿಕಾರಾವಧಿ 2 ವರ್ಷಕ್ಕೆ ಇಳಿಕೆ

ಬೆಂಗಳೂರು: ಲೋಕಸಭೆ ಚುನಾವಣೆಗೂ ಮುನ್ನ ಪಕ್ಷದ ಕಾರ್ಯಕರ್ತರಿಗೆ ವಿವಿಧ ಮಂಡಳಿ ಮತ್ತು ನಿಗಮಗಳ ಅಧ್ಯಕ್ಷ ಸ್ಥಾನ ನೀಡುವುದಾಗಿ ಭರವಸೆ ನೀಡಿದ್ದ ಕರ್ನಾಟಕ ಕಾಂಗ್ರೆಸ್ ಸರ್ಕಾರ ನಿಗಮ– ಮಂಡಳಿಗಳ ಅಧ್ಯಕ್ಷರ ಅವಧಿಯನ್ನು ಎರಡು ವರ್ಷಕ್ಕೆ ಇಳಿಸಿದೆ. ಈ ಮೂಲಕ ಹೆಚ್ಚು ಹೆಚ್ಚು ಪಕ್ಷದ ಕಾರ್ಯಕರ್ತರನ್ನು ಸೇರಿಸಿಕೊಂಡು ಅವರ ಕಾರ್ಯಕ್ಕೆ ತಕ್ಕ ಪ್ರತಿಫಲ ಸಿಗುವಂತೆ ನೋಡಿಕೊಳ್ಳಬೇಕು ಎಂದು ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಪಕ್ಷಕ್ಕಾಗಿ ಹಲವು ವರ್ಷಗಳಿಂದ ಶ್ರಮಿಸಿದ ಎಲ್ಲ ಕಾರ್ಯಕರ್ತರನ್ನು ಗುರುತಿಸಿ ಪುರಸ್ಕರಿಸಬೇಕು ಎಂಬ ಉದ್ದೇಶದಿಂದ ಅಧಿಕಾರಾವಧಿಯನ್ನು ಎರಡು ವರ್ಷಕ್ಕೆ ಇಳಿಸಲಾಗಿದೆ.

ಇದು ಸಿದ್ದರಾಮಯ್ಯ ಅಥವಾ ಡಿ.ಕೆ. ಶಿವಕುಮಾರ್ ಅವರ ಸೂತ್ರವಲ್ಲ. ಹೈಕಮಾಂಡ್ ಸೂತ್ರವಾಗಿದೆ. ಪಕ್ಷದ ಅನೇಕ ಕಾರ್ಯಕರ್ತರು ಪಕ್ಷಕ್ಕಾಗಿ ದುಡಿದಿದ್ದಾರೆ ಮತ್ತು ಅವರಿಗೆ ಪ್ರತಿಫಲ ನೀಡುವುದು ಪಕ್ಷದ ಜವಾಬ್ದಾರಿಯಾಗಿದೆ ಎಂದು ಅವರು ಹೇಳಿದರು.

ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಎಲ್ಲಾ 28 ಸೀಟುಗಳನ್ನು ತಮ್ಮ ಪಕ್ಷ ಗೆಲ್ಲಲಿದೆ ಎಂಬ ಬಿಜೆಪಿ ನಾಯಕರ ಹೇಳಿಕೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕಳೆದ ವರ್ಷ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ 224 ಸೀಟುಗಳನ್ನು ಗೆಲ್ಲುತ್ತೇವೆ ಎಂದು ಬಿಜೆಪಿ ಹೇಳುತ್ತಿತ್ತು ಮತ್ತು ಏನಾಯಿತು ಎಂಬುದು ಎಲ್ಲರಿಗೂ ತಿಳಿದಿದೆ ಎಂದರು.

ಸಾಲ ಕೊಟ್ಟವರ ಅರ್ಭಟಕ್ಕೆ ನಲುಗಿದ ಇಡೀ ಕುಟುಂಬ ನಾಪತ್ತೆ

● ಮೂರು ವರ್ಷದ ಮಗು, ತಂದೆ–ತಾಯಿ, ಪತ್ನಿಯೊಂದಿಗೆ ನಾಪತ್ತೆಯಾಗಿರುವ ಬಿಸಿನೆಸ್‌ಮನ್ ● ಇದಕ್ಕೂ ಮುನ್ನ ಸ್ನೇಹಿತನಿಗೆ ವಾಯ್ಸ್ ಮೆಸೇಜ್; ಸಾಲ ಕೊಟ್ಟವರ ಕಾಟ ತಾಳಲಾರದೇ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಸಂದೇಶ

ಮೈಸೂರು, ಜ.28(ಬಿಎಲ್‌ಯು)– ಸಾಲ ಕೊಟ್ಟವರ ಅರ್ಭಟಕ್ಕೆ ನಲುಗಿದ ಮೈಸೂರಿನ ಕುಟುಂಬವೊಂದು ನಾಪತ್ತೆಯಾಗಿರುವುದು ತಡವಾಗಿ ಬೆಳಕಿಗೆ ಬಂದಿದೆ. ಸಾಲ ಕೊಟ್ಟ ಲೇವಾದೇವಿದಾರರ ದರ್ಪಕ್ಕೆ ಈ ಪ್ರಕರಣ ಒಂದು ಸ್ಪಷ್ಟ ನಿದರ್ಶನವಾಗಿದೆ.



ನಾಪತ್ತೆಯಾಗಿರುವ ಮಹೇಶ್ ಮತ್ತು ಕುಟುಂಬ

ನಗರದ ಕೆ.ಜಿ.ಕೊಪ್ಪಲು ನಿವಾಸಿ ಮಹೇಶ್ ಮಧ್ಯವರ್ತಿಯಾಗಿ ಕೆಲವರಿಗೆ ಸಾಲ ಕೊಡಿಸಿದ್ದು, ಸಾಲ ಕೊಟ್ಟವರು ಇವರನ್ನು ಪೀಡಿಸಿದ್ದಾರೆ. ಅತ್ತ ಸಾಲ ಪಡೆದವರು ಸಕಾಲದಲ್ಲಿ ಹಣ ನೀಡಿಲ್ಲ. ಇದರಿಂದ ದಿಕ್ಕು ತೋಚದ ಮಹೇಶ್(35), ತನ್ನ ಪತ್ನಿ ಭವಾನಿ(28) ಮೂರು ವರ್ಷದ ಮಗಳು ಪ್ರೇಕ್ಷಾ, ತಂದೆ ಮಹದೇವಪ್ಪ(65) ಹಾಗೂ ತಾಯಿ ಸುಮಿತ್ರಾ(55) ಜೊತೆ ಜನವರಿ 20ರಂದು ನಾಪತ್ತೆಯಾಗಿದ್ದಾರೆ.

ನಾಪತ್ತೆಗೂ ಮುನ್ನ ಮಹೇಶ್, ತನ್ನ ಸ್ನೇಹಿತ ದರ್ಶನ್‌ಗೆ ವಾಯ್ಸ್ ಮೆಸೇಜ್ ಕಳುಹಿಸಿದ್ದಾರೆ. 'ಮಧ್ಯವರ್ತಿಯಾಗಿ ಸಾಲ ಕೊಡಿಸಿದ್ದು, ಈಗ ಸಾಲಗಾರರು ನನ್ನ ಪೀಡಿಸುತ್ತಿದ್ದಾರೆ. ನಾವು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ' ವಾಯ್ಸ್ ಮೆಸೇಜ್‌ನಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಮಹೇಶ್ ಅವರ ಬಾವ, ಬ್ಯಾಂಕ್ ಉದ್ಯೋಗಿ ಜಗದೀಶ್ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮರಂಚ್ಯನಹುಂಡಿ ಗ್ರಾಮದ ಮಹದೇವಪ್ಪನವರ ಮಗ ಮಹೇಶ್ ಹಾಗೂ ನನ್ನ ತಂಗಿ ಭವಾನಿಗೆ 5 ವರ್ಷದ ಹಿಂದೆ ವಿವಾಹ ಮಾಡಿದ್ದು, ದಂಪತಿಗೆ ಮೂರು ವರ್ಷದ ಮಗಳಿದ್ದಾಳೆ. ಪತ್ನಿ, ಮಗುವಿನೊಂದಿಗೆ ಕೆ.ಜಿ.ಕೊಪ್ಪಲಿನಲ್ಲಿ ವಾಸವಿದ್ದ ಬಾವ ಮಹೇಶ್, ಇತ್ತೀಚೆಗೆ ಮಾರ್ಕೆಟಿಂಗ್ ಬಿಸಿನೆಸ್ ಮಾಡುವುದಾಗಿ 30 ಲಕ್ಷ ರೂ. ಸಾಲ ಮಾಡಿಕೊಂಡಿದ್ದರು. ಈ ವಿಚಾರವಾಗಿ ನಾನು ಬುದ್ಧಿ ಹೇಳಿದ ಬಳಿಕ ಅವರೊಂದಿಗೆ ಹೆಚ್ಚು ಸಂಪರ್ಕದಲ್ಲಿರಲಿಲ್ಲ.

ಈ ನಡುವೆ ಜ.20ರಂದು ಊರಿನಲ್ಲಿದ್ದ ತಂದೆ, ತಾಯಿ ಹಾಗೂ ಮಗುವನ್ನು ಕೆ.ಜಿ.ಕೊಪ್ಪಲಿನ ಬಾಡಿಗೆ ಮನೆಗೆ ಕರೆಸಿಕೊಂಡು, ಊರಿನ ನೆರೆಮನೆಯಲ್ಲಿರುವ ಸ್ನೇಹಿತ ದರ್ಶನ್ ಮೊಬೈಲ್‌ಗೆ 'ನಾನು ಮಧ್ಯವರ್ತಿಯಾಗಿ ಕೆಲವು ಸಾಲ ಕೊಡಿಸಿದ್ದು, ಈಗ ಸಾಲಗಾರರು ನನ್ನನ್ನು ಪೀಡಿಸುತ್ತಿದ್ದಾರೆ. ಆದ್ದರಿಂದ ನಾವುಗಳು ಕುಟುಂಬ ಸಮೇತರಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ' ಎಂದು ವಾಯ್ಸ್ ನೋಟ್ ಕಳುಹಿಸಿದ ನಂತರ ಮೊಬೈಲ್ ಸ್ವಿಚ್ ಆಫ್ ಮಾಡಿದ್ದಾರೆ.

ದರ್ಶನ್ ನನಗೆ ಕರೆ ಮಾಡಿ ವಿಷಯ ತಿಳಿಸಿದ ನಂತರ ಕೆ.ಜಿ.ಕೊಪ್ಪಲಿನ ಮನೆ ಬಳಿ ಹೋದಾಗ ಮನೆಗೆ ಬೀಗ ಹಾಕಿದ್ದರು. ನೆರೆಹೊರೆಯವರು ಹಾಗೂ ಸಂಬಂಧಿಕರನ್ನು ವಿಚಾರಿಸಿ, ಎಲ್ಲಾ ಕಡೆ ಹುಡುಕಾಟ ನಡೆಸಿದರೂ ಯಾರೂ ಪತ್ತೆಯಾಗಿಲ್ಲ ಎಂದು ಜಗದೀಶ್, ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಮಹೇಶ್ ತನ್ನ ಕುಟುಂಬದವರ ಜೊತೆ ಎಂಟು ದಿನಗಳ ಹಿಂದೆ ನಾಪತ್ತೆಯಾಗಿದ್ದು, ಈ ತನಕ ಆತನ ಸುಳಿವು ಸಿಕ್ಕಿಲ್ಲ. ಮಹೇಶ್ ಮೊಬೈಲ್ ಆನ್ ಮಾಡಿದರೆ ಟವರ್ ಲೋಕೇಷನ್ ಆಧಾರದ ಮೇಲೆ ಪತ್ತೆ ಮಾಡುವ ನಿಟ್ಟಿನಲ್ಲಿ ಪೊಲೀಸರು ಕಾರ್ಯಪ್ರವೃತ್ತರಾಗಿದ್ದಾರೆ. ಅಲ್ಲದೆ ಇತರೆ ವಿಧಾನಗಳಿಂದಲೂ ಪತ್ತೆ ಕಾರ್ಯ ಕೈಗೊಂಡಿದ್ದಾರೆ. ಆದರೆ ಈವರೆಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ ಎಂದು ತಿಳಿದುಬಂದಿದೆ.

ಯಾವುದೇ ಲೈಸನ್ಸ್ ಪಡೆಯದೆ ಬಹಳಷ್ಟು ಲೇವಾದೇವಿದಾರರು ದುಬಾರಿ ಬಡ್ಡಿಗೆ ಸಾಲ ಕೊಡುತ್ತಿದ್ದಾರೆ. ಇನ್ನು ಕೆಲವು ಲೇವಾದೇವಿದಾರರು ಮೀಟರ್ ಬಡ್ಡಿ ದಂಧೆ ನಡೆಸುತ್ತಿದ್ದಾರೆ. ಇವರಿಗೆ ಪೊಲೀಸರ ಬಗ್ಗೆ ಸ್ವಲ್ಪವೂ ಭಯವಿಲ್ಲ. ಇದರ ನಡುವೆ ಮಹೇಶ್ ಅವರಂತೆ ಮಧ್ಯವರ್ತಿಗಳಾಗಿ ಬೇರೆಯವರಿಗೆ ಸಾಲ ಕೊಡಿಸಿ, ಸಂಕಷ್ಟಕ್ಕೆ ಸಿಲುಕುವವರೂ ಬಹಳಷ್ಟು ಜನರಿದ್ದಾರೆ. ಹಾಗಾಗಿ ಜಾಗರೂಕತೆಯಿಂದ ಅಧಿಕೃತವಾಗಿ ಹಣದ ವ್ಯವಹಾರ ನಡೆಸುವುದು ಒಳ್ಳೆಯದು.

ಅಲೆಮಾರಿಗಳು ಯಾವ ಧರ್ಮಕ್ಕೂ ಮತಾಂತರಗೊಳ್ಳಬೇಡಿ

● ಹಂಪಿ ಕನ್ನಡ ವಿವಿ ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಕೆ.ಎಂ.ಮೇತ್ರಿ ಕಿವಿಮಾತು ● ಸಣ್ಣ ಸಣ್ಣ ನಿರ್ಲಕ್ಷಿತ ಸಮುದಾಯಕ್ಕೆ ಮೀಸಲಾತಿಗೆ ಅಡ್ಡಗಾಲು; ಬೇಸರ

ಮೈಸೂರು, ಜ.28(ಎಸ್‌ಪಿಎನ್)– ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದಲ್ಲಿ ಹೆಚ್ಚಿನ ಅವಿದ್ಯಾವಂತರಿದ್ದು, ಈ ಸಮುದಾಯದ ಮುಖಂಡರು ಯಾವುದೇ ಧರ್ಮಕ್ಕೂ ಮತಾಂತರವಾಗಲು ಪ್ರೋತ್ಸಾಹಿಸಬೇಡಿ. ಇದರಿಂದ ಈ ಸಮುದಾಯಕ್ಕೆ ಯಾವುದೇ ಪ್ರಯೋಜನವಿಲ್ಲ ಎಂದು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಕೆ.ಎಂ.ಮೇತ್ರಿ ಸಲಹೆ ನೀಡಿದರು.



ರಾಜ್ಯಮಟ್ಟದ ಅಲೆಮಾರಿ ಮತ್ತು ಅರೆ ಅಲೆಮಾರಿ ಸಾಹಿತ್ಯ, ಸಾಂಸ್ಕೃತಿಕ ಕಲೋತ್ಸವ' ಕಾರ್ಯಕ್ರಮದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಕೆ.ಎಂ.ಮೇತ್ರಿ ಸಮಾರಂಭದಲ್ಲಿ ಮಾತನಾಡಿದರು.

ಮೈಸೂರು ಪುರಭವನದಲ್ಲಿ ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ(ಹಿಂದುಳಿದ ವರ್ಗಗಳ ಪ್ರವರ್ಗ–1)ಜನಾಂಗಗಳ ಒಕ್ಕೂಟದ ವತಿಯಿಂದ ರಾಜ್ಯಮಟ್ಟದ ಅಲೆಮಾರಿ ಮತ್ತು ಅರೆ ಅಲೆಮಾರಿ ಸಾಹಿತ್ಯ, ಸಾಂಸ್ಕೃತಿಕ ಕಲೋತ್ಸವ' ಕಾರ್ಯಕ್ರಮ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

ಎಲ್ಲಾ ಜನಾಂಗದಲ್ಲೂ ಉತ್ತಮ ಕಾವ್ಯಗಳಿವೆ. ಆದರೆ, ಭಾರತದಲ್ಲಿ ವೇದ, ಉಪನಿಷತ್‌ಗಳೇ ಶ್ರೇಷ್ಠ ಸಾಹಿತ್ಯ ಎನ್ನಲಾಗುತ್ತಿದೆ. ಹಾಗಾದರೆ, ಈ ಸಮುದಾಯಲ್ಲಿನ ಭಾಷೆ, ಸಾಂಸ್ಕೃತಿಕ ಹಿನ್ನೆಲೆ, ಆಚರಣೆಗಳನ್ನು ಏನು ಮಾಡಬೇಕು ಎಂದು ಪ್ರಶ್ನಿಸಿದ ಅವರು ಇಂತಹ ಸಮುದಾಯಗಳಿಗೆ ನ್ಯಾಯ ಒದಗಿಸಲು 1871ರಲ್ಲಿ ಮೊದಲ ಬಾರಿಗೆ ಬ್ರಿಟಿಷ್ ಆಳ್ವಿಕೆಯಲ್ಲಿ ಜಣಗಣತಿ ಮಾಡಲಾಯಿತು. ನಂತರ 2ನೇ ಮಹಾಯುದ್ಧದ ಸಂದರ್ಭದಲ್ಲಿ ಜಾತಿಗಣತಿ ಆರಂಭಿಸಬೇಕಿತ್ತು. ಆದರೆ, ತಾಂತ್ರಿಕ ಕಾರಣಗಳಿಂದ ಈ ಗಣತಿಯನ್ನು ಮುಂದೂಡಲಾಗಿತ್ತು. ತದನಂತರ 2021ರಲ್ಲಿ ಕೋವಿಡ್ ಕಾರಣಕ್ಕೆ ಜಾತಿಗಣತಿ ಮುಂದೂಡಲಾಗಿದೆ ಎಂದು ತಿಳಿಸಿದರು.

ಬ್ರಿಟಿಷ್ ಆಳ್ವಿಕೆಯಲ್ಲಿ 1936ರಲ್ಲಿ ಶೋಷಿತ, ಅವಿದ್ಯಾವಂತರಿಗೆ ಸರ್ಕಾರಿ ಸವಲತ್ತು ನೀಡುವ ಉದ್ದೇಶದಿಂದ ಬ್ರಿಟಿಷರು, ಅನುಸೂಚಿತ ಜಾತಿ(ಎಸ್ಸಿ) ಹಾಗೂ ಅನುಸೂಚಿತ ಪಂಗಡ(ಎಸ್ಟಿ)ಗಳ ಪಟ್ಟಿ ತಯಾರಿಸಿ, ಮೀಸಲಾತಿ ಜಾರಿ ಗೊಳಿಸಿದ್ದರು. ಈ ಪಟ್ಟಿಯಲ್ಲಿ ಅಲೆ ಮಾರಿ ಸಮುದಾಯವನ್ನು ಹೊರಗಿಟ್ಟು ಮೀಸಲಾತಿ ಪಟ್ಟಿ ತಯಾರಿಸಿದ್ದು ವಿಶೇಷ ಎಂದು ತಿಳಿಸಿದರು.

ಡೊಂಬಿದಾಸ, ಶಿಳ್ಳೆಕ್ಯಾತ, ಕಿಂದರ ಜೋಗಿ, ಹಂಡಿಜೋಗಿ, ಜೇನುಕುರುಬ, ಬೆಟ್ಟ ಕುರುಬ ಸೇರಿದಂತೆ ಸಣ್ಣ ಸಮುದಾಯಗಳನ್ನು ಎಸ್ಸಿ–ಎಸ್ಟಿಗೆ ಸೇರಿಸಲು ಹಲವು ವರ್ಷಗಳೇ ಹೋರಾಟ ನಡೆದಿವೆ. ಅದು ಈಗ ಸಫಲವಾಗುತ್ತಿವೆ. ಅಲೆಮಾರಿ, ಆದಿವಾಸಿಗಳು ನಿರ್ಲಕ್ಷ್ಯಕ್ಕೆ ಒಳಗಾದ 46 ಸಮುದಾಯಗಳ ಪಟ್ಟಿ ಮಾಡಿ, ಎಸ್ಸಿ,ಎಸ್ಟಿ,ಒಬಿಸಿ ಪಟ್ಟಿಯಲ್ಲಿ ಸ್ಥಾನ ಕಲ್ಪಿಸಲಾಗಿದೆ. ಅಲ್ಲದೆ, ಈ ಸಮುದಾಯದ ಏಳಿಗೆಗೆ ಪ್ರತ್ಯೇಕ ಸಚಿವಾಲಯವನ್ನೇ ತೆರೆದಿರುವುದು ಉತ್ತಮ ಸಂಗತಿ. ಆದರೆ, ಆಡಳಿತ ರೂಢ ಕಾಂಗ್ರೆಸ್, ಬಿಜೆಪಿ ಸೇರಿದಂತೆ ಯಾವ ಪಕ್ಷಗಳು ಈ ಸಮುದಾಯಗಳನ್ನು ಮುಖವಾಹಿನಿಗೆ ತರಲು ಪ್ರಯತ್ನಿಸುತ್ತಿಲ್ಲ ಎಂದು ಬೇಸರ ಹೊರಹಾಕಿದರು.

ತಮ್ಮತನ ಉಳಿಸಿಕೊಳ್ಳಲು ಬಿಡಿ: ಹಾಗಾಗಿ ಅಲೆಮಾರಿ, ಆದಿವಾಸಿ ಸಮುದಾಯಗಳು ಯಾರ ಮಾತಿಗೂ ಕಟ್ಟು ಬಿದ್ದು, ಮತಾಂತರಗೊಳ್ಳದೇ ತಮ್ಮತನವನ್ನು ಉಳಿಸಿಕೊಂಡು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳುವಂತೆ ಸಲಹೆ ನೀಡಿದರು. ಮುಖಂಡರು ಸಹ ಇಂತಹ ಕಾರ್ಯಗಳಿಗೆ ಪ್ರೋತ್ಸಾಹಿಸಬೇಡಿ ಎಂದು ಮನವಿ ಮಾಡಿದರು.

ಹಾಗಾಗಿಯೇ 2006ರಿಂದ 2008ರವರೆಗೆ ಶೋಷಿತ, ನಿರ್ಲಕ್ಷ್ಯಕ್ಕೆ ಒಳಗಾದ ಸಮುದಾಯದ ಯುವಕರೇ ಆ ಸಮುದಾಯದಲ್ಲಿನ ನೋವು, ಸಾಂಸ್ಕೃತಿಕ ಚಟುವಟಿಕೆಗಳನ್ನು ಪುಸ್ತಕ ರೂಪದಲ್ಲಿ ತರಲು ಪ್ರೋತ್ಸಾಹಿಸಿ, 22 ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಅಲ್ಲದೆ, ಹರ್ಷಗುಪ್ತ ಮೈಸೂರು ಜಿಲ್ಲಾಧಿಕಾರಿಗಳಾಗಿದ್ದಾಗ ಏಕಲವ್ಯ ನಗರದ ನಿವಾಸಿಗಳಿಗೆ ಸ್ವಂತ ಸೂರು ಕಲ್ಪಿಸಲು ಮುಂದಾಗಿದ್ದ ಸಂದರ್ಭವನ್ನು ವಿವರಿಸಿದರು. ಈ ವೇಳೆ ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಳ ಒಕ್ಕೂಟದ ಅಧ್ಯಕ್ಷ ಎಂ.ಪ್ರಕಾಶ್, ಬಿ.ಕೆ.ನಾರಾಯಣ, ಕೆ.ರವೀಂದ್ರ ಶೆಟ್ಟಿ ಉಳಿದೊಟ್ಟು, ಪ್ರತಾಪ ಕುಮಾರ್ ಸಿ.ಜೋಗಿ, ಜಿ.ವಿ.ಚಂದ್ರಯ್ಯ, ನಾರಾಯಣ ದಾವಳ, ಶಿವರಾಮು ರಘು ಬಳೆಗಾರ ಸೇರಿದಂತೆ ಇತರೆ ಮುಖಂಡರಿದ್ದರು.

ಅಲೆಮಾರಿ ಸಮುದಾಯಗಳ ಎಸ್‌ಟಿಗೆ ಸೇರಿಸಲು ಅಖಿಲ ಕರ್ನಾಟಕ ಜೋಗಿ ಕ್ಷೇಮಾಭಿವೃದ್ಧಿ ಮಹಾಮಂಡಲ ಆಗ್ರಹ

ಮೈಸೂರು, ಜ.28(ಎಂಟಿವೈ)– ಅಲೆಮಾರಿ ಸಮುದಾಯಗಳನ್ನು ಶ್ರೀನಿವಾಸಗೌಡ ಕುಲಶಾಸ್ತ್ರೀಯ ಅಧ್ಯಯನದ ವರದಿ ಶಿಫಾರಸ್ಸಿನ ಮೇರೆಗೆ ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂದು ಅಖಿಲ ಕರ್ನಾಟಕ ಜೋಗಿ ಕ್ಷೇಮಾಭಿವೃದ್ಧಿ ಮಹಾ ಮಂಡಲದ ರಾಜ್ಯಾಧ್ಯಕ್ಷ ಎಸ್.ಡಿ. ಶಿವಾಜಿ ಮಧುಕರ್ ಒತ್ತಾಯಿಸಿದ್ದಾರೆ.



ಮೈಸೂರಿನ ಪುರಭವನದಲ್ಲಿ ಭಾನುವಾರ ಕರ್ನಾಟಕ ರಾಜ್ಯ ಅಲೆಮಾರಿ ಮತು ಅರೆ ಅಲೆಮಾರಿ ಜನಾಂಗದ ರಾಜ್ಯ ಮಟ್ಟದ ಸಾಹಿತ್ಯ ಸಾಂಸ್ಕೃತಿಕ ಕಲೋತ್ಸವ ಜರುಗಿತು.

ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಒಕ್ಕೂಟ ಮೈಸೂರಿನ ಪುರಭವನದಲ್ಲಿ ಭಾನುವಾರ ಆಯೋಜಿಸಿದ್ದ ಕರ್ನಾಟಕ ರಾಜ್ಯ ಅಲೆಮಾರಿ ಮತು ಅರೆ ಅಲೆಮಾರಿ ಜನಾಂಗದ ರಾಜ್ಯ ಮಟ್ಟದ ಸಾಹಿತ್ಯ ಸಾಂಸ್ಕೃತಿಕ ಕಲೋತ್ಸವ, ಪ್ರತಿಭಾ ಪುರಸ್ಕಾರ, ಸಂತ ಸಂದೇಶ, ವಿಚಾರಗೋಷ್ಠಿ, ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಅಲೆಮಾರಿ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸುವಂತೆ ಸರ್ಕಾರಕ್ಕೆ ವರದಿ ಸಲ್ಲಿಸಿ 13 ವರ್ಷ ಕಳೆದಿದೆ. ರಾಜಕೀಯ ಬಲ ಇಲ್ಲದ ಕಾರಣ ವರದಿ ಕಾರ್ಯರೂಪಕ್ಕೆ ಬಂದಿಲ್ಲ. ಅಲೆಮಾರಿಗಳು ಒಂದು ಪ್ರದೇಶದಲ್ಲಿ ನೆಲೆಯೂರದೇ ವಿವಿಧೆಡೆ ಅಲೆಯುತ್ತ ಜೀವನ ನಡೆಸುವುದರಿಂದ ಶೇ.99ರಷ್ಟು ಜನರು ಅಕ್ಷರದಿಂದ ವಂಚಿತರಾಗಿದ್ದಾರೆ. ಇದರಿಂದ ಅಭಿವೃದ್ಧಿಗೆ ಹಿನ್ನೆಡೆಯಾಗಿದೆ. ಈ ಸಮಸ್ಯೆಯನ್ನು ಅರಿತು ಅಲೆಮಾರಿಗಳ ವಿದ್ಯಾಲಯ ಆರಂಭಿಸಿ 450ಕ್ಕೂ ಹೆಚ್ಚು ಮಕ್ಕಳಿಗೆ ವಸತಿ ಸಹಿತ ಉಚಿತ ಶಿಕ್ಷಣ ನೀಡಲಾಗುತ್ತಿದೆ ಎಂದರು.

ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ವಿಭಾಗದ ಮೋರ್ಚಾ ಅಧ್ಯಕ್ಷ ರಘು ಆರ್.ಕೌಟಿಲ್ಯ ಮಾತನಾಡಿ, ಹಿಂದುಳಿದ ವರ್ಗಗಳ ಪ್ರ.ವರ್ಗ–1ರಲ್ಲಿ 95 ಜಾತಿಗಳಿವೆ. ಇದರಲ್ಲಿ 46 ಅಲೆಮಾರಿ, ಅರೆ ಅಲೆಮಾರಿ ಜಾತಿಗಳಿವೆ. ಇವರು ಶೇ.4ರಷ್ಟು ಮೀಸಲಾತಿಗೆ ಉಳಿದ ಸಮಾಜಗಳೊಂದಿಗೆ ಹೋರಾಟ ನಡೆಸ ಬೇಕಾದ ಅನಿವಾರ್ಯತೆ ಎದುರಾಗಿದೆ. ಈ ಸಮಾಜಗಳಿಗೆ ನ್ಯಾಯಯುತ ಹಕ್ಕು ಕಲ್ಪಿಸುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಮುಖಂಡ ತುಕಾರಾಮ್ ಸೂರವಿ, ತಾಯಪ್ಪ ಯಾದವ್, ಬೆಂಗಳೂರು ಗ್ರಾಮಾಂತರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ನಿರ್ದೇಶಕ ಬಿ.ಕೆ ನಾರಾಯಣಸ್ವಾಮಿ ಮಾತನಾಡಿದರು.

ಚಿತ್ರದುರ್ಗ ಮುರುಘಾ ಮಠದ ಶ್ರೀ ಬಸವಪ್ರಭು ಸ್ವಾಮೀಜಿ, ನೆಲಮಂಗಲದ ವನಕಲ್ಲು ಮಲ್ಲೇಶ್ವರ ಮಹಾಸಂಸ್ಥಾನ ಮಠದ ಡಾ.ಬಸವ ರಮಾನಂದ ಸ್ವಾಮೀಜಿ, ಕೋಡಿಹಳ್ಳಿಯ ಬಸವ ಬೃಂಗೇಶ್ವರ ಮಹಾಮಠದ ಬಸವಬೃಂಗೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಒಕ್ಕೂಟದ ಅಧ್ಯಕ್ಷ ಕೆ.ರವೀಂದ್ರ ಶೆಟ್ಟಿ, ಅಧ್ಯಕ್ಷ ಪ್ರಕಾಶ್ ಇತರರು ಭಾಗವಹಿಸಿದ್ದರು.

ವಿದೇಶಗಳಲ್ಲಿ ಯೋಗಕ್ಕೆ ಅತ್ಯಂತ ಹೆಚ್ಚಿನ ಮಹತ್ವವಿದೆ



ಯೋಗ ಕ್ಷೇತ್ರದ ಸಾಧಕರಿಗೆ ವಿದೇಶಿ ಯೋಗಪಟು ಡೇವಿಡ್, ಅರ್ಥರ್ ಹಾಗೂ ಸಮಾಜ ಸೇವಕ ರಘು ಅವರನ್ನು ಗೌರವಿಸಲಾಯಿತು.

ಮೈಸೂರು, ಜ.28(ಎಸ್‌ಪಿಎನ್)– ಜೀವನದಲ್ಲಿ ನಾವು ನೈತಿಕತೆ ರೂಢಿಸಿಕೊಳ್ಳಬೇಕಾದರೆ ಯೋಗ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಆಯುರ್ವೇದ ತಜ್ಞ ಡಾ.ಎ.ಎಸ್.ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಮೈಸೂರು ಹೊಸಕೇರಿಯ ಮೈಸೂರು ಅಕಾಡೆಮಿ ಆಫ್ ಯೋಗ ಸಭಾಂಗಣದಲ್ಲಿ ಮೈಸೂರು ಅಕಾಡೆಮಿ ಆಫ್ ಯೋಗ ಸಂಸ್ಥೆಯ 38ನೇ ವಾರ್ಷಿಕೋತ್ಸವ ಹಾಗೂ ಯೋಗ ಕ್ಷೇತ್ರದ ಸಾಧಕರಿಗೆ ಸನ್ಮಾನಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪರೋಪಕಾರಕ್ಕಾಗಿ ಈ ದೇಹ ಎಂಬಂತೆ ನಮ್ಮನ್ನು ನಾವು ಸಮಾಜಕ್ಕೆ ಅರ್ಪಣೆ ಮಾಡಿಕೊಳ್ಳಬೇಕು. ಪ್ರಕೃತಿಯನ್ನು ನಾವು ಪ್ರೀತಿಸಿದರೆ, ಮಾನವೀಯ ಮೌಲ್ಯಗಳು ನಮ್ಮನ್ನು ಅಪ್ಪಿಕೊಳ್ಳುತ್ತವೆ. ಅಲ್ಲದೆ, ವಿಶ್ವಸಂಸ್ಥೆ ಅಂತರರಾಷ್ಟ್ರೀಯ ಯೋಗಾ ದಿನಾಚರಣೆ ಘೋಷಣೆ ಮಾಡಿದ್ದರ ಫಲವಾಗಿ, ಜಗತ್ತಿನ ಎಲ್ಲಾ ದೇಶಗಳು ಯೋಗದ ಮಹತ್ವವನ್ನು ಅರಿಯ ತೊಡಗಿವೆ. ವಿದೇಶದಲ್ಲಿ ಯೋಗ ತರಗತಿಗಳಿಗೆ ಹೆಚ್ಚಿನ ಮಹತ್ವವಿದೆ ಎಂದು ತಿಳಿಸಿದರು.

ಯೋಗ ಈ ಮಟ್ಟಕ್ಕೆ ಹೆಸರುವಾಸಿಯಾಗಲು ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಸಲ್ಲುತ್ತದೆ. ಹಾಗಾಗಿ ನಮ್ಮ ನೆಲದ ಯೋಗವನ್ನು ಪ್ರತಿಯೊಬ್ಬರು ಕಲಿತು, ಆರೋಗ್ಯವಂತ ಸಮಾಜ ಸೃಷ್ಟಿಸಲು ಸಹಕರಿಸಬೇಕು ಎಂದು ಸಲಹೆ ನೀಡಿದರು. ಈ ವೇಳೆ ಯೋಗಪಟು ಡೇವಿಡ್ ಅವರು ಒಂದು ಕೈಯ ಇಲ್ಲದಿದ್ದರೂ ಹಲವು ಯೋಗಾಸನದ ಭಂಗಿಗಳನ್ನು ಪ್ರದರ್ಶಿಸಿದರು.

ಈ ವೇಳೆ ವಿದೇಶಿ ಯೋಗಪಟು ಡೇವಿಡ್, ಅರ್ಥರ್ ಹಾಗೂ ಸಮಾಜ ಸೇವಕ ರಘು ಅವರನ್ನು ಗೌರವಿಸಲಾಯಿತು. ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಟಿ. ಜಲೇಂದ್ರಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಮೈಸೂರು ಯೋಗ ಒಕ್ಕೂಟದ ಪದಾಧಿಕಾರಿಗಳಾದ ಎಂ.ಎಸ್. ಶಿವಪ್ರಕಾಶ್, ಬಿ.ಪಿ. ಮೂರ್ತಿ, ಕೆಜಿ. ದೇವರಾಜ್, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಉದ್ಯಮಿ ದಶರಥ್, ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎಂ.ಎಸ್.ರಮೇಶ್ ಕುಮಾರ್ ಮುಂತಾದವರಿದ್ದರು.

'ಅಭಿನವ ಸಾಮ್ರಾಟ್ ಪುನೀತ್ ರಾಜ್‌ಕುಮಾರ್ ಚುಟುಕುಗಳು' ಕೃತಿ ಬಿಡುಗಡೆ

ನನ್ನ ಸಹೋದರ ಪುನೀತ್ ತಂದೆಯ ಸಾರ್ವಜನಿಕ ನಡವಳಿಕೆಯ ಮಾದರಿ ಆಗಿದ್ದರು; ಸಹೋದರಿ ಲಕ್ಷ್ಮೀ ಗೋವಿಂದರಾಜು ಅಭಿಮತ

ಮೈಸೂರು, ಜ.28(ಎಂಟಿವೈ)– ನಟ ಡಾ.ಪುನೀತ್ ರಾಜ್‌ಕುಮಾರ್ ಕೇವಲ ನಟರಾಗಿರದೇ ಸಮಾಜ ಸೇವೆಯಲ್ಲೂ ಛಾಪು ಮೂಡಿಸಿದ್ದಾರೆ ಎಂದು ಅವರ ಸಹೋದರಿ ಲಕ್ಷ್ಮೀ ಗೋವಿಂದರಾಜು ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಸಾಹಿತ್ಯ ಭವನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ 'ಅಭಿನವ ಸಾಮ್ರಾಟ ಪುನೀತ್ ಚುಟುಕುಗಳು' ಕೃತಿಯನ್ನು ಪುನೀತ್ ರಾಜ್‌ಕುಮಾರ್ ಸಹೋದರಿ ಲಕ್ಷ್ಮೀ ಗೋವಿಂದರಾಜು ಬಿಡುಗಡೆ ಮಾಡಿದರು.

ಮೈಸೂರಿನ ವಿಜಯನಗರದ ಜಿಲ್ಲಾ ಸಾಹಿತ್ಯ ಪರಿಷತ್ ಭವನದಲ್ಲಿ ಭಾನುವಾರ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಹಿಳಾ ಘಟಕ ಹಾಗೂ ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ನಡೆದ 'ಅಭಿನವ ಸಾಮ್ರಾಟ ಪುನೀತ್ ಚುಟುಕುಗಳು' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಡಾ.ಪುನೀತ್ ರಾಜಕುಮಾರ್ ಸಮಾಜದಲ್ಲಿ ನಡೆದುಕೊಂಡ ರೀತಿ(ನಡವಳಿಕೆ) ಮತ್ತು ನಿರ್ವಹಿಸಿದ ಪಾತ್ರಗಳಿಂದ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಅಲ್ಲದೆ, ತಮ್ಮ ನಿಲುವುಗಳ ನೈತಿಕ ರೂಪಕವಾಗಿ ಬೆಳಕು ನೀಡಿದ್ದಾರೆ. ಅವರು ಕೇವಲ ನಟ, ನಿರ್ಮಾಪಕನಾಗಿರದೆ, ಸಾರ್ವಜನಿಕ ಜೀವನದಲ್ಲಿ ಅನೇಕ ಸಮಾಜ ಸೇವಾ ಕಾರ್ಯ ಮಾಡಿದ್ದಾರೆ. ಹೊಸ ಪ್ರತಿಭೆಗಳಿಗೆ ಚಿತ್ರರಂಗದಲ್ಲಿ ಅವಕಾಶ ನೀಡಿದ್ದಾರೆ. ಪುನೀತ್ ರಾಜ್‌ಕುಮಾರ್ ಅವರ ಅಪರೂಪದ ಭಾವಚಿತ್ರಗಳನ್ನು ಈ ಕೃತಿ ಒಳಗೊಂಡಿದೆ. ಅವುಗಳಲ್ಲಿ ವೃತ್ತಿ ಮತ್ತು ಖಾಸಗಿ ಜೀವನ ಕುರಿತ ಚಿತ್ರಗಳೂ ಇವೆ ಎಂದು ತಿಳಿಸಿದರು.

ನನ್ನ ಸಹೋದರರಾದ ಶಿವರಾಜಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್, ತಂದೆಯ ಸಾರ್ವಜನಿಕ ನಡವಳಿಕೆಯ ಮಾದರಿಯನ್ನು ಅನುಸರಿಸುತ್ತ ಬಂದರು. ಈ ಕಾರಣಕ್ಕೆ ಪುನೀತ್ ಅವರ ಅಗಲಿಕೆ ಒಂದು ದೊಡ್ಡ ಸಾರ್ವಜನಿಕ ಆಘಾತವಾಗಿ ಮಾರ್ಪಟ್ಟಿತು. ಅವರೊಬ್ಬ ಮಾದರಿ ಕಲಾವಿದ ಎನಿಸಿದರು. ಅವರ ಅಕಾಲಿಕ ಸಾವು ನೋವುಂಟು ಮಾಡಿದೆ ಎಂದರು.

ಎಲ್ಲಾ ವಿಚಾರದಲ್ಲೂ ಪುನೀತ್ ರಾಜ್‌ಕುಮಾರ್ ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದರು. ಅವರು ಸದಭಿರುಚಿಯ ಸಾಕಾರವೂ ಆಗಿದ್ದರು. ಪುನೀತ್ ಸರಳತೆ, ಸಜ್ಜನಿಕೆಯ ವ್ಯಕ್ತಿತ್ವವೊಂದು ಮರೆಗೆ ಸರಿದುಹೋಗಿದೆ. ನೆನಪುಗಳನ್ನು ಬಿಟ್ಟು ನೆಲದ ಒಡಲು ಸೇರಿದೆ. ಪ್ರೇಮದ ಕಾಣಿಕೆ ಚಲನಚಿತ್ರದ ಮೂಲಕ ಸಿನಿಮಾ ರಂಗದಲ್ಲಿ ಕಾಣಿಸಿಕೊಂಡರು. ಬಳಿಕ ಸನಾದಿ ಅಪ್ಪಣ್ಣ, ತಾಯಿಗೆ ತಕ್ಕ ಮಗ, ವಸಂತ ಗೀತ, ಭೂಮಿಗೆ ಬಂದ ಭಗವಂತ, ಹಾಗೂ ಇನ್ನಿತರ ಚಲನಚಿತ್ರಗಳಲ್ಲಿ ನಟಿಸಿದರು. ಭಾಗ್ಯವಂತ ಸಿನಿಮಾದ ಬಾನ ದಾರಿಯಲ್ಲಿ ಸೂರ್ಯ ಜಾರಿಹೋದ, ಚಂದ್ರ ಮೇಲೆ ಬಂದ, ಚಲಿಸುವ ಮೋಡಗಳು ಚಿತ್ರದ ಕಾಣದಂತೆ ಮಾಯವಾದನು ಸೇರಿದಂತೆ ಅನೇಕ ಗೀತೆಗಳನ್ನು ಹಾಡಿ ಹಿನ್ನೆಲೆ ಗಾಯಕನಾಗಿಯೂ ಪ್ರಶಂಸೆಗೆ ಒಳಗಾದರು. ಚಲಿಸುವ ಮೋಡಗಳು ಮತ್ತು ಎರಡು ನಕ್ಷತ್ರಗಳು ಚಿತ್ರದ ಅಭಿನಯಕ್ಕೆ ಕರ್ನಾಟಕ ರಾಜ್ಯ ಪ್ರಶಸ್ತಿ ಪಡೆದಂತಹ ಮಹಾನ್ ವ್ಯಕ್ತಿ ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಕೃತಿಯ ಲೇಖಕಿ ರತ್ನಾ ಹಾಲಪ್ಪಗೌಡ, ಮಾಜಿ ಸಚಿವ ಎಂ. ಶಿವಣ್ಣ ಚಲನಚಿತ್ರ ನಿರ್ಮಾಪಕ ಎಸ್.ಎ. ಗೋವಿಂದರಾಜು, ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ರಾಜ್ಯಾಧ್ಯಕ್ಷ ತೋಂಟದಾರ್ಯ, ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ.ಎಂ.ಜಿ. ಆರ್. ಅರಸು, ಎಸ್.ಎ.ಶ್ರೀನಿವಾಸ್, ಹೆಚ್.ಎನ್. ಲೋಕೇಶಪ್ಪ ಇದ್ದರು.

ಕಪಿಲಾ ತೀರದ ಶೌಚಾಲಯ, ಸ್ನಾನಗೃಹಗಳಲ್ಲಿ ಹೆಚ್ಚಿನ ಹಣ ವಸೂಲಿ

● ಮೂತ್ರಾಲಯಕ್ಕೆ 5 ರೂ., ಶೌಚಾಲಯಕ್ಕೆ 10 ರೂ., ಬಿಸಿನೀರು ಸ್ನಾನಕ್ಕೆ 40 ರೂ. ವಸೂಲಿ ಮೂಲಕ ಭಕ್ತರ ಸುಲಿಗೆ ● ಈ ಬಗ್ಗೆ ಜಿಲ್ಲಾಡಳಿತ, ಶಾಸಕರು ಕ್ರಮ ಕೈಗೊಂಡು ಸಮಸ್ಯೆ ಬಗೆಹರಿಸುವಂತೆ ಭಕ್ತರ ಆಗ್ರಹ

● ಹೆಚ್.ಡಿ.ರಂಗಸ್ವಾಮಿ

ನಂಜನಗೂಡು, ಜ.28– ಇಲ್ಲಿನ ಶ್ರೀಕಂಠೇಶ್ವರ ದೇವಾಲಯದ ಕಪಿಲಾ ನದಿ ತೀರದಲ್ಲಿರುವ ಶೌಚಾಲಯ ಹಾಗೂ ಸ್ನಾನಗೃಹಗಳಲ್ಲಿ ನಿಗದಿತ ದರಕ್ಕಿಂತ ನಾಲ್ಕು ಪಟ್ಟು ಹಣ ವಸೂಲಿ ಮಾಡುವ ಮೂಲಕ ಭಕ್ತರನ್ನು ಸುಲಿಗೆ ಮಾಡಲಾಗುತ್ತಿದೆ.

ಶ್ರೀಕಂಠೇಶ್ವರ ದೇವಾಲಯದ ಆಡಳಿತ ಮಂಡಳಿ ಮೂತ್ರಾಲಯ ಉಚಿತ, ಶೌಚಾಲಯಕ್ಕೆ 2 ರೂ., ಬಿಸಿನೀರು ಸ್ನಾನಕ್ಕೆ 5 ರೂಪಾಯಿ ದರ ನಿಗದಿಗೊಳಿಸಿ, ಟೆಂಡರ್ ಪ್ರಕ್ರಿಯೆ ನಡೆಸಿದೆ. ಅಲ್ಲದೇ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ. ಆದರೆ ಟೆಂಡರ್ ಪಡೆದಿರುವ ಬೆಂಗಳೂರು ಮೂಲದ ಟೆಂಡರ್‌ದಾರ ಫಲಕದ ದರ ಪಟ್ಟಿ ಅಳಿಸಿ ಕೆಲವೊಂದಕ್ಕೆ ಬಟ್ಟೆಯಿಂದ ಮರೆಮಾಚಿ ಮೂತ್ರ ವಿಸರ್ಜನೆಗೆ 5 ರೂ., ಶೌಚಾಲಯಕ್ಕೆ 10 ರೂ, ಬಿಸಿನೀರು ಸ್ನಾನಕ್ಕೆ ಒಂದು ಬಕೆಟ್‌ಗೆ 40 ರೂಪಾಯಿ ವಸೂಲಿ ಮಾಡುವ ಮೂಲಕ ಭಕ್ತರನ್ನು ಸುಲಿಗೆ ಮಾಡುತ್ತಿದ್ದಾರೆ. ಅಲ್ಲದೆ ನದಿಯಲ್ಲಿ ಸ್ನಾನ ಮಾಡುವ ಮಹಿಳಾ ಭಕ್ತರ ಬಟ್ಟೆ ಬದಲಾವಣೆಗೆ ಉಚಿತ ಅವಕಾಶ ಕಲ್ಪಿಸಿದ್ದರೂ, ಬಟ್ಟೆ ಬದಲಿಸಲು 10 ರೂ. ವಸೂಲಿ ಮಾಡಲಾಗುತ್ತಿದೆ.

ಟೆಂಡರ್ ಪಡೆದಿರುವ ಗುತ್ತಿಗೆದಾರ ಕೆಲಸಕ್ಕೆ ಉತ್ತರ ಪ್ರದೇಶದ ವ್ಯಕ್ತಿಗಳನ್ನು ನೇಮಿಸಿಕೊಂಡು ಹೆಚ್ಚಿನ ದರ ವಸೂಲಿ ಮಾಡುತ್ತಿರುವುದರಿಂದ ಭಕ್ತರಿಗೆ ಶುಲ್ಕ ದುಬಾರಿಯಾಗಿ ತೊಂದರೆಯಾಗಿದೆ. ಭಕ್ತರು ಈ ಬಗ್ಗೆ ಪ್ರಶ್ನಿಸಿದರೆ ಕನ್ನಡ ಬಾರದ ಸಿಬ್ಬಂದಿಗಳು ಭಕ್ತರೊಂದಿಗೆ ಘರ್ಷಣೆಗೆ ಇಳಿಯುತ್ತಾರೆ. ಅಲ್ಲದೇ ನಿತ್ಯ ಗಲಾಟೆ ಸಾಮಾನ್ಯವಾಗಿದೆ. ಕೆಲ ಭಕ್ತರು ದೇವಾಲಯದ ಆಡಳಿತಾಧಿಕಾರಿಗೆ ಹೆಚ್ಚಿನ ದರ ವಸೂಲಿ ಬಗ್ಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎನ್ನಲಾಗಿದೆ.

ಶಾಸಕರ ಮಾತಿಗೂ ಕಿಮ್ಮತ್ತಿಲ್ಲ: ಶೌಚಾಲಯ ಹಾಗೂ ಸ್ನಾನಗೃಹಗಳಲ್ಲಿ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವ ಬಗ್ಗೆ ಶಾಸಕ ದರ್ಶನ್ ಧ್ರುವನಾರಾಯಣ್ ದೇವಾಲಯದ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಕೂಡಲೇ ದರಪಟ್ಟಿ ಸೂಚನಾ ಫಲಕ ಅಳವಡಿಸಿ ಭಕ್ತರಿಗೆ ಅನುಕೂಲ ಕಲ್ಪಿಸುವಂತೆ ಹಾಗೂ ಸಿಬ್ಬಂದಿಗೆ ಸೂಚಿಸಿದ್ದರೂ ಅಧಿಕಾರಿಗಳು ಶಾಸಕರ ಮಾತಿಗೆ ಕ್ಯಾರೆ ಎನ್ನದೇ ಟೆಂಡರ್‌ದಾರನ ಜೊತೆ ಶಾಮೀಲಾಗಿರುವುದರಿಂದ ನಿತ್ಯ ಭಕ್ತರ ಗೋಳು ಕೇಳುವವರು ಇಲ್ಲದಂತಾಗಿದೆ. ಅಲ್ಲದೇ ಟೆಂಡರ್‌ದಾರ ಎಷ್ಟು ಪ್ರಭಾವಿ ಇರಬಹುದು?, ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳು ಅವರ ರಕ್ಷಣೆಗೆ ನಿಂತಿರುವರೇ? ಅಥವಾ ದೇವಾಲಯದ ಅಧಿಕಾರಿಗಳೇ ಗುತ್ತಿಗೆದಾರರೊಂದಿಗೆ ಶಾಮೀಲಾಗಿದ್ದಾರೆಯೇ? ಎಂಬ ಪ್ರಶ್ನೆಗಳು ಸಾರ್ವಜನಿಕ ವಲಯದಲ್ಲಿ ಕಾಡತೊಡಗಿವೆ.

ನದಿ ತೀರದಲ್ಲಿ ಅನೈರ್ಮಲ್ಯ: ಶೌಚಾಲಯದಲ್ಲಿ ಹೆಚ್ಚಿನ ದರ ವಸೂಲಿಯಿಂದ ಕೆಲ ಭಕ್ತರು ಶೌಚಾಲಯ ಉಪಯೋಗಕ್ಕೆ ಹಣವಿಲ್ಲದೆ ನದಿ ತೀರದಲ್ಲಿ ಶೌಚ ಮಾಡುವುದರಿಂದ ನದಿ ತೀರದಲ್ಲಿ ಸ್ವಚ್ಛತೆ ಮಾಯವಾಗಿ ಅನೈರ್ಮಲ್ಯ ನಿರ್ಮಾಣವಾಗಿದ್ದು, ಭಕ್ತರು ಮೂಗು ಹಿಡಿದುಕೊಂಡು ತೆರಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಸಂಬಂಧ ಶಾಸಕ ದರ್ಶನ್ ಧ್ರುವನಾರಾಯಣ್ ಕ್ರಮ ಕೈಗೊಳ್ಳುವ ಮೂಲಕ ಅನುಕೂಲ ಕಲ್ಪಿಸಬೇಕು ಎಂದು ಭಕ್ತರು ಒತ್ತಾಯಿಸಿದ್ದಾರೆ.



ನಂಜನಗೂಡಿನ ಕಪಿಲಾ ನದಿ ತೀರದಲ್ಲಿರುವ ಶೌಚಗೃಹ, ಸ್ನಾನಗೃಹ



ನಾವು ಬೆಂಗಳೂರಿನಿಂದ ಶ್ರೀಕಂಠೇಶ್ವರನ ದರ್ಶನಕ್ಕೆಂದು ಬಂದಿದ್ದೇವೆ. ಬಿಸಿನೀರು ಸ್ನಾನಕ್ಕೆ ಪ್ರತಿ ಬಕೆಟ್‌ಗೆ 40 ರೂ. ಪಡೆಯುತ್ತಿದ್ದಾರೆ. ನಾವು 5 ಬಕೆಟ್ ನೀರು ಪಡೆದಿದ್ದು 200 ರೂ. ಪಾವತಿಸಿದ್ದೇವೆ. ಇದರಿಂದ ನಮಗೆ ಆರ್ಥಿಕವಾಗಿ ಹೊರೆಯಾಗಿದೆ. ಯುವಕರಾದರೆ ತಣ್ಣೀರಿನಲ್ಲಿ ಸ್ನಾನ ಮಾಡಬಹುದು. ಇದೀಗ ಚಳಿ ಹೆಚ್ಚಿರುವ ಕಾರಣ ವಯೋವೃದ್ಧರು ಸ್ನಾನ ಮಾಡಲು ಕಷ್ಟವಾಗುತ್ತದೆ. ಹೆಚ್ಚಿನ ದರ ವಸೂಲಿ ಬಗ್ಗೆ ಪ್ರಶ್ನಿಸಲು ಹೋದರೆ ನಮ್ಮ ಮೇಲೆ ಗಲಾಟೆಗೆ ಬರುತ್ತಾರೆ. ಆದ್ದರಿಂದ ದೇವಾಲಯದ ಅಧಿಕಾರಿಗಳು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಭಕ್ತರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕು. ಇಲ್ಲವಾದಲ್ಲಿ ಶ್ರೀಕಂಠೇಶ್ವರನ ದೇವಾಲಯಕ್ಕೆ ಕೆಟ್ಟ ಹೆಸರು ಬರಲಿದೆ.

- ಲಕ್ಷ್ಮೀ, ಬೆಂಗಳೂರು ನಿವಾಸಿ.



ಶೌಚಾಲಯ ಉಪಯೋಗಕ್ಕೆ 10 ರೂ., ಬಿಸಿ ನೀರು ಸ್ನಾನಕ್ಕೆ 40 ರೂ ಸೇರಿ 50 ರೂ. ಪಾವತಿಸಿದ್ದೇನೆ. ಶೌಚಾಲಯ ಉಪಯೋಗಿಸಲು ದರ ಕಡಿಮೆ ಮಾಡುವಂತೆ ಜಿಲ್ಲಾಡಳಿತ ದೇವಾಲಯದ ಅಧಿಕಾರಿಗಳಿಗೆ ಸೂಚನೆ ನೀಡಿ ಭಕ್ತರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕು.

- ನಂಜುಂಡಸ್ವಾಮಿ, ಊಟಿ ನಿವಾಸಿ.



ವಿಶೇಷಚೇತನರ ಭವನ ನಿರ್ಮಾಣಕ್ಕೆ ಭೂಮಿ ಪೂಜೆ



ವಿಶೇಷಚೇತನರ ಭವನಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡರು ಗುದ್ದಲಿ ಪೂಜೆ ನೆರವೇರಿಸಿದರು.

ಹುಣಸೂರು, ಜ.28– ಪಟ್ಟಣದ ತಾಪಂ ಕಚೇರಿ ಹಿಂಭಾಗದ ಆವರಣದಲ್ಲಿ ತಾಲೂಕಿನ ವಿಶೇಷಚೇತನ ಮಕ್ಕಳ ಅನುಕೂಲಕ್ಕಾಗಿ 14.60 ಲಕ್ಷ ರೂ. ವೆಚ್ಚದ ವಿಶೇಷ ಚೇತನರ ಭವನ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡರು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ವಿಶೇಷ ಚೇತನ ಮಕ್ಕಳ ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಭವನ ಬೇಕಾಗಿದೆ. ಈ ಹಿಂದೆ ನಡೆದ ವಿಶೇಷ ಚೇತನ ಮಕ್ಕಳ ಕಾರ್ಯಕ್ರಮದಲ್ಲಿ ನಾನು ಅವರಿಗೆ ಶೀಘ್ರ ಭವನ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದ್ದೆ. ಅದರಂತೆ ಇಂದು ಗುದ್ದಲಿ ಪೂಜೆ ನೆರವೇರಿಸಿರುವುದು ಸಂತಸ ತಂದಿದೆ. ಆದಷ್ಟು ಬೇಗ ಕಾಮಗಾರಿ ಮುಗಿಸುವಂತೆ ಇಓ ಬಿ.ಕೆ.ಮನು ಹಾಗೂ ಎಇಇ ನರಸಿಂಹಯ್ಯ ಅವರಿಗೆ ಸೂಚಿಸಿದರು.

ತಾಪಂ ಇಓ ಬಿಕೆ ಮನು ಮಾತನಾಡಿ, 2020–21ನೇ ಸಾಲಿನ 15ನೇ ಹಣಕಾಸಿನ ಯೋಜನೆಯಲ್ಲಿ 9.60 ಲಕ್ಷ ರೂ. ಹಾಗೂ 2023–24ನೇ ಸಾಲಿನ ಸಂಯುಕ್ತ ಅನುದಾನದಲ್ಲಿ 5 ಲಕ್ಷ ಸೇರಿದಂತೆ ಒಟ್ಟು 14.60 ಲಕ್ಷ ರೂ. ವೆಚ್ಚದಲ್ಲಿ ವಿಶೇಷಚೇತನರ ಭವನ ನಿರ್ಮಾಣವಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಅಂಗವಿಕಲ ಇಲಾಖೆ ತಾಲೂಕು ಸಂಯೋಜಕ ದೇವರಾಜ್, ಜೆಡಿಎಸ್ ಮುಖಂಡ ಶ್ರೀಧರ್, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾದ ಗೋವಿಂದಯ್ಯ, ಹೇಮಂತ್, ಕುಮಾರ್, ಸುರೇಶ್, ರಾಜಣ್ಣ ಸುಮಲತಾ, ಶ್ವೇತ ಸೇರಿದಂತೆ 50ಕ್ಕೂ ಹೆಚ್ಚು ವಿಶೇಷ ಚೇತನ ಮಕ್ಕಳು ಭಾಗವಹಿಸಿದ್ದರು.

ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಭೂಮಿ ಪೂಜೆ



ಸೋಮನಾಥಪುರದಲ್ಲಿ ಅಂಬೇಡ್ಕರ್ ಪುತ್ತಳಿ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು.

ತಿ.ನರಸೀಪುರ, ಜ.28– ತಾಲೂಕಿನ ಸೋಮನಾಥಪುರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪುತ್ತಳಿ ನಿರ್ಮಾಣಕ್ಕೆ ವಿಧಾನ ಪರಿಷತ್ ನೌಕರ, ಗ್ರಾಮದ ಮುಖಂಡ ವಿನೋದ್ ಕುಮಾರ್ ನೇತೃತ್ವದಲ್ಲಿ ಭೂಮಿಪೂಜೆ ನೆರವೇರಿಸಲಾಯಿತು.

ಬಳಿಕ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಸೋಮನಾಥಪುರ ಐತಿಹಾಸಿಕ ಹಿನ್ನೆಲೆಯುಳ್ಳ ಗ್ರಾಮವಾಗಿದೆ. ನಾಡಿಗೆ ಉನ್ನತ ಅಧಿಕಾರಿಗಳನ್ನು ನೀಡಿದರೂ ಗ್ರಾಮದಲ್ಲಿ ಇದುವರೆಗೆ ಅಂಬೇಡ್ಕರ್ ಪುತ್ತಳಿ ನಿರ್ಮಾಣವಾಗಿರಲಿಲ್ಲ. ಇದೀಗ ಸಮುದಾಯದ ಮುಖಂಡರ ಸಹಕಾರದೊಂದಿಗೆ ಪುತ್ಥಳಿ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದ್ದು, ಕಾಮಗಾರಿ ಮುಗಿದ ಬಳಿಕ ಶೀಘ್ರ ಪುತ್ತಳಿ ಉದ್ಘಾಟಿಸಲಾಗುವುದು ಎಂದರು.

ಈ ವೇಳೆ ಗ್ರಾಮದ ಮುಖಂಡರಾದ ಪುಟ್ಟಸ್ವಾಮಿ, ವಾಜೀದ್, ದೊರೆಸ್ವಾಮಿ, ಪುರುಷಯ್ಯ, ನಿವೃತ್ತ ಸಹಾಯಕ ನಿಬಂಧಕ ಎಸ್.ಶಿವಸ್ವಾಮಿ, ಗ್ರಾಮದ ಯಜಮಾನರಾದ ಕುಮಾರಸ್ವಾಮಿ, ಪರಶಿವಮೂರ್ತಿ ಸೇರಿದಂತೆ ಜೈ ಭೀಮ್ ಯುವಕರ ಸಂಘದ ಯುವಕ ಮಿತ್ರರು ಇದ್ದರು.

ಹೊಸಹಳ್ಳಿಯಲ್ಲಿ ಚಿಗುರು ಕಡಿಯುವ ಕಾರ್ಯಕ್ರಮ

ಮೂಗೂರಲ್ಲಿ ಶ್ರೀ ತ್ರಿಪುರ ಸುಂದರಿ ಅಮ್ಮನವರ ಹೂವಿನ ಪಲ್ಲಕ್ಕಿ ಉತ್ಸವ

ಮೂಗೂರು, ಜ.28– ಶ್ರೀತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಚಿಗುರು ಕಡಿಯುವ ಕಾರ್ಯಕ್ರಮ ಇಲ್ಲಿಗೆ ಸಮೀಪದ ಹೊಸಹಳ್ಳಿ ಗ್ರಾಮದ ಅಮ್ಮನವರ ದೇಗುಲದಲ್ಲಿ ಅದ್ಧೂರಿಯಾಗಿ ನಡೆಯಿತು.

ಮೂಗೂರು ದೇವಾಲಯದಲ್ಲಿ ಭಾನುವಾರ ಮಧ್ಯಾಹ್ನ 3.30ಕ್ಕೆ ಅಮ್ಮನವರಿಗೆ ಪೂಜೆ ಸಲ್ಲಿಸಿದ ಬಳಿಕ ಹೂವಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ, ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿಸಿ ಬಳಿಕ ಹೂವಿನ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಲಾಯಿತು.

ಇದಕ್ಕೂ ಮುನ್ನಾ ದೇವಾಲಯದಲ್ಲಿ ಬೆಳಗ್ಗೆಯಿಂದಲೇ ಅಭಿಷೇಕ ಸೇರಿದಂತೆ ವಿಶೇಷ ಪೂಜೆಗಳು ನಡೆದವು. ಮಹಿಳೆಯರು ಬಾಯಿಗೆ ಬೀಗ ದೀವಟಿಗೆ ಸೇವೆ ಹಾಗೂ ರೈತರು ಜಾನುವಾರುಗಳ ಆರೋಗ್ಯ ವೃದ್ಧಿಗಾಗಿ ಪ್ರಾರ್ಥಿಸಿ ದೇವಾಲಯದಿಂದ ಹೊಸಹಳ್ಳಿ ದೇವಾಲಯದವರೆಗೆ ಪಂಜಿನ ಸೇವೆ ಸಲ್ಲಿಸಿದರು. ಅಲ್ಲದೇ ಈ ವೇಳೆ ಅಮ್ಮನವರು ಹೊಸಹಳ್ಳಿ ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಸಾವಿರಾರು ಭಕ್ತರು ಕೈಕಾರ ಕೂಗಿದರು. ಅರ್ಚಕರು ಸಂಜೆ 5.30ರ ವೇಳೆಗೆ ನೇರಳೆ ಮರವೇರಿ ರಾತ್ರೋರಾತ್ರಿ ಮೂಡಿದ ಚಿಗುರನ್ನು ಬಿಡಿಸಿದರು. ಈ ಬಾರಿ 11 ಚಿಗುರು ಮೂಡಿದ್ದು ಜನತೆಯಲ್ಲಿ ಆತಂಕ ಮೂಡಿಸಿತು. ಬಳಿಕ ಬೆಳ್ಳಿ ತಟ್ಟೆಯಲ್ಲಿದ್ದ ಹೊಂಬಾಳೆ ಮೇಲಿಟ್ಟು ಪೂಜೆ ಸಲ್ಲಿಸಿದರು. ಈ ವೇಳೆ ಸಾವಿರಾರು ಭಕ್ತರು ಚಿಗುರನ್ನು ವೀಕ್ಷಿಸಿದರು. ಬಳಿಕ ಮೂಗೂರು ಗ್ರಾಮದ ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ತಂದು ಪೂಜೆ ಸಲ್ಲಿಸಲಾಯಿತು.

ಚಿಗುರಿನ ಹಿನ್ನೆಲೆ: ಮರಸವರುವ ಮನೆತನದ ಅರ್ಚಕರು ರಥೋತ್ಸವದ ಮಧ್ಯರಾತ್ರಿ ಹೊಸಹಳ್ಳಿಗೆ ತೆರಳಿ ದೇಗುಲದಲ್ಲಿರುವ ನೇರಳೆ ಮರಕ್ಕೆ ಪೂಜೆ ಸಲ್ಲಿಸಿ ಮರದ ಕೊಂಬೆ ಎಲೆಗಳನ್ನು ಬಿಡಿಸಿ ಅದಕ್ಕೆ ಧಾನ್ಯ ಸಮೇತ ಅರಿಶಿನದ ಬಟ್ಟೆ ಕಟ್ಟಿ ಬರುತ್ತಾರೆ. ಮಾರನೇ ದಿನ ಅಮ್ಮನವರ ಹೂವಿನ ಪಲ್ಲಕ್ಕಿ ಉತ್ಸವ ಹೊಸಹಳ್ಳಿಗೆ ಹೋಗುವ ಮುನ್ನವೇ ಧಾನ್ಯ ಕಟ್ಟಿದ ರೆಂಬೆಯಲ್ಲಿ ಚಿಗುರು ಮೂಡಿರುತ್ತದೆ. ಇದೇ ಮೂಗೂರು ಚಿಗುರು ಎಂಬುದಾಗಿ ಪ್ರಸಿದ್ಧಿ ಪಡೆದಿದೆ. ಈ ಪವಾಡ ಸದೃಶ್ಯ ದೃಶ್ಯ ಕಣ್ತುಂಬಿಕೊಳ್ಳಲು ಸಹಸ್ರಾರು ಮಂದಿ ಸೇರುತ್ತಾರೆ. 9 ಅಥವಾ 12 ಚಿಗುರು ಬಂದರೆ ಶುಭ ಅಂತಲೂ 7, 11 ಅಶುಭವೆಂದು ಇಂದಿಗೂ ಜನಜನಿತವಾಗಿದೆ.



ಶ್ರೀತ್ರಿಪುರ ಸುಂದರಿ ಅಮ್ಮನವರ ಹೂವಿನ ಪಲ್ಲಕ್ಕಿ ಉತ್ಸವ

ಇಂದು ರತ್ನಪುರಿಯಲ್ಲಿ ಜನಸ್ಪಂದನ ಸಭೆ

ಹುಣಸೂರು, ಜ.28– ತಾಲೂಕಿನ ಧರ್ಮಾಪುರ ಜಿಪಂ ವ್ಯಾಪ್ತಿಯ ರತ್ನಪುರಿ ಗ್ರಾಮದ ಎಪಿಎಂಸಿ ಆವರಣದಲ್ಲಿ ಜ.29ರಂದು ಬೆಳಗ್ಗೆ 10 ಗಂಟೆಗೆ ಶಾಸಕ ಜಿ.ಡಿ. ಹರೀಶ್‌ಗೌಡ, ತಹಸೀಲ್ದಾರ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳ ಸಮ್ಮುಖದಲ್ಲಿ ಜನಸ್ಪಂದನ ಸಭೆ ಆಯೋಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿವೆ

ರೈತರು ನಾಟಿತಳಿ ಉಳಿಸಿಕೊಂಡು ಅಭಿವೃದ್ಧಿ ಹೊಂದಿ

ಶಾಸಕ ಜಿ.ಡಿ.ಹರೀಶ್‌ಗೌಡರ ಸಲಹೆ

ಹುಣಸೂರು, ಜ.28– ಇತ್ತೀಚೆಗೆ ಗ್ರಾಮೀಣ ಭಾಗದಲ್ಲಿ ಮಿಶ್ರತಳಿ, ನಾಟಿತಳಿ ಹಸು ಹಾಗೂ ಕರುಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಇನ್ನು ಮುಂದಾದರೂ ತಾಲೂಕಿನ ರೈತರು ಐಟಿಸಿ/ ಎಂಎಸ್‌ಕೆ ಬೈಫ್ ಹಾಗೂ ಔಟ್‌ರೀಚ್ ಸಂಸ್ಥೆ ಸಹಕಾರ ಪಡೆದು ನಾಟಿತಳಿ ಉಳಿಸಿಕೊಂಡು ಅಭಿವೃದ್ಧಿ ಹೊಂದಬೇಕು ಎಂದು ಶಾಸಕ ಜಿ.ಡಿ. ಹರೀಶ್‌ಗೌಡರು ಸಲಹೆ ನೀಡಿದರು.

ತಾಲೂಕಿನ ಹೈರಿಗೆ ಗ್ರಾಮದಲ್ಲಿ ಐಟಿಸಿ/ ಎಂಎಸ್‌ಕೆ ಬಂಗಾರದ ಭವಿಷ್ಯದೆಡೆಗೆ ಇವರ ಅನುದಾನದಲ್ಲಿ ಬೈಫ್ ಸಂಸ್ಥೆ ಹಾಗೂ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಮತ್ತು ಕೆಎಂಎಫ್ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ಹೈರಿಗೆ ಗ್ರಾಮಸ್ಥರ ಸಹಕಾರದೊಂದಿಗೆ ಏರ್ಪಡಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಐಟಿಸಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಸಿಆರ್‌ಎಸ್ ಅನುದಾನದಲ್ಲಿ ಕೆರೆ ಹಾಗೂ ಶಾಲೆಗಳ ಅಭಿವೃದ್ಧಿ ಮಾಡಲಾಗುತ್ತಿದೆ. ಹೀಗಾಗಿ ಇವರ ಬೆಂಬಲ ಪಡೆದು ತಾಲೂಕಿನ ರೈತರು ಆರ್ಥಿಕಾಭಿವೃದ್ಧಿ ಹೊಂದಬೇಕು ಎಂದರು.

ಹೈರಿಗೆ ಗ್ರಾಮದಲ್ಲಿ 250ಕ್ಕೂ ಹೆಚ್ಚು ಉತ್ತಮ ರಾಸುಗಳನ್ನು ಆಯ್ಕೆ ಮಾಡಿ, ಅದರಲ್ಲಿ ಅತ್ಯುತ್ತಮವಾಗಿ ರಾಸುಗಳನ್ನು ಸಾಕಿದ ರೈತರಿಗೆ ಬಹುಮಾನ ವಿತರಿಸಲಾಗಿದೆ ಎಂದರು.

ಬೈಫ್ ಸಂಸ್ಥೆ ಮೈಸೂರು ವಲಯದ ಮುಖ್ಯಸ್ಥ ಕುಮಾರಪ್ಪ ಮಾತನಾಡಿ, ಜಾನುವಾರು ತಳಿಗಳ ಸಂವರ್ಧನೆ ಮಾಡಿ ಉತ್ತಮ ತಳಿಗಳ ಅಭಿವೃದ್ಧಿಗೆ ಐಟಿಸಿ/ಎಂಎಸ್‌ಕೆ ಸಹಾಯ ಮಾಡುವ ಜೊತೆಗೆ ರೈತರಿಗೆ ಹೆಚ್ಚಾಗಿ ಜಾನುವಾರುಗಳನ್ನು ಸಾಕುವಂತೆ ಪ್ರೋತ್ಸಾಹಿಸಲಾಗುತ್ತಿದೆ ಎಂದರು.

ಇದೇ ವೇಳೆ ಮೈಸೂರು ಜಿಲ್ಲೆ ಪಶುಪಾಲನಾ ನಿರ್ದೇಶಕ ಡಾ.ನಾಗರಾಜು, ಉತ್ತಮ ರಾಸುಗಳ ರೈತರಿಗೆ ಬಹುಮಾನ ಜೊತೆಗೆ ಭಾಗವಹಿಸಿದ ಎಲ್ಲಾ ರೈತರ ರಾಸುಗಳಿಗೆ ಸಮಾಧಾನಕರ ಬಹುಮಾನ ವಿತರಿಸಿದರು. ಕಾರ್ಯಕ್ರಮದಲ್ಲಿ ಬೈಫ್ ಸಂಸ್ಥೆ ಪ್ರಾದೇಶಿಕ ಕಾರ್ಯಕ್ರಮಾಧಿಕಾರಿ ರಾಮಕೃಷ್ಣ ಆಳ್ವ, ಗ್ರಾಪಂ ಅಧ್ಯಕ್ಷೆ ಪಾರ್ವತಿ, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ.ಎಸ್.ಕುಮಾರ್, ಕೆಎಂಎಫ್ ನಿರ್ದೇಶಕಿ ಶಿವಗಾಮಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸಹಾಯ ನಿರ್ದೇಶಕ ಡಾ.ಚನ್ನಬಸಪ್ಪ, ಐಟಿಸಿ/ಎಂಎಸ್‌ಕೆಯ ರಿಜ್ವಾನ್ ಮತ್ತು ಉಲ್ಲಾಸ್, ತಾಪಂ ಮಾಜಿ ಸದಸ್ಯರಾದ ಶ್ರೀನಿವಾಸ್, ತಟ್ಟೆಕೆರೆ ಗ್ರಾಪಂ ಸದಸ್ಯರು, ಗ್ರಾಮದ ಯಾಜಮಾನ ನಿಂಗರಾಜಪ್ಪ, ಔಟ್‌ರೀಚ್ ಸಂಸ್ಥೆ ಯೋಜನಾಧಿಕಾರಿ ನಂಜುಂಡಸ್ವಾಮಿ ಸೇರಿದಂತೆ 100ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.



ಹೈರಿಗೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರು ಮಾತನಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಬ್ಲ್ಯೂ ಸ್ಟಾರ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫೈಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗಸಮುದ್ರ (ಕ)	4 ಪ್ರದರ್ಶನಗಳು
ರಾಜಕಮಲ್	
ಫೈಟರ್ (ಹಿಂ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಟೇರ (ಕ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಬ್ಯಾಚುಲರ್ ಪಾರ್ಟಿ (ಕ): ಬೆ.10.10ಕ್ಕೆ, ಮ.1ಕ್ಕೆ, ರಾ.7.10ಕ್ಕೆ, ಕಾಟೇರ (ಕ): ಮ.3.50ಕ್ಕೆ, ಮಲೈಕೊಟ್ಟೈ ವಾಲಿಬನ್ (ಮ): ರಾ.10.05ಕ್ಕೆ.
ಸ್ಕ್ರೀನ್ 2	ಅಲೆಕ್ಸಾ (ಕ): ಬೆ.10.15ಕ್ಕೆ, ಕೇಸ್ ಆಫ್ ಕೊಂಡಾಣ (ಕ): ಮ.1ಕ್ಕೆ, ಹನುಮಾನ್ (ಕ): ಮ.3.50ಕ್ಕೆ, ಫೈಟರ್ (3ಡಿ)(ಹಿಂ): ಸಂ.6.55ಕ್ಕೆ, ಫೈಟರ್ (ಹಿಂ): ರಾ.10.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4ಕ್ಕೆ, ರಾ.7.05ಕ್ಕೆ, ಕಾಟೇರ (ಕ): ರಾ.10ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.10.25ಕ್ಕೆ, ಫೈಟರ್ (ಹಿಂ): ರಾ.7.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಫೈಟರ್ (3ಡಿ)(ಹಿಂ): ಬೆ.7.40ಕ್ಕೆ, ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಚುಲರ್ ಪಾರ್ಟಿ (ಕ): ಬೆ9.20ಕ್ಕೆ, ಸಂ.4ಕ್ಕೆ, 10.20ಕ್ಕೆ, ಫೈಟರ್ (ಹಿಂ): ಮ.12.25ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.9ಕ್ಕೆ, ಹನುಮಾನ್ (ಕ): ಮ.12.05ಕ್ಕೆ, ಕಾಟೇರ (ಕ): ಮ.3.25ಕ್ಕೆ, ಕೇಸ್ ಆಫ್ ಕೊಂಡಾಣ (ಕ): ರಾ.10.30ಕ್ಕೆ. ಮಲೈಕೊಟ್ಟೈ ವಾಲಿಬನ್ (ಮ): ರಾ.7.05ಕ್ಕೆ
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS


ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅನಿಮಲ್ (ಹಿಂ): ಬೆ.8.10ಕ್ಕೆ, ಬೆ.9.15ಕ್ಕೆ, ಬೆ.9.45ಕ್ಕೆ, ಬೆ.10.15ಕ್ಕೆ, ಮ.1.20ಕ್ಕೆ, ಮ.2.20ಕ್ಕೆ, ಸಂ.5.25ಕ್ಕೆ, ಸಂ.5.55ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ಅನಿಮಲ್ (ಕ): ಮ.1.50ಕ್ಕೆ, ಅನ್ನಪೂರ್ಣಿ (ತ): ಸಂ.4.15ಕ್ಕೆ, ಕಾಥರ್ ದಿ ಕೋರ್ (ಮ): ರಾ.10.15ಕ್ಕೆ, ಪಾರ್ಕಿಂಗ್ (ತ): ಮ.1.25ಕ್ಕೆ, ರಾ.7.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಬೆ.9.20ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.12.35ಕ್ಕೆ, ರಾ.7.05ಕ್ಕೆ, ಶೋಶಿತೆ (ಕ): ಬೆ.11ಕ್ಕೆ, ಟೈಗರ್ 3 (ಹಿಂ): ಮ.3.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹೆಚ್.ಕಾಂತರಾಜು ಆಯೋಗದ ವರದಿ ಜಾರಿಗೆ ಒತ್ತಾಯ



ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಕೆ.ಆರ್.ನಗರ, ಜ.28– ಹೆಚ್.ಕಾಂತರಾಜು ಆಯೋಗದ ವರದಿಯನ್ನು ಕೂಡಲೆ ಯಥಾವತ್ತಾಗಿ ಜಾರಿಗೊಳಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದ ಉಪ್ಪಾರ ಶ್ರೀರಾಮ ಮಂದಿರದಲ್ಲಿ ಭಾನುವಾರ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು ಶ್ರೀಭಗೀರಥ ಉಪ್ಪಾರ ಸಂಘ ಉದ್ಘಾಟನೆ ಮತ್ತು ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಹೆಚ್.ಕಾಂತರಾಜು ಆಯೋಗದ ವರದಿ ಜಾರಿಗೊಳಿಸುವ ವಿಚಾರದಲ್ಲಿ ಯಾವುದೇ ಒತ್ತಡ ಮತ್ತು ಯಾರ ಮುಲಾಜಿಗೂ ಮುಖ್ಯಮಂತ್ರಿಗಳು ಒಳಗಾಗಬಾರದು ಎಂದರು.

ಕಾಂತರಾಜು ಆಯೋಗದ ವರದಿ ಬಗ್ಗೆ ಮಾತನಾಡುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಮತ್ತು ವಿಪಕ್ಷ ನಾಯಕ ಆರ್.ಅಶೋಕ್ ಅದನ್ನು ಓದಿದ್ದಾರೆಯೇ ಎಂದು ಪ್ರಶ್ನಿಸಿದ ಅವರು, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನವರು ವರದಿ ಪರಿಶೀಲಿಸಿ ಅಂತಿಮಗೊಳಿಸಿದ್ದು ಅವರಿಗಿಂತ ಈ ಇಬ್ಬರು ಮಹಾನ್ ನಾಯಕರು ಬುದ್ಧಿವಂತರೆ ಎಂದು ವ್ಯಂಗ್ಯವಾಡಿದರು.

ಈ ಹಿಂದೆ ಎಲ್.ಜಿ.ಹಾವನೂರ ವರದಿಯನ್ನು ಹಿಂದುಳಿದ ವರ್ಗಗಳ ನಾಯಕ ಮಾಜಿ ಮುಖ್ಯಮಂತ್ರಿ ದಿ.ಡಿ. ದೇವರಾಜ ಅರಸು ಅವರು ಜಾರಿಗೆ ತರುವಾಗ ಯಾವುದೇ ಒತ್ತಡಕ್ಕೂ ಜಗ್ಗಲಿಲ್ಲ. ಅದರ ಪರಿಣಾಮ ಅತ್ಯಂತ ಹಿಂದುಳಿದ ಜಾತಿಯವರು ಆರ್ಥಿಕ ಮತ್ತು ಶೈಕ್ಷಣಿಕವಾಗಿ ಮುಂದುವರೆಯಲು ಸಾಧ್ಯವಾಯಿತು ಎಂದರು.

ಮೈಸೂರು ಜಿಲ್ಲೆಯಿಂದ ಹುಣಸೂರು ಉಪವಿಭಾಗ ಬೇರ್ಪಡಿಸಿ ದಿ.ಡಿ.ದೇವರಾಜ ಅರಸು ಅವರ ಹೆಸರಿನಲ್ಲಿ ನೂತನ ಜಿಲ್ಲೆ ಘೋಷಣೆ ಮಾಡಲು ಈಗಾಗಲೇ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದ್ದು, ಯಾರು ಏನೇ ವಿರೋಧ ಮಾಡಿದರೂ ಹೊಸ ಜಿಲ್ಲೆ ಅಸ್ತಿತ್ವಕ್ಕೆ ಬರುವುದು ಶತಸಿದ್ಧ ಎಂದರು.

ಶಾಸಕ ಡಿ.ರವಿಶಂಕರ್ ಮಾತನಾಡಿ, ಸಮಾಜದಲ್ಲಿ ಹಿಂದುಳಿದ ವರ್ಗ ಮತ್ತು ಜಾತಿಯವರು ಗಟ್ಟಿಯಾಗಿ ನಿಲ್ಲಲು ಒಗ್ಗಟ್ಟು ಮತ್ತು ಸಂಘಟನೆ ಅವಶ್ಯಕ. ಅದನ್ನು ಮನಗಂಡು ಎಲ್ಲರೂ ಒಂದಾಗಿ ಕೆಲಸ ಮಾಡಬೇಕು ಎಂದರು.

ಸಮಾಜದ ಮುಖಂಡರ ಬಹುದಿನಗಳ ಬೇಡಿಕೆಯಾದ ಸಮುದಾಯ ಭವನ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಿ, ನಿವೇಶನ ಕೊಡಿಸುವ ಜೊತೆಗೆ ಸರ್ಕಾರದಿಂದ ಅಗತ್ಯ ಅನುದಾನ ಮತ್ತು ವೈಯಕ್ತಿಕ ಸಹಾಯ ನೀಡುವುದಾಗಿ ಭರವಸೆ ನೀಡಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್. ವಿಜಯ್, ವಾಣಿಜ್ಯ ಇಲಾಖೆ ನಿವೃತ್ತ ಅಪರ ಆಯುಕ್ತ ಡಿ.ಜಗನ್ನಾಥ್ ಸಾಗರ್, ಸಂಘದ ಅಧ್ಯಕ್ಷ ಮಹದೇವ್, ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಟಿ.ರಾಮೇಗೌಡ ಮಾತನಾಡಿದರು.

ತಾಲೂಕು ಉಪ್ಪಾರ ನೌಕರರ ಸಂಘದ ಅಧ್ಯಕ್ಷ ಹೆಚ್.ಟಿ.ಪಾಂಡು, ಸಂಘದ ಪದಾಧಿಕಾರಿಗಳಾದ ಎಸ್.ಯೋಗಾನಂದ, ಕುಮಾರ್, ಡಿ.ತಮ್ಮಯ್ಯ, ಯೋಗೀಶ್ ಕುಮಾರ್, ಟಿ.ರಾಮಕೃಷ್ಣ, ಸೋಮಣ್ಣ, ಮೋಹನ್, ಬಿ.ಕೆನಾಗಣ್ಣ ಸಂದೀಪ್, ಗೋವಿಂದೇಗೌಡ, ಮಂಜುನಾಥ್, ರವಿ ಮತ್ತಿತರರಿದ್ದರು.

ಪೂರ್ವಜರ ಬಳುವಳಿಯಾದ ಸಾಂಸ್ಕೃತಿಕ ಸಂಪತ್ತನ್ನು ಮುಂದಿನ ಪೀಳಿಗೆಗೂ ತಲುಪಿಸುವುದು ಅವಶ್ಯ

● ರಾಜವಂಶಸ್ಥ ಯದುವೀರ್ ಅಭಿಮತ ● ಹೆಜ್ಜೆ–ಗೆಜ್ಜೆ ರಾಷ್ಟ್ರೀಯ ನೃತ್ಯೋತ್ಸವ ಸಂಭ್ರಮ



ಮೈಸೂರಿನ ಶ್ರೀ ನಿಮಿಷಾಂಬ ಡ್ಯಾನ್ಸ್ ಪ್ರಮೋಟರ್ಸ್ ಸಂಸ್ಥೆಯ 26ನೇ ವರ್ಷದ 'ಹೆಜ್ಜೆ–ಗೆಜ್ಜೆ' ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಸಂಗೀತ ನಿರ್ದೇಶಕ ಗುರುಕಿರಣ್ ಅವರನ್ನು 'ಕನ್ನಡ ರತ್ನ' ಪ್ರಶಸ್ತಿಯೊಂದಿಗೆ ಅಭಿನಂದಿಸಲಾಯಿತು. ರಾಜವಂಶಸ್ಥ ಯದುವೀರ್ (ಮಧ್ಯ), ವಿದುಷಿ ಸೌಮ್ಯಾ ಜೈನ್ ಹಾಗೂ ವಿದ್ವಾನ್ ಶ್ರೀಧರ್ ಜೈನ್ ಚಿತ್ರದಲ್ಲಿದ್ದಾರೆ.



'ದೇವ–ದೇವಿ ವೈಭವ' ನೃತ್ಯರೂಪಕದ ದೃಶ್ಯವನ್ನು ಕಾಣಬಹುದು.

ಮೈಸೂರು, ಜ.28(ಎಸ್‌ಬಿಡಿ)– ಪೂರ್ವಜರ ಕೊಡುಗೆಯಾದ ಸಾಂಸ್ಕೃತಿಕ ಸಂಪತ್ತನ್ನು ಮುಂದಿನ ಪೀಳಿಗೆಗೆ ತಲುಪಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕೈಜೋಡಿಸುವ ಅಗತ್ಯವಿದೆ ಎಂದು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಆಶಿಸಿದರು.

ಮೈಸೂರಿನ ಶ್ರೀ ನಿಮಿಷಾಂಬ ಡ್ಯಾನ್ಸ್ ಪ್ರಮೋಟರ್ಸ್ ಸಂಸ್ಥೆ ವತಿಯಿಂದ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಶಿಕ್ಷಣ ಸಂಸ್ಥೆಯ ಅಮೃತ ಮಹೋತ್ಸವ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ 26ನೇ ವರ್ಷದ 'ಹೆಜ್ಜೆ–ಗೆಜ್ಜೆ' ರಾಷ್ಟ್ರೀಯ ನೃತ್ಯೋತ್ಸವವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಮೈಸೂರು ಸಂಸ್ಥಾನದ ಕಾಲದಿಂದಲೂ ಇಲ್ಲಿ ಕಲೆ, ಸಂಸ್ಕೃತಿ ಚಟುವಟಿಕೆಗಳು ಮುಂದುವರೆದಿರುವುದು ಸಂತಸದ ಸಂಗತಿ. ಬಾಲ್ಯದಲ್ಲಿ ವಾರಾಂತ್ಯ ರಜೆಗೆ ಮೈಸೂರಿಗೆ ಬಂದಾಗ ಲಕ್ಷ್ಮೀಪುರಂ ಹಾಗೂ ಸುತ್ತಮುತ್ತ ಒಂದಿಲ್ಲೊಂದು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಭಾಗಿಯಾಗುತ್ತಿದ್ದೆವು. ಇಂತಹ ವಿಶೇಷ ಆಕರ್ಷಣೆ ಮೈಸೂರಿಗಿದೆ ಎಂದು ಅಭಿಪ್ರಾಯಿಸಿದರು.

ಮೈಸೂರಿನ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ, ಬೆಳೆಸುವುದು ಸರ್ಕಾರ, ಅರಮನೆ, ಸಂಘ ಸಂಸ್ಥೆಗಳ ಜವಾಬ್ದಾರಿ ಮಾತ್ರವಲ್ಲ. ಇದಕ್ಕಾಗಿ ಪ್ರತಿಯೊಬ್ಬರೂ ಕೈಜೋಡಿಸಬೇಕು. ನಾವೆಲ್ಲಾ ಆಸ್ವಾಧಿಸುತ್ತಿರುವ ಸಾಂಸ್ಕೃತಿಕ ಸಂಪತ್ತನ್ನು ಎಲ್ಲರೂ ಜೊತೆಗೂಡಿ ಮುಂದಿನ ಪೀಳಿಗೆಗೆ ತಲುಪಿಸಬೇಕು. ಸಾಂಸ್ಕೃತಿಕ ನಗರಿ ಎಂಬ ಹಿರಿಮೆಯನ್ನು ಉಳಿಸಿಕೊಳ್ಳಬೇಕು. ಇಲ್ಲಿ ಸಂಭ್ರಮದ ವಾತಾವರಣ ಸದಾಕಾಲ ಇರಬೇಕು ಎಂದರು. ನಾವು ಅಯೋಧ್ಯೆಗೆ ಹೋಗಿ ಬಂದಿದ್ದೇವೆ. ದೇಶದಲ್ಲಿ ಒಳ್ಳೆಯ ವಾತಾವರಣವಿದೆ. ಭಾರತದ ಶ್ರೇಷ್ಠ ಪರಂಪರೆಗೆ ಕರ್ನಾಟಕದ ಕೊಡುಗೆ ಅಪಾರವಾಗಿದೆ. ಹಾಗಾಗಿ 'ಪ್ರತಿಯೊಬ್ಬ ಭಾರತೀಯ ಕನ್ನಡಿಗನಲ್ಲ, ಆದರೆ ಪ್ರತಿಯೊಬ್ಬ ಕನ್ನಡಿಗ ಭಾರತೀಯ' ಎಂದು ಪದೇ ಪದೆ ಹೇಳುತ್ತಿರುತ್ತೇನೆ. ಕಲೆ, ಸಂಸ್ಕೃತಿ ಸೇವೆಗೆ ನಮ್ಮ ಪ್ರೋತ್ಸಾಹ ಸದಾ ಇರುತ್ತದೆ ಎಂದು ಶ್ರೀ ನಿಮಿಷಾಂಬ ಡ್ಯಾನ್ಸ್ ಪ್ರಮೋಟರ್ಸ್ ಸಂಸ್ಥೆಯ ವಿದ್ವಾನ್ ಶ್ರೀಧರ್ ಜೈನ್ ಕಲಾಸೇವೆಯನ್ನು ಶ್ಲಾಘಿಸಿದರು.

ಸಾಧಕರಿಗೆ ಪ್ರಶಸ್ತಿ: ಸಮಾರಂಭದಲ್ಲಿ ಖ್ಯಾತ ಸಂಗೀತ ನಿರ್ದೇಶಕ ಗುರುಕಿರಣ್‌ಗೆ 'ಕನ್ನಡ ರತ್ನ', ವಿದ್ವಾನ್ ಸುಧೀರ್ ಹಾಗೂ ವಿದುಷಿ ಮಾನಸಿ ಸುಧೀರ್ ದಂಪತಿ, ಖ್ಯಾತ ಕಲಾವಿದ ಡಾ.ಸಂಜಯ್ ಶಾಂತಾರಾಂ ಹಾಗೂ ನಟ ದಿಲೀಪ್‌ರಾಜ್ ಹಾಗೂ ನಿರ್ಮಾಪಕಿ ವಿದ್ಯಾರಾಜ್ ದಂಪತಿಗೆ 'ಹೆಜ್ಜೆ–ಗೆಜ್ಜೆ' ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಲಾಯಿತು. ಇದೇ ವೇಳೆ ವಿವಿಧ ಕ್ಷೇತ್ರದಲ್ಲಿರುವ ಕಲಾ ಪೋಷಕರನ್ನು ಸನ್ಮಾನಿಸಲಾಯಿತು.

ಗುರು ಮೆಚ್ಚಿದ ಶಿಷ್ಯೆ: ಸಂಸ್ಥೆ ವತಿಯಿಂದ ಮೊದಲ ಬಾರಿಗೆ ಕೊಡಮಾಡಿದ 'ಗುರು ಮೆಚ್ಚಿದ ಶಿಷ್ಯ' ಪ್ರಶಸ್ತಿಗೆ ಆದ್ವಿಕಾ ಅಜಯ್ ಕುಮಾರ್ ಭಾಜನರಾದರು. ಯದುವೀರ್ ಅವರು ಪ್ರಶಸ್ತಿ ಶೀರ್ಷಿಕೆ ಹಾಗೂ ಮೊದಲ ವಿಜೇತರ ಹೆಸರನ್ನು ಘೋಷಣೆ ಮಾಡಿದರು. ಪ್ರತಿವರ್ಷ ಹೆಜ್ಜೆ–ಗೆಜ್ಜೆ ಸಂಭ್ರಮದಲ್ಲಿ ಉತ್ತಮ ವಿದ್ಯಾರ್ಥಿಗೆ ಈ ಪ್ರಶಸ್ತಿ ನೀಡುವುದಾಗಿ ವಿದ್ವಾನ್ ಶ್ರೀಧರ್ ಜೈನ್ ತಿಳಿಸಿದರು.

ದೇವ–ದೇವಿ ವೈಭವ: ಹೆಜ್ಜೆ–ಗೆಜ್ಜೆ ಸಂಭ್ರಮದಲ್ಲಿ ಪ್ರಸ್ತುತಗೊಂಡ 'ದೇವ–ದೇವಿ ವೈಭವ' ವಿಶಿಷ್ಟ ನೃತ್ಯ ರೂಪಕ ನೆರೆದಿದ್ದವರನ್ನು ಮಂತ್ರಮುಗ್ಧಗೊಳಿಸಿತು. ಸಂಸ್ಥೆಯ ನಿರ್ದೇಶಕರಾದ ವಿದ್ವಾನ್ ಶ್ರೀಧರ್ ಜೈನ್ ಹಾಗೂ ವಿದುಷಿ ಸೌಮ್ಯ ಜೈನ್ ದಂಪತಿಯೊಂದಿಗೆ ಸುಮಾರು 350 ಕಲಾವಿದರು ಗಂಟೆ ಕಾಲ ನೃತ್ಯ ಪ್ರದರ್ಶಿಸುವ ಮೂಲಕ ಭಾರತೀಯ ಸಂಸ್ಕೃತಿಯನ್ನು ಕಣ್ಣಿಗೆ ಕಟ್ಟಿದರು.

ಬಾಲರಾಮನ ಶಿಲ್ಪಿ ಅರುಣ್ ಯೋಗಿರಾಜ್ ಅಭಿನಂದಿಸಿದ ರಾಜ್ಯಪಾಲರು



ಅಯೋಧ್ಯೆಯಲ್ಲಿ ಪ್ರತಿಷ್ಠಾಪಿತ ಬಾಲರಾಮನ ಕೆತ್ತನೆ ಮೂಲಕ ಖ್ಯಾತನಾಮರಾದ ಅರುಣ್ ಯೋಗಿರಾಜ್ ಅವರನ್ನು ಬೆಂಗಳೂರಿನ ರಾಜಭವನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಸನ್ಮಾನಿಸಿದರು.

ಮೈಸೂರು,ಜ.28(ಪಿಎಂ)– ಅಯೋಧ್ಯೆ ಶ್ರೀರಾಮ ಮಂದಿರದ ಗರ್ಭಗುಡಿಯ ಬಲರಾಮ ವಿಗ್ರಹದ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಸನ್ಮಾನಿಸಿದರು.

ಬೆಂಗಳೂರಿನ ರಾಜಭವನದಲ್ಲಿ ನಡೆದ ಸುಂದರ ಸಮಾರಂಭದಲ್ಲಿ ಅದ್ಭುತ ಬಲರಾಮನ ವಿಗ್ರಹ ಕೆತ್ತನೆ ಮೂಲಕ ಖ್ಯಾತನಾಮರಾದ ಅರುಣ್ ಯೋಗಿರಾಜ್ ಅವರನ್ನು, ರಾಜ್ಯಪಾಲರು ಹೃತ್ಪೂರ್ವಕವಾಗಿ ಅಭಿನಂದಿಸಿದರು.

ಇದೇ ವೇಳೆ ಬಾಲರಾಮನ ವಿಗ್ರಹ ಕೆತ್ತನೆಯಲ್ಲಿ ತಾವು ಸಮರ್ಪಣಾಭಾವದಲ್ಲಿ ತೊಡಗಿಸಿಕೊಂಡಿದ್ದರ ಬಗ್ಗೆ ಅರುಣ್ ಯೋಗಿರಾಜ್, ರಾಜ್ಯಪಾಲರೊಂದಿಗೆ ಹಂಚಿಕೊಂಡರು. ಬಲರಾಮನ ವಿಗ್ರಹ ಕೆತ್ತನೆಯಲ್ಲಿ ತಮಗೆ ಇದ್ದ ಸವಾಲುಗಳು ಹಾಗೂ ನಡೆಸಿದ ಅಧ್ಯಯನಗಳನ್ನು ಅರುಣ್ ಯೋಗಿರಾಜ್, ರಾಜ್ಯಪಾಲರಲ್ಲಿ ವಿವರಿಸಿದರು.

ನಂತರ ಅಲ್ಲೇ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ಭೇಟಿಯಾಗುವ ಅವಕಾಶವೂ ಅರುಣ್ ಯೋಗಿರಾಜ್ ಅವರಿಗೆ ದೊರೆಯಿತು. ನಮ್ಮ ಸಾಂಸ್ಕೃತಿಕ ವೈಭವಕ್ಕೆ ಅರುಣ್ ಯೋಗಿರಾಜ್ ಅದ್ಭುತ ಕೊಡುಗೆ ನೀಡಿದ್ದಾರೆ. ನಮ್ಮ ಪರಂಪರೆ ಸಂರಕ್ಷಿಸುವ ಹಾಗೂ ಆಚರಿಸುವ ನಿಟ್ಟಿನಲ್ಲಿ ಅವರು ಮಹತ್ವದ ಪಾತ್ರ ವಹಿಸಿದ್ದಾರೆ ಎಂದು ಮಾಜಿ ರಾಷ್ಟ್ರಪತಿ ಕೋವಿಂದ್ ಶ್ಲಾಘಿಸಿದರು.

ಇದೇ ಸಂದರ್ಭದಲ್ಲಿ ಅರುಣ್ ಯೋಗಿರಾಜ್ ಅವರ ಪತ್ನಿ ವಿಜೇತಾ ಹಾಗೂ ಅವರ ಮಕ್ಕಳು ಹಾಜರಿದ್ದರು. ಕರಕುಶಲತೆಯಲ್ಲಿ ಅರುಣ್ ಯೋಗಿರಾಜ್ ಹೊಂದಿರುವ ಸಮರ್ಪಣಾಭಾವ ಅಭಿನಂದನಾರ್ಹ. ಭವ್ಯವಾದ ಬಲರಾಮನ ವಿಗ್ರಹ ಕೆತ್ತನೆ ಹಿನ್ನೆಲೆಯಲ್ಲಿ ಅವರು ಗಣ್ಯರಿಂದ ಮೆಚ್ಚುಗೆಗೆ ಪಾತ್ರರಾಗುತ್ತಿದ್ದಾರೆ.

ಬಿಜೆಪಿಯಿಂದ ಲೋಕಸಭಾ ಕ್ಷೇತ್ರಗಳ ಉಸ್ತುವಾರಿ, ಸಂಚಾಲಕರ ನೇಮಕ

ಬೆಂಗಳೂರು, ಜ. 28– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯದ ಎಲ್ಲಾ 28 ಕ್ಷೇತ್ರಗಳಿಗೂ ಉಸ್ತುವಾರಿಗಳು ಹಾಗೂ ಸಂಚಾಲಕರನ್ನು ನೇಮಿಸಿದೆ.

ಮೈಸೂರು ಕ್ಷೇತ್ರದ ಉಸ್ತುವಾರಿಯನ್ನು ಮಾಜಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ವಹಿಸಿದ್ದು, ಸಂಚಾಲಕರಾಗಿ ಮೈ.ವಿ. ರವಿಶಂಕರ್‌ಮತ್ತು ಕೊಡಗಿನ ರಾಬಿನ್ ದೇವಯ್ಯ ಅವರನ್ನು ನೇಮಿಸಲಾಗಿದೆ. ಚಾಮರಾಜನಗರ ಕ್ಷೇತ್ರದ ಉಸ್ತುವಾರಿಯಾಗಿ ಎನ್.ವಿ. ಫಣೀಶ್, ಸಂಚಾಲಕರಾಗಿ ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ. ಮಲ್ಲಿಕಾರ್ಜುನಪ್ಪ, ಮಂಡ್ಯ ಉಸ್ತುವಾರಿಯಾಗಿ ಕೊಡಗಿನ ಸುನಿಲ್ ಸುಬ್ರಮಣಿ, ಸಂಚಾಲಕರಾಗಿ ಸಿ.ಪಿ. ಉಮೇಶ್, ಹಾಸನ ಉಸ್ತುವಾರಿಯಾಗಿ ಎಂ.ಕೆ. ಪ್ರಾಣೇಶ್, ಸಂಚಾಲಕರಾಗಿ ಪ್ರಸನ್ನ ಅವರನ್ನು ನೇಮಕ ಮಾಡಲಾಗಿದೆ.

ರಂಗಭೂಮಿ ಪೂರಕ ಕಲೆಗಳ ಉಪನ್ಯಾಸ ಮಾಲಿಕೆ

ಮೈಸೂರು, ಜ. 28– ರಂಗಾಯಣವು ಶ್ರೀ ಗುಬ್ಬಿ ವೀರಣ್ಣ ಅಧ್ಯಯನ ಪೀಠ ಮತ್ತು ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸಹಯೋಗದಲ್ಲಿ ರಂಗಭೂಮಿ ಪೂರಕ ಕಲೆಗಳ ಉಪನ್ಯಾಸ ಮಾಲಿಕೆಯನ್ನು ಫೆ. 2 ರಿಂದ 9 ರವರೆಗೆ ಸಂಜೆ 5ರಿಂದ 7 ರವರೆಗೆ ರಂಗಾಯಣದ ಆವರಣದಲ್ಲಿ ಆಯೋಜಿಸಲಾಗಿದೆ.

ಚಿತ್ರಕಲೆ, ನೃತ್ಯಕಲೆ, ಸಾಹಿತ್ಯ, ಜನಪದ, ಚಲನಚಿತ್ರ, ಸಂಗೀತ, ಸೌಂದರ್ಯಪ್ರಜ್ಞೆ ಮತ್ತು ಅನ್ವಯಿಕ ರಂಗಭೂಮಿ ಕುರಿತಾದ ಉಪನ್ಯಾಸವನ್ನು ನಾಡಿನ ವಿಷಯ ತಜ್ಞರಿಂದ ಏರ್ಪಡಿಸಲಾಗಿದೆ. ಈ ಸರಣಿ ಉಪನ್ಯಾಸ ಮಾಲೆಯಲ್ಲಿ ಭಾಗವಹಿಸಲಿಚ್ಛಿಸುವ ಆಸಕ್ತರು 500 ರೂ.ಗಳ ಪ್ರವೇಶ ಶುಲ್ಕವನ್ನು ಪಾವತಿಸಿ, ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಆಸಕ್ತರು ಜ. 30 ರೊಳಗೆ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ ಮೊ. 9148827720, 9448938661 ಅನ್ನು ಸಂಪರ್ಕಿಸಬಹುದು.

ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರರಿಗೆ ಅಭಿನಂದನೆ



ಮೈಸೂರು, ಜ.28(ಎಸ್‌ಪಿಎನ್)– ಮೈಸೂರು ಕೆ.ಜಿ.ಕೊಪ್ಪಲಿನ ಶ್ರೀ ಮರಳೇಶ್ವರ ದೇವಸ್ಥಾನ ಆವರಣದಲ್ಲಿ ನೂತನ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಅವರನ್ನು ಧರ್ಮದರ್ಶಿ ಸಮಿತಿ ಸದಸ್ಯರು ಭಾನುವಾರ ಸನ್ಮಾನಿಸಿದರು.

ಧರ್ಮದರ್ಶಿ ಸಮಿತಿ ಅಧ್ಯಕ್ಷ ಮಹದೇವಯ್ಯ ಮಾತನಾಡಿ, ಮಾಜಿ ಶಾಸಕ ಎಲ್.ನಾಗೇಂದ್ರ ಅವರು, ಬಿಜೆಪಿಯಿಂದ ನಗರ ಪಾಲಿಕೆ ಸದಸ್ಯರಾಗಿ, ಚಾಮರಾಜ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿದ್ದರು. ಇವರಿಗೆ ಸಿಕ್ಕ ಅವಕಾಶದಲ್ಲಿ ಜನಪರ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮತ್ತೆ ಇವರ ಸೇವೆಯನ್ನು ಗುರುತಿಸಿ ಬಿಜೆಪಿ ಪಕ್ಷ ಮೈಸೂರು ನಗರಾಧ್ಯಕ್ಷರಾಗಿ ಆಯ್ಕೆ ಮಾಡಿರುವುದು ಸಂತಸದ ವಿಚಾರ. ಅಲ್ಲದೆ, ನಾಗೇಂದ್ರ ಮರಳೇಶ್ವರ ದೇವಸ್ಥಾನ ಧರ್ಮದರ್ಶಿ ಮಂಡಳಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಎಲ್.ನಾಗೇಂದ್ರ ಅವರನ್ನು ಸನ್ಮಾನಿಸಲಾಗುತ್ತಿದೆ ಎಂದರು.

ಈ ವೇಳೆ ಧರ್ಮದರ್ಶಿ ಮಂಡಳಿ ಕಾರ್ಯದರ್ಶಿ ಪ್ರೊ.ರಂಗಯ್ಯ, ಖಜಾಂಚಿ ಮಹದೇವಪ್ಪ, ಧರ್ಮದರ್ಶಿಗಳಾದ ನಟ ಸೋಮಣ್ಣ, ನಂಜುಂಡಸ್ವಾಮಿ, ಆರ್. ಶಿವಲಿಂಗು, ಲಿಂಗಪ್ಪ, ಶಿವಲಿಂಗು ಸೇರಿದಂತೆ ಇತರೆ ಮುಖಂಡರಿದ್ದರು.